UNIVERSAL LIBRARY
OU_200299
UNIVERSAL LIBRARY

ಮನೋಹರ ಗ್ರಂಥಮಾಲೆಯ ೫೩ನೆಯ ಕುಸುಮ

# ಭರಮಪ್ಪನ ಭೂತ

( ರಹಸ್ಯಾತ್ಮಕ ರಮ್ಯ ಕಾದಂಬರಿ )

ಬರೆದವರು:

ಶ್ರೀರಂಗ

ಮೇ ೧೯೪೨ ಬೆಲೆ ೦-೧೪-೦

ಮನೋಹರ ಗ್ರಂಥ ಪ್ರಕಾಶನ ಸಮಿತಿ

ಧಾರವಾಡ

ಸಾಹಿತ್ಯ ವಿಷಯದಲ್ಲಿ ಸಲಹೆಗಾರರು:

ಶ್ರೀ. ದ. ರಾ ಬೇಂದ್ರೆ, ಎಂ. ಎ.

ಶ್ರೀ. ರಂ. ಶ್ರೀ. ಮುಗಳಿ, ಎಂ. ಎ., ಬಿ. ಟಿ.

ಶ್ರೀ. ವಿ. ಕೃ. ಗೋಕಾಕ, ಬಿ. ಎ. ( ಆಕ್ಸಫರ್ಡ )

ಸಂಪಾದಕ:

ಜಿ. ಬಿ. ಜೋಶಿ

ಪ್ರಕಾಶಕರು:
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲಾ
ಧಾರವಾಡ

ಮುದ್ರಕರು:
ಕೆ. ಜಿ. ರಾಯದುರ್ಗ
ಮೋಹನ ಮುದ್ರಣಾಲಯ
ಧಾರವಾಡ

# ನಮ್ಮ ಮಾತು

●

“ ಮರಳಿ ಮಣ್ಣಿಗೆ ” ಕಾದಂಬರಿಯ ಕೊನೆಯ ಭಾಗದಲ್ಲಿ ಪ್ರಕಟಿಸಿದಂತೆ ನಾವು ಇದೀಗ “ ಭರಮಪ್ಪನ ಭೂತ ” ವೆಂಬ ರಹಸ್ಯಾತ್ಮಕ ರಮ್ಯ ಕಾದಂಬರಿಯನ್ನು ನಮ್ಮ ಓದುಗರಿಗೆ ಕೊಡಲು ಸಂತೋಷಿಸುತ್ತೇವೆ.

ತೀರ ಸ್ವತಂತ್ರವಾಗಿ ಬರೆದ ರಹಸ್ಯಾತ್ಮಕ ಕಾದಂಬರಿಗಳೇ ನಮ್ಮಲ್ಲಿ ಕಡಿಮೆ. ಇಂತಹದೊಂದು ಕಾದಂಬರಿಯನ್ನು ಪ್ರಕಟಿಸಬೇಕೆಂದು ಬಹಳ ದಿನಗಳಿಂದಲೂ ನಮ್ಮ ಮನೀಷೆ ಇತ್ತು. ಈಗ ಈ ಕಾದಂಬರಿಯನ್ನು ಬರೆದುಕೊಟ್ಟುದಕ್ಕಾಗಿ ಶ್ರೀ ಶ್ರೀರಂಗರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಮುಖಪತ್ರದ ಮೇಲಿನ ರಹಸ್ಯಪೂರ್ಣವಾದ ಚಿತ್ರವನ್ನು ಶ್ರೀ ರಾಘವೇಂದ್ರರು ತೆಗೆದುಕೊಟ್ಟುದಕ್ಕಾಗಿ ಅವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ. ಶ್ರೀ ನೆರಂಗರು ಅಚ್ಚಿನ ಕರಡುಗಳನ್ನು ನೋಡಿಕೊಟ್ಟು ನಮ್ಮ ಕಾರ್ಯದಲ್ಲಿ ನೆರವಾದುದಕ್ಕಾಗಿ ಅವರ ಉಪಕಾರವನ್ನು ಇಲ್ಲಿ ಸ್ಮರಿಸುತ್ತೇವೆ.

ನಮ್ಮ ಮಾಲೆಯ ಸಾಹಿತ್ಯೋತ್ಸವದ ಕಾಲದಲ್ಲಿ ಪ್ರಕಟಿಸಲು ಅನುವಾಗುವಂತೆ ಕೇವಲ ೬ ದಿನಗಳಲ್ಲಿ ಈ ಪುಸ್ತಕದ ಅಚ್ಚಿನ ಕೆಲಸವನ್ನು ಮುಗಿಸಿದುದಕ್ಕಾಗಿ ನಾವು ಶ್ರೀ ರಾಯದುರ್ಗರಿಗೆ ಕೃತಜ್ಞರಾಗಿದ್ದೇವೆ.

—ಸಂಪಾದಕ

# ಕವಿಮಾತು

ಇಂತಹದೊಂದು ಗ್ರಂಥವನ್ನು ಬರೆಯಬೇಕೆಂದು 'ಮನೋಹರ ಗ್ರಂಥಮಾಲೆ'ಯ ಸಂಚಾಲಕರು ಕಳೆದ ೩-೪ ವರ್ಷಗಳಿಂದ ಭೂತದಂತೆಯೆ ನನ್ನ ಬೆನ್ನು ಹತ್ತಿದ್ದರು. ಇಂಗ್ಲಿಶದಲ್ಲಿ ಬರೆದ ಈ ಮಾದರಿಯ ಡಿಟೆಕ್‌ಟಿವ್ ಕತೆಗಳನ್ನು ನೂರಕ್ಕೆ ಮಿಕ್ಕಿ ನಾನು ಓದಿದ್ದೇನೆ, ಓದುತ್ತಲಿದ್ದೇನೆ. ನಾನು ಯಾವುದಾದರೊಂದು ಸ್ವತಂತ್ರ ಗ್ರಂಥವನ್ನಾಗಲಿ, ನಾಟಕವನ್ನಾಗಲಿ ಬರೆಯುವಾಗಲಂತೂ ಕೈಬೆರಳಿನ ನೋವು ಕಡಮೆಯಾಗುವ ವರೆಗೆ ತಪ್ಪದೆ ಇಂತಹ ಕಟ್ಟುಕತೆಗಳನ್ನು ಓದುತ್ತಿರುವೆ. ಇಷ್ಟೊಂದು ಓದಿದ್ದರಿಂದ ನನಗೆ ಅಂತಹದೆ ಕನ್ನಡದಲ್ಲಿ ಬರೆಯುವುದು ಶಕ್ಯ ಎಂದು ಶ್ರೀ. ಜಿ. ಬಿ. ಜೋಶಿ ಅವರ ಕಲ್ಪನೆ. ಆದರೆ ಓದುವಾಗ ಸ್ಮರಣೆಯಲ್ಲುಳಿದು ನನ್ನ ವಿಚಾರಗಳಿಗೆ ತಡೆಯುಂಟಾಗಬಾರದೆಂದೇ ಇಂತಹ ಗ್ರಂಥಗಳ ಚಟವನ್ನು ನಾನು ಇಟ್ಟುಕೊಂಡಾಗ ಶ್ರೀ. ಜೋಶಿಯವರ ಕಲ್ಪನೆ ಸರಿಯೆನಿಸುವುದು ಹೇಗೆ? ಸದ್ಯಕ್ಕೆ ನನ್ನ ಮನಸ್ಸಿಗೂ ಒಂದು ತರದ ಬಿಡುವು ಬೇಕಾದುದರಿಂದ ಗ್ರಂಥಮಾಲೆಯ ಸಂಚಾಲಕರ ತೊಂದರೆಯನ್ನು ತಪ್ಪಿಸುವ ಹಂಚಿಕೆ ಹಾಕಿದೆ, ಈ ಗ್ರಂಥವನ್ನು ಬರೆದೆ. ಇಂಗ್ಲಿಶ್ ಡಿಟೆಕ್‌ಟಿವ್ ಕಾದಂಬರಿಗಳನ್ನೋದುವವರಿಗೆ ಇದು ಎಷ್ಟರ ಮಟ್ಟಿಗೆ ರುಚಿಸೀತೆಂಬ ಕಲ್ಪನೆ ನನಗಿಲ್ಲ. ಕನ್ನಡದಲ್ಲಿ ಸಮರ್ಪಕವಾದ ಶೈಲಿಯಲ್ಲಿ ಯಾರೂ ಬರೆದಿಲ್ಲ ಇದುವರೆಗೆ, ಎಂದು ಸಂಚಾಲಕರು ಹೆಮ್ಮೆಪಟ್ಟರೆ ಆ ಹೆಮ್ಮೆಯಲ್ಲಿ ನಾನೂ ಪಾಲುಗಾರನಾಗಬಹುದಲ್ಲವೆ? ಮೊದಲಿಗನೆಂಬ ಹೆಮ್ಮೆಯ ಜೊತೆಗೆ ಮೊದಲ ಪ್ರಯತ್ನಕ್ಕೆ ಅನಿವಾರ್ಯವಾದ ಕುಂದು-ಕೊರತೆಗಳ ಕಲ್ಪನೆಯೂ ನನಗಿದೆ. ಆದರೆ ನಾನಾಗಿಯೆ ಇಂತಹ ಗ್ರಂಥಗಳನ್ನು ಓದಿ ಮರೆಯಬೇಬೇಕೆಂಬ ಧ್ಯೇಯವನ್ನಿಟ್ಟುಕೊಂಡಾಗ ನನ್ನ ವಾಚಕರೂ ನನ್ನ ಗ್ರಂಥದ ಬಗ್ಗೆ ಅಂತಹ ಧ್ಯೇಯವನ್ನೆ ಇಟ್ಟುಕೊಳ್ಳಬಾರದೇಕೆ? ಇಟ್ಟರೆ ನನಗೆ ಸಂತೋಷ, ಬಿಟ್ಟರೆ ಸಂಚಾಲಕರಿಗೆ ಸಂಪತ್ತು!

—ಶ್ರೀರಂಗ

# ಭರಮಪ್ಪನ ಭೂತ

—❖—

## ೧ ಭರಮಪ್ಪ

ಧಾಗಳ್ಳಿಯು ತೀರ ಆಧುನಿಕ ಶಾಸ್ತ್ರೀಯ ಸರ್ವ ವಿಧಾನಗಳಿಂದ ಸಜ್ಜುಗೊಂಡ ನಗರವು. ಅದಕಾಗಿ ಸೃಷ್ಟಿದೇವತೆಯ ಸರ್ಗಶಕ್ತಿಯ ಪ್ರತಿಧ್ವನಿ ಅಲ್ಲಿ ಕಂಡುಬಂದರೆ ಆಶ್ಚರ್ಯವಿಲ್ಲ. ಉದಾಹರಣೆಗಾಗಿ ಒಂದೆರಡು ಮಾತುಗಳನ್ನು ಕಾಣಿಸಬಹುದು. ಹಾವುಗಳಿದ್ದಲ್ಲಿ ಮುಂಗಲಿಗಳಿರುವುದು ಸೃಷ್ಟಿಕ್ರಮದಲ್ಲಿ ಒಂದು ನಿಯಮ; ತೊಂದರೆ ಇದ್ದಲ್ಲಿ ತಾರಣೆ. ಅದರಂತೆಯೆ ಧಾಗಳ್ಳಿಯಲ್ಲಿ. ಒಂದು ಕಡೆ ಅಜೀರ್ಣವಾಗುವಂತಹ ಐಸಿರಿ, ಇನ್ನೊಂದು ಕಡೆ ಹಸಿದ ಹೊಟ್ಟೆಯ ಬಡತನ. ಒಂದಕ್ಕೊಂದು ಹಾವು–ಮುಂಗಲಿಗಳಂತೆ. ಇಷ್ಟೇಕೆ? ಒಂದು ರೀತಿಯಲ್ಲಿ ಧಾಗಳ್ಳಿಯು ಸೃಷ್ಟಿಗಿಂತಲೂ ಮುಂಬರಿದಿದೆ. ಪರಸ್ಪರ ವಿರೋಧ ತತ್ತ್ವವು ಧಾಗಳ್ಳಿಯ ಜೀವಾಳವಾಗಿದೆ. ನಗರ ಎಂಬುದು ನಿವಾಸದ ಸ್ಥಳವೆಂದು ರೂಢಿಯಲ್ಲವೆ? ಆದರೆ ಧಾಗಳ್ಳಿಯ ನಗರ ಭಾಗವೆ ನಿವಾಸಕ್ಕೆ ತೀರ ಅಯೋಗ್ಯವಾಗಿದ್ದು ನಗರದ ಸುತ್ತುಮುತ್ತಲು ಸುಂದರವಾಗಿದೆ, ಆರೋಗ್ಯವಾಗಿದೆ. ಅಂತೂ ಅನೇಕ ಪರಸ್ಪರ ವಿರೋಧಕ ಗುಣಗಳಲ್ಲಿ ಒಂದು ಸದ್ಯಕ್ಕೆ ಮಹತ್ತ್ವದ್ದಾಗಿದೆ. ಅದೆಂದರೆ, ಭವಾನಿಯೂ ಭರಮಪ್ಪನೂ ಆದೇ ಊರಲ್ಲಿ ಕೂಡಿದ್ದು. ಭವಾನಿ ತರುಣನು, ಲೆಕ್ಕವಿಲ್ಲದಷ್ಟು ಧನವಂತನು, 'ಬಡ್ಡಿವ್ಯವಹಾರದ ಭವಾನಿ' ಎಂಬುದು ಅವನಿಗೆ ದೊರೆತ ಪೂರ್ತಿಯಾದ ಹೆಸರು; ಭರಮಪ್ಪನು ಮಧ್ಯವಯಸ್ಕನು, ತಡೆಯದಷ್ಟು ಬಡವನು, ಸಂಸಾರದಲ್ಲಿ 'ಸಾಕುಗೇಡಿ' ಎಂಬುದು ಅವನು ತನಗಿಟ್ಟುಕೊಂಡ ಹೆಸರು.

'ಭರಮಪ್ಪನ ಭೂತ' ಎಂಬ ಗಾದೆಗೆ ಇವರಿಬ್ಬರೂ ಹೀಗೆ ಕೂಡಿ ಒಂದುದೆ ಮೊದಲ ಕಾರಣವಾಯಿತು. ಇಬ್ಬರೂ ನಿರುದ್ಯೋಗಿಗಳು; ಭವಾನಿಗೆ ಉದ್ಯೋಗ ಬೇಡುವಂತಿಲ್ಲ, ಭರಮಪ್ಪನು ಬೇಡಿದರೂ ಉದ್ಯೋಗವಿಲ್ಲ. ಇಬ್ಬರೂ ಸಂನ್ಯಾಸಿಗಳು; ಭವಾನಿಗೆ ಸಂಸಾರದ ಅಗತ್ಯವಿರಲಿಲ್ಲ, ಭರಮಪ್ಪನಿಗೆ ಸಂಸಾರದ ಯೋಗ್ಯತೆ ಇರಲಿಲ್ಲ. ಇಬ್ಬರು ಕೂಡಿದರೆ ಸೂರ್ಯ-ಚಂದ್ರರಂತೆ. ಒಬ್ಬನ ತೇಜಸ್ಸು ಇನ್ನೊಬ್ಬನಿಗೆ ಸಾಲ; ಆದರೂ ಸಾಲ ಕೊಡುವವನ ತೇಜಸ್ಸೇ ಪ್ರಖರವಾಗುವುದು. ನಿಜವಿದ್ದ ಮಾತೆಂದರೆ, ಹೆಂಡಿರು-ಮಕ್ಕಳ ಗೋಳನ್ನು ನೋಡದೆ ಎಲ್ಲಿಯಾದರೂ ಕೂಲಿ ಕೆಲಸವನ್ನು ದೊರಕಿಸುವ ದಿಗ್ವಿಜಯಕ್ಕೆ ಸವಾರಿಯಂಗೈದು ಭರಮಪ್ಪನು ಧಾಗಳ್ಳಿಗೆ ಒಂದಿದ್ದನು. ಧಾಗಳ್ಳಿಯ ಧನವಂತ ಭವಾನಿಯ ಹೆಸರನ್ನು ಕೂಡ ಕೇಳಿರಲಿಲ್ಲ. ಇಷ್ಟೇಕೆ? ಭವಾನಿಯು ಒಂದು ಕಣ್ಣೆವೆ ಹಾರುವುದನ್ನು ಕೂಡ ಭರಮಪ್ಪನು ಕಾಣಲಿಲ್ಲ. ಆದರೂ ಭವಾನಿ-ಭರಮಪ್ಪರ ಸಂಬಂಧ ಅತ್ಯಂತ ನಿಕಟವಾದದ್ದೆಂದು ಹೇಳಲೇ ಬೇಕಾಗುವುದು.

ಇವರಿಬ್ಬರ ಸಂಬಂಧ ಕೂಡಿ ಬಂದದ್ದು ಒಂದೇ ಮನೆಯಲ್ಲಿ. ಧಾಗಳ್ಳಿಯಿಂದ ತುಸು ದೂರದಲ್ಲಿ ಒಂದೇ ಒಂದಾಗಿ ವೈರಾಗ್ಯಶಾಲಿಯಂತೆ ವೈಭವದಿಂದ ನಿಂತಿದೆ ಈ ಮನೆ. ಭರಮಪ್ಪನು ಇಲ್ಲಿ ಮೊದಲು ಕಾಲಿಟ್ಟಾಗ ಶೂನ್ಯವಾಗಿದ್ದಿತು ಈ ಮನೆ. ದಾರಿ ನಡೆದು ನಡೆದು ದಣಿದ ಭರಮಪ್ಪನಿಗೆ ಹೊರ ಕಟ್ಟೆಯಲ್ಲಿ ತುಂಬಿದ್ದ ದೂಳಿನ ಪರಿಯೆ ಮೆತ್ತನ್ನ ಹಾಸುಗೆಯಾಯಿತು. ಭರಮನಿಗೆ ಬೇಗ ನಿದ್ರೆ ಬರಲಿಲ್ಲ. 'ಹುಳಕ್ಕ ಸಹಿತ ನನ್ನ ಮ್ಯಾಗ ಈಟೊಂದು ದಯಾ ಐತಿ, ಮನಸ್ಯಾರಿಗಿಲ್ಲ' ಎನ್ನುತ್ತ ಹರಕ ಗೊಂಗಡಿಯಿಂದ ಮುಖವನ್ನು ಮುಚ್ಚಿಕೊಂಡನು. ಆದರೂ ನಿದ್ರೆ ಬರಲಿಲ್ಲ. ಒಮ್ಮೆ ಒಳಗೆ ಬಾಗಿಲ ತೆರೆದ ಸಪ್ಪಳಾಯಿತು. 'ನಮ್ಮದೇ ಪ್ರೈವಾಟಿ ಹಕ್ಕ ಬಜಾಯಿಸಬೇಕು ಅಂದ್ರ ಯಾರೊ ಇದ್ದಾಂಗ ಕಾಣ್ತೈತಿ ಅಲ್ಲ' ಎಂದು ಎದ್ದು ಕುಳಿತನು. ಮುಂದೆ ಎಷ್ಟೊತ್ತು ಕಾದರೂ ದೀಪವಾಗಲಿ ಬೇರೆ ಸುಳಿವಾಗಲಿ ಕಾಣಲಿಲ್ಲ. 'ನನ್ನ ಹೊಟ್ಟೆಹಾಂಗ ಬರೇ ಗಾಳಿ ತುಂಬೇತಿ ಕಾಣ್ತದ ಈ ಮನೇವಳಗ' ಎಂದು ಮತ್ತೆ ಒರಗಿಕೊಂಡ. ಆದರೂ ನಿದ್ರೆ ಬರಲಿಲ್ಲ. ಯಾರದೊ ಕಾಲ ಸದ್ದು ಕೇಳಿದಂತಾಯಿತು. ಒಂದು ಸಲ ಯಾರೊ ಪಿಸಿಪಿಸಿ ಮಾತನಾಡುವಂತೆ

ಕೇಳಿಸಿತು. ಭರಮಪ್ಪನು ಕೆವಿಮ್ಕೃ ನೋಡೋಣ ಎಂದನು. ಮರುಗಳಿಗೆ ವಿಚಾರ ಬಂದಿತು. ಪಾಪ! ಯಾರಾದರೂ ಕಳ್ಳರಿರಬಹುದು. ಕೆವಿಮ್ಕೃ ತನ್ನ ಇರವನ್ನು ತೋರಿಸಿಕೊಟ್ಟರೆ ತನಗಾಗಿಯೆ ಅವರು ಸಂಚು ಹಾಕಿ ಅಂದಿನ ಗಳಿಕೆಯನ್ನು ಕಳೆದುಕೊಳ್ಳಬಹುದು. ಈ ಕನಿಕರದ ಸ್ಥಿತಿಯಲ್ಲಿಯೆ ದಣಿದ ಅವನು ನಿದ್ರೆ ಹೋದನು. ಎದ್ದಾಗ ತನಗೆ ನಿದ್ರೆ ಹತ್ತಿತ್ತೆಂಬುದು ಕೂಡ ಅವನಿಗೆ ಗೊತ್ತಿರಲಿಲ್ಲ.

ಮೊದಲಿನ ಮೂರು ದಿನ ಭರಮಪ್ಪನ ಜೀವನ ಹೀಗೆಯೆ ಸಾಗಿತು. ಬೆಳಗಿನಿಂದ ಸಂಜೆಯ ವರೆಗೆ ಊರೊಳಗೆ ತಿರುಗಾಡಿ ತಗ್ಗನ್ನು ತುಂಬಿಯೊ-ಹುಲ್ಲುಕಂಟಿಯನ್ನು ಕಡಿದೊ-ಮನಸಿಗೆ ತೋಚಿದ ಕೆಲಸವನ್ನು ಸೂಚಿಸಿ, ಮಾಡಿ, ತುಣುಕೆರಡು ತುಣುಕು ರೊಟ್ಟಿ ಸಿಕ್ಕಷ್ಟು ತಿಂದು ತಿರುಗಾಡಿ ದಣಿದು ಸೋತು ಊರ ಹೊರಗಿನ ಏಕಾಂತ ಮನೆಗೆ ಮರಳಿ ಬರುವುದು, ಒರಗಿದಲ್ಲಿ ನಿದ್ರೆ ಹೋಗುವುದು ಒಮ್ಮೆ ಮನೆಯ ಒಳದಾರಿ ನುಗ್ಗುವಾಗ ದಾರಿಕಾರನೊಬ್ಬನು ಭರಮನನ್ನು ಅತ್ಯಂತ ಆಶ್ಚರ್ಯದಿಂದ ದಿಟ್ಟಿಸಿದನು. ಯಾರು ತನ್ನನ್ನು ದಿಟ್ಟಿಸಿ ನೋಡಿದಾಗೂ ಭರಮನಿಗೆ ಒಂದು ತರದ ಜುಗುಪ್ಸೆ. ಹೊಟ್ಟೆಗಾಗಿ ಅಲೆಯುವಾಗ 'ಇವನೇನು ಠಕ್ಕನೊ?' ಎನುವಂತೆ ದಿಟ್ಟಿಸಿದ್ದರು; ಮನೆಯ ಬಾಗಿಲಿಗೆ ನಿಂತು 'ಇದಿಲ್ಲಿದ್ರೆ ಇನ್ನೊಂದ್ರಿ, ಯಾವ್ದಾರೆ ಕೆಲ್ಸಾ ಹೇಳ್ರಿ' ಎನುವಾಗ ರಾತ್ರಿ ಕನ್ನ ಹಾಕುವ ಹಂಚಿಕೆಯಿಂದ ಈಗ ಮನೆಯನ್ನು ಪರೀಕ್ಷಿಸುತ್ತಿದ್ದಾನೆ, ಎಂದು ಸಂಶಯದಿಂದ ದಿಟ್ಟಿಸಿದ್ದರು; ಹೆದರಿದ ಹೆಂಗಸರು, ಕೆಣಕುವ ಹುಡುಗರು, ಕೆರಳಿದ ಧನವಂತರು—ಅನೇಕರು ಅನೇಕ ನೋಟಗಳಿಂದ ದಿಟ್ಟಿಸಿದ್ದರಿಂದ ಭರಮನಿಗೆ ನೋಟದಿಂದ ನೋಡುವವರ ಅಂತರಂಗ ತಿಳಿಯುವಂತಾಗಿದ್ದಿತು. ಈಗ ತನ್ನನ್ನು ನೋಡುತ್ತಿದ್ದ ದಾರಿಕಾರನ ಮನಸ್ಸಿನಲ್ಲಿ ಆಶ್ಚರ್ಯವೂ ಭಯವೂ ಸೇರಿದೆ ಎಂದು ಅವನಿಗೆ ತೋರಿತು. ಅದರಲ್ಲಂತೂ ಭರಮನು ಮನೆಯ ಒಳದಾರಿ ಸೇರುವಾಗ ಆ ದಾರಿಕಾರನು ನಿಂತಲ್ಲಿಯೆ ತಡೆದು ಅವನನ್ನು ನೋಡಿದನು. ಭರಮನು ಕುತೂಹಲದಿಂದ ತಿರುಗಿ ನಿಂತು ದಾರಿಕಾರನನ್ನು ಎದುರಿಸಿದನು.

'ನೀವು ಪರವೂರವರು ಕಾಣ್ತೀರಿ?' ಎಂದನು ದಾರಿಕಾರನು.

ಭರಮುನು ಹೌಹುದೆನ್ನಲು ಬಾಯ್ದೆರೆದು ತಡೆದನು. 'ನನ್ನಂಥಾವ್ನ ಇದ್ದಲ್ಲೇ ಊರ್ರಿ. ಮನಗಲಾಕ ಜಾಗೇವು ಸಿಕ್ಕಲ್ಲಿ ನನ್ನ ಮನೀರಿ' ಎಂದು ಹಲ್ಲು ಕಿರಿದನು.

'ಈ ಜಾಗಾ ಯಾರ್ದು ಗೊತ್ತೈತೇನು?'

'ಇಲ್ರಿ, ಅಣ್ಣಾ. ಬ್ಯಾಡಾ ಅಂದ್ರು ಬಿಡತೀನ್ರಿ.'

'ಯಾರಾರೆ ಮಾತಾಡಿಸಿದ್ರೇನು ನಿನಗ ಇಲ್ಲಿ ಮನಗಿದಾಗ?'

'ಯಾರಿಲ್ರಿ, ಯಣ್ಣಾ. ಕರೇವಂದ್ರ ನಾ ಸಂಬಾಯಿತ ಮನಸ್ಯಾ ಅದೀನ್ರಿ. ನಿಂ ಪಾದಾ ಮುಟ್ಟಿ..'

ದಾರಿಕಾರನಿಗೆ ನಗೆ ಒಂದಿತು. 'ನನ್ನ ಪಾದಾ ಮುಟ್ಟಲಾಕ ನಾ ಯೇನ ಪೋಲೀಸನ, ಪಂಚನ? ಹಾಂಗ ಕೇಳಿದರ ಇಲ್ಲಿ ಮನಗಲಾಕ ನಿನಗ ಯಾರೂ ಬ್ಯಾಡ ಅನೋದಿಲ್ಲ. ತೆಪ್ಪಿ ಸುದ್ದಾ ಗಸ್ತೀ ಪೋಲೀಸರು ಬರೋದಿಲ್ಲ.'

ಭರಮುನಿಗೆ ಅವಮಾನವಾದಂತಾಯಿತು. 'ಪೋಲೀಸನೋರು ಬಂದು ನೋಡ್ಲಿರಿ ಬೇಕಾದ್ರ, ನಾ ಸಂಬಾಯಿತ..'

ದಾರಿಕಾರನು ಮತ್ತಿಷ್ಟು ಗಟ್ಟಿಸಿ ನಗುತ್ತ 'ಸಂಬಾಯಿತಗಿರೀ ಮಾತ ಯಾರು ಎತ್ತಿದರು? ಇಲ್ಲಿ ಯಾರೂ ಹಾಯೋದಿಲ್ಲ, ನೀ ರಾತ್ರಿಮುಟ ಇಲ್ಲೇ ಗೂಂಗಡಿ ಹಾಸೋಹಾಂಗ ಕಾಣ್ತಿ—ಅದಕ್ಕ ಕೇಳ್ದೆ ಪರವೂರವ ಏನು ಅಂತ.'

'ನಾ ಇಲ್ಲಿಯುವ ಅಲ್ರಿ' ಎಂದು ಕೊನೆಗೆ ಭರಮುಪ್ಪನು ಒಪ್ಪಿಕೊಳ್ಳ ಬೇಕಾಯಿತು.

'ಅದಕೇ ನಿನಗ ಗೊತ್ತಿರಲಾಕಿಲ್ಲ ಅಂತ ಹೇಳಿಟ್ಟಿರತೀನಿ. ಮೂರೂ ಥೆಂಜಿ ಆತೂ ಅಂದ್ರು ಈ ಮನೆ ಕಡೆ ಮುಕ ಎತ್ತೋದಿಲ್ಲ ಯಾರೂ. ಮಂದಿ ಆಡೋ ಮಾತು. ನಾಯೇನು ನೋಡಿಲ್ಲ, ನುಡಿಸಿಲ್ಲ..ಈ ಮನ್ಯಾಗ ಭಾರೀ ಒಂದು ದೆವ್ವ ಐತಿ ಅಂತ.'

ದಾರಿಕಾರನ ಮಾತನ್ನು ಕೇಳಿ ಭರಮುಪ್ಪನು ಗಟ್ಟಿಯಾಗಿ ನಕ್ಕನು. ದಾರಿಕಾರನಿಗೆ ಮೊದಲು ಆಶ್ಚರ್ಯ, ಆಮೇಲೆ ಭರಮುನು ಇನ್ನೂ ಹೆಚ್ಚಾಗಿ ನಗುವುದನ್ನು ನೋಡಿ ಆಧೈರ್ಯ, ತರುವಾಯ ಸಂಶಯ, ಕೊನೆಗೆ ಇವನೇ

ಆ ದೆವ್ವವಿರಬಾರದೇಕೆ, ಎಂಬ ಹೆದರಿಕೆ ಸೇರಿ ದಾರಿಕಾರನು ಜೀವದ ಹಂಗು ದೊರೆದು ಓಡಿದನು. ಅದನ್ನು ನೋಡಿ ಮತ್ತಿಷ್ಟು ಗಟ್ಟಿಯಾಗಿ ನಕ್ಕ ಭರಮುಪ್ಪನ ನಗೆ ಸಂಜೆಯ ಆ ಶಾಂತ ವೇಳೆಯಲ್ಲಿ ಪ್ರತಿಧ್ವನಿಯಾಗಿ ಆ ದಾರಿಕಾರನನ್ನು ಎಷ್ಟು ದೂರ ಬೆನ್ನಟ್ಟಿರಬಹುದೊ!

ಭರಮನು ಎಂದಿನಂತೆ ಮನೆಯ ಹೊರಕಟ್ಟೆಯ ಮೇಲೆ ತನ್ನ ಕಂಬಳಿಯನ್ನು ಪಸರಿಸಿದನು. ಆದರೆ ಇಂದು ಅವನಿಗೆ ಯಾಕೊ ನಿದ್ರೆಯೆ ಒರಲೊಲ್ಲದಾಗಿದೆ. ಅಂತರಂಗದಲ್ಲಿ ಅವನು ದೆವ್ವನ್ನಾಗಲಿ, ದೆವ್ವಿನ ಕತೆಯನ್ನಾಗಲಿ ನಂಬಿರಲಿಲ್ಲ. 'ಸತ್ತ ಮ್ಯಾಗ ಮುತ್ತ ದೆವ್ವ ಆಗಿ ನನ್ನಂಥಾ ಬಡಮಂಗನ್ನ ಬೆನ್ನು ಹತ್ತಲಾಕ ದೆವ್ವ ಅಟೊಂದು ಬುದ್ಧಿಗೇಡಿಯೆ?' ಎಂದು ಕಂಬಳಿಯಿಂದ ಕಸವನ್ನು ಸವರುವಾಗ ಪ್ರಶ್ನೆ ಮಾಡಿದ್ದನು. 'ಹೊಟ್ಟೆ ಹರಿಯೋಮಟ ಬಕ್ಕರಿಸಿ ಹಾಸಿಗೆ ಮ್ಯಾಗ ನಿದ್ದೆ ಇಲ್ದೆ ವಿುಸುಕಾಡೋ ಸಿರಿವಂತರಿಗೂ ದೆವ್ವಿಗೂ ಗಂಟು. ಬೂಮೀತಾಯಿಗೆ ಬೆನ್ನುಕೊಡೋದೊಂದೇ ತಡ ಕಣ್ಮುಚ್ಚೋ ನನ್ನಂಥಾ ಕೈಗೂಲಿ ಕುಂಬಕರ್ಣ ಬಡಮಂದೀಗ ದೆವ್ವ ಕಂಡೀತ್ಯಾಕ' ಎಂದು ಸಮಾಧಾನವನ್ನೂ ತಂದುಕೊಂಡಿದ್ದನು. 'ಹಾಂಗ ಕೇಳಿದ್ರ ನಾನೂ ದೆವ್ವೇ. ಅದ್ಯಾಕ—ದೆವ್ವಿನ ಮ್ಯಾಗ ಒಂದು ಕೈ. ದೆವ್ವ ಸತ್ತಿರತದ, ನಾ ಇನ್ನೂ ಜೆಂವಾ ಹಿಡಕೊಂಡು ಅದೀನಿ' ಎಂದು ಧೈರ್ಯದ ಮಾತನ್ನೂ ಹೇಳಿಕೊಂಡನು. ನಿಜವಾಗಿಯೂ ಭರಮುಪ್ಪನಿಗೆ ದೆವ್ವಿಗಾಗಿ ನಂಬುಗೆಯಾಗಲಿ ಹೆದರಿಕೆಯಾಗಲಿ ಇದ್ದಿರಲಿಲ್ಲ. ಆದಕಾಗಿಯೆ ನಿದ್ರೆ ಬಾರದುದಕ್ಕಾಗಿ ಅವನು ಕನಲಿದನು. ಅಷ್ಟರಲ್ಲಿ ಯಾರೋ ಪಿಸಿಪಿಸಿ ಮಾತನಾಡಿದಂತೆ ಸದ್ದು ಕೇಳಬಂದಿತು. ದಿನಾಲು ಹೀಗೆಯೆ ಸದ್ದು ಕೇಳಬಂದಿದ್ದರೂ ಇಂದು ಭರಮುಪ್ಪನಿಗೆ ಅದನ್ನು ಗೊತ್ತುಹಚ್ಚುವ ಹಟವಾಯಿತು. ಹಾಸಿಗೆಯಿಂದ ಎದ್ದನು. ಲಕ್ಷ್ಯಗೊಟ್ಟು ಕೇಳಿದನು. ಯಾವ ಸದ್ದೂ ಇಲ್ಲ! ಮತ್ತೆ ಮೈ ಚಾಚಿದನು. ಅಷ್ಟರಲ್ಲಿ ಯಾರೊ ಓಡಿದಂತೆ ಹೆಜ್ಜೆಯ ಸಪ್ಪಳ ಕೇಳಬಂದಿತು. ತಟ್ಟನೆ ಎದ್ದು ಕುಳಿತನು ಭರಮುಪ್ಪನು. ಈಗ ಅವನಿಗೆ ಹೆದರಿಕೆಯಂತೂ ಇಲ್ಲವೇ ಇಲ್ಲ; ಸಂಶಯವೂ ಇಲ್ಲದಂತಾಯಿತು. 'ಇದು ಮಾತ್ರ ದೆವ್ವ ಅಲ್ಲ, ಭರಮಾ' ಎಂದು ತನ್ನೊಡನೆ ಹೇಳಿದನು. 'ದೆವ್ವ ಬೂಮಿಗೆ ಮುಟ್ಟೋದಿಲ್ಲ. ಕಾಲ ಸಪ್ಪಳರೆ ಆತು. ಅಂದ ಮ್ಯಾಗ ಓಡಿದ್ದು ದೆವ್ವ

ಅಲ್ಲ. . . .ಮನಸ್ಯಾರು ಈಟೊತ್ತಿನಾಗ ಇಲ್ಲಿ ಯಾಕ ಬರತಾರ? . . . ಏಳೊ ಸಿಸ ಹುಚ್ಚೊಗ್ಗಟ್ಟೀ, ನೀ ಬಂದಿಲ್ಲೇನು ಇಲ್ಲಿ? ಮನಸ್ಯಾನೇ ಅಲ್ಲ ನೀನೂ? . . ನಿದ್ದೆ ಹೋತೋ, ಏನ್ನಿನ್ನ ಭುದ್ದಿ ಹೋತೊ—ಒರವಾ?' ಎಂದವನೆ ಹಾಸಿಗೆ ಬಿಟ್ಟು ಎದ್ದನು. ಅತ್ತಿತ್ತ ಸುತ್ತಾಡಿ ಬಂದನು. ಆದರೆ ಭರಮನಿಗೆ ಅಲ್ಲಿ ಯಾವ ಪ್ರಾಣಿಯ ಸುಳಿವೂ ಕಾಣಲಿಲ್ಲ. 'ಅಡಗಿಕೋಬೇಕು ಅಂತ ಅವನದೆ ಹಟ ಇದ್ರ ನಾ ಆದ್ರೂ ಯಾಕ ಹುಡುಕಲಿ?' ಎನುತ್ತ ದಣಿದ ಭರಮನು ಇನ್ನಿಷ್ಟು ದಣಿದು ಬಿಸಿಲೇರುವ ವರೆಗೆ ನಿದ್ರೆ ಮಾಡಿದನು.

ನಿಜವಾಗಿಯೂ ಭರಮನಿಗೆ ಈ ಅನುಭವದ ಮಹತ್ತ್ವವಿದ್ದಿರಲಿಲ್ಲ. ಹೊಟ್ಟೆ ತುಂಬಲು ಪಡಬೇಕಾದ ಕಷ್ಟದಲ್ಲಿ ಅವನು ಹುಡುಗಾಟದ ಈ ದೆವ್ವಿನ ಕತೆಯನ್ನೂ ಮರೆಯಲೂಬಹುದಾಗಿತ್ತು. ಆದರೆ ಮುಂದೆ ಒಂದೆರಡು ದಿನಗಳಲ್ಲಿ ಭರಮನು ಸಿಕ್ಕಿಕೊಂಡ ಜೀವಸಂಕಟದಿಂದ ಅವನಿಗೆ ಈ ಅನುಭವ ಎಂದೆಂದೂ ಮರೆಯದಂತಾಯ್ತು. ದೆವ್ವಿನ ಮೇಲೆ ತನ್ನ ನಂಬಿಗೆ ಇಲ್ಲ, ಆ ಮನೆಯಲ್ಲಿ ಯಾವ ಭೂತವೂ ಇದ್ದಿರಲಿಲ್ಲ, ಎಂಬ ತನ್ನ ಸದ್ವಿವೇಕಕ್ಕಾಗಿ ಭರಮನು ಪಶ್ಚಾತ್ತಾಪಪಡಬೇಕಾಯಿತು. ಆದರೆ ಮುಂಚಿನ ಘಟನೆಯಿಂದ ತಾನು ಹೀಗೆ ಪೇಚಿನಲ್ಲಿ ಸಿಕ್ಕಿಕೊಳ್ಳಬಹುದೆಂದು ಅವನು ಕನಸು-ಮನಸುಗಳಲ್ಲೂ ಕಂಡಿರಲಿಲ್ಲ. ಅದಕ್ಕೆ ಪ್ರತಿಯಾಗಿ ತನ್ನ ದೈವದ ಬಾಗಿಲು ತೆರೆಯಿತೆಂದೇ ಅವನು ತಿಳಿದಿದ್ದನು. 'ಹೊಂತುಟಲೆ ಎದ್ದು ಯಾರ ಮುಕಾ ನೋಡಿದ್ದೆನೊ? ಏನು ರಾತ್ರಿ ಮನಗಿದಾಗ ದೆವ್ವೇ ಬಂದು ನನ್ನ ಮುಸುಕ ತಗದು ಮುಕದರಸನ ಮಾಡಿತ್ತೊ! ಒಂದ ಯಾಳಿ ದೆವ್ವ ಇದ್ರೂ ಸುಬದ ದೆವ್ವ ಐತ್ಯೇಳು' ಎಂದು ಭರಮನು ಅಂದುಕೊಂಡಿದ್ದನು.

ಅವನ ಅಷ್ಟೊಂದು ಸಂತೋಷಕ್ಕೆ ದೆವ್ವಿನ ರಾತ್ರಿ-ಅನುಭವದ ಎರಡನೆಯ ದಿನ ಬೆಳಗ್ಗೆ ನಡೆದ ಸಂಗತಿ ಕಾರಣವಾಗಿದ್ದಿತು. ಎಂದಿನಂತೆ ಭರಮನು ಕಣ್ತೆರೆದನು. ಆದರೆ ಅವನು ಕೇಳಿದ್ದು ಹಕ್ಕಿಗಳ ಕಿಲಕಿಲವಾಗಿರಲಿಲ್ಲ, ಯಾವುದೊ ಒಂದು ಮೋಹಕ ನಗೆಯ ಕುಲುಕುಲುವಾಗಿದ್ದಿತು. ದನಿಯನ್ನು ಕೇಳಿ 'ಇಲ್ಲೀ ದೆವ್ವ ಹೆಣ್ಣ ಐತ್ಯೋ ಏನೊ ?' ಎಂದು ಗೊಣಗುತ್ತ ಭರಮಪ್ಪ ಮುಸುಕನ್ನು ತೆರೆದನು. ಈಗಾಗಲೆ ಬಿಸಿಲು ನಗೆಯು ಮುಖವನ್ನು ಅರಳಿಸುವಂತೆ ಆಕಾಶವನ್ನು ಅರಳಿಸುತ್ತಲಿದೆ. ಭರಮನು ಚಟ್ಟನೆ ಎದ್ದು ಕುಳಿತನು.

ಯಾಕೆಂದರೆ ಅವನು ಕೇಳಿದ್ದು ನಗೆಯೆ ಅಹುದು. ಇಷ್ಟೇ ಅಲ್ಲ—ಒಬ್ಬ ತರುಣ, ಅವನ ಪಕ್ಕದಲ್ಲಿ ತರುಣಿಯೊಬ್ಬಾಕೆ, ಇಬ್ಬರೂ ತನ್ನನ್ನೆ ನೋಡಿ ನಗುತ್ತಲಿದ್ದಾರೆ! ಭರಮನು ಪೆಚ್ಚಾದನು. ತನ್ನ ಬಟ್ಟೆಯ ಛಿದ್ರಗಳನ್ನು ಸರಿಪಡಿಸಿಕೊಂಡನು (ಇದಕ್ಕೆ 'ಒಟ್ಟಿ ಸುತ್ತಿಕೊಳ್ಳೋದು' ಎಂದು ಅವನ ಹೆಸರು). ಇಂತಹ ಜಾಗೆಯಲ್ಲಿ ನುಲಗಿದ ತನ್ನ ದಡ್ಡತನಕ್ಕಾಗಿ ನಗುತ್ತಿರ ಬಹುದೆ? ಅಥವಾ—ಈ 'ಬಂಗಲೆ' ಇವರದೆ ಇರಬಹುದೆ? ವೇಷಭೂಷಣ ಗಳಿಂದ ಠೀವಿಯಿಂದ ತರುಣನು ಧನವಂತನೆಂಬುದರಲ್ಲಿ ನುರಿತ ಕಣ್ಣಿನ ಭರಮ ನಿಗೆ ಸಂದೇಹವಿರಲಿಲ್ಲ. ಒಬ್ಬರೊಬ್ಬರ ನಡತೆಯು ಸಲಿಗೆಯನ್ನು ನೋಡಿದರೆ ಇವರು ಗಂಡ-ಹೆಂಡಿರು ಇರಬಹುದು, ಎಂದು ಅವನಿಗೆ ಹೊಳೆಯಿತು. ಏನೆ ಇರಲಿ, ತಾನು ಈ ಸಂದರ್ಭದಲ್ಲಿ ಸಿಕ್ಕಿಕೊಂಡದ್ದು ಸುಂಗಿದ ರೊಟ್ಟಿಯಲ್ಲಿ ನುಸಿ ಇದ್ದಿತೇನೊ, ಎಂಬ ವಿಚಾರದಂತೆ ಅವನನ್ನು ಕಸವಿಸಿಗಿಟ್ಟಿತು. ಆದಷ್ಟು ಸದ್ದಿಲ್ಲದೆ ಹೊರಡುವುದುತ್ತಮ, ಎಂದು ಅವನು ಎದ್ದನು.

'ಯಾರು ನೀನು?'

ತರುಣನ ದನಿಯನ್ನು ಕೇಳಿ ಭರಮಪ್ಪನು ಬೆರಗಾಗಿ ನಿಂತನು. ಆ ದನಿಯಲ್ಲಿ ಅಧಿಕಾರವಿದ್ದಿತು, ಕನಿಕರವಿದ್ದಿತು, ಸ್ನೇಹದ ಕಳೆಯೂ ಇದ್ದಿತು. ಭರಮಪ್ಪನು ಮುಖವೆತ್ತಿ ತರುಣನನ್ನು ನೋಡಿದನು. ಆಳು, ದನಿಗೆ ತಕ್ಕಂತೆ, ಎತ್ತರವೂ ಅಲ್ಲ, ದಪ್ಪಾದುದೂ ಅಲ್ಲ. ತಲೆತುಂಬ ಕೂದಲು, ಓರಣ ವಿಲ್ಲ. ಮುಖದಲ್ಲಿ ಆರೋಗ್ಯಕ್ಕಿಂತ ನಗೆಯ ಕಳೆಯೆ ಹೆಚ್ಚು ಮೂಡಿ ಕಾಣುತ್ತಿದ್ದಿತು. ಏನೊ, ನೋಡಿದೊಡನೆಯೆ ಸಿರಿವಂತರಿಗಾಗಿ ಕುದಿಯ ಬೇಕಾಗಿದ್ದ ಭರಮನಲ್ಲಿ ಕೂಡ ಆದರಬುದ್ಧಿ ಹುಟ್ಟಿತು, ಭಾಂಧವ್ಯದ ವಿಶ್ವಾಸ ಮಿಂಚಿದಂತಾಯಿತು. ಆದರೆ ತರುಣನು ತನ್ನ ಪ್ರಶ್ನೆಯ ಉತ್ತರವನ್ನು ಆತುರದಿಂದ ಕಾದಿದ್ದಾನೆಂದು ಕಂಡು ಭರಮನು ನಾಚಿ ಉಗುಳ್ನುಂಗುತ್ತ 'ನಾ ದಾರಿಹೋಕ, ದಣೇರ' ಎಂದನು; ಇದಕ್ಕೆ ಪ್ರತಿಯಾಗಿ ಏನು ಒರು ವುದೊ ಎಂದು ಹೆದರಿ ನಿಂತನು. ತರುಣನು ಮಾತ್ರ ತಟ್ಟನೆ ತರುಣಿಯನ್ನು ಎದುರಿಸಿ 'ನೋಡಿದೆಯಿಲ್ಲೊ? ನಂನಿವ್ನಾಂಗೇ ಮಾತಾಡತಾನೆ!' ಎಂದನು. ಭರಮನಿಗೆ ಅರ್ಥವಾಗಲಿಲ್ಲ. ತರುಣಿಗೂ ಅರ್ಥವಾಗಲಿಲ್ಲವೇನೊ? ಯಾಕೆಂದರೆ ತರುಣನು ಮತ್ತೆ ಭರಮನ ಕಡೆ ತಿರುಗಿದನು. 'ನೀನು ಒಂದು

ನಾಲ್ಕು ಹೆಜ್ಜೆ ನಡೆ, ನೋಡೋಣ ' ಎಂದನು. ಭರಮನು ಏನೂ ತಿಳಿಯದೆ ನಡೆಯತೊಡಗಿದನು. ತರುಣನು ' ನೋಡಿದೆಯಲ್ಲೊ ಇಂದೂ, ನಡೆಯುವಾಗ ಇವನ ಕಾಲು ನೆಲ ಮುಟ್ಟುತವೆ ' ಎಂದನು. ಈಕೆಯ ಹೆಸರು ' ಇಂದೂ ' ಎಂಬುದಿಷ್ಟೆ ಭರಮನಿಗೆ ಹೊಳೆಯಿತು. ಭರಮನ ದೃಷ್ಟಿ ' ಇಂದೂ 'ನ ಕಡೆ ಹೋಯಿತು. ಆಕೆಯೂ ಅವನನ್ನು ಒಂದೇ ಸವನೆ ದಿಟ್ಟಿಸಿ ' ನಿನ್ನ ಹೆಸರೇನೋ ? ' ಎಂದಳು.

' ಭರಮಪ್ಪ—ಭರಮ-ರಿ. '

' ಈ ಊರ ಹೆಸರು ಏನು ? '

' ಧಾಗಳ್ಳಿ- ರಿ. '

' ನೀನು ಎಲ್ಲಿಯವ ? '

' ನಾನು. . ' ಭರಮ ತಡೆದ. ಇವರು ಪೋಲೀಸ ಜನ ಇರಬಹುದೆ, ಎಂಬ ಹೆದರಿಕೆ ಅವನಿಗೆ.

' ನೀನು ಭೂಲೋಕದವನೆ ಅಹುದಲ್ಲೊ? ' ಎಂದು ತರುಣನು ನಡುವೆ ಮಾತನಾಡಿಸಿದನು.

ಭರಮನು ಬೆಪ್ಪಾಗಿ ಪಿಳಿಪಿಳಿ ಕಣ್ಣೆವೆ ಬಡೆಯತೊಡಗಿದನು. ಅದನ್ನು ನೋಡಿಯಂತೂ ತರುಣನು ಚಪ್ಪಾಳೆ ತಟ್ಟುತ್ತ ಗಹಗಹಿಸಿದನು. ' ಇವನ ಕಣ್ಣೆವೆ ಬಡೀತಾ ಇವೆ ಅಂದ ಮೇಲೆ ಇವನು ಮನುಷ್ಯನೆ ಇರಲಿಕ್ಕೆಬೇಕು. ದೇವನೂ ಅಲ್ಲ, ದೆವ್ವನೂ ಅಲ್ಲ ' ಎಂದನು. ಆಗ ಮಾತ್ರ ಭರಮನು ಬಾಯ್ದೆರೆದನು. ' ನಾ—ನಾ-ದೆವ್ವಿನ್ಹಾಂಗ ಕಾಣ್ತೇನೇನ್ರಿ, ಧಣೇರ ? ' ಎಂದು ಮೊರೆಯಿಡುವ ದನಿಯಲ್ಲಿ ಅವನು ಕೇಳಿದಾಗ ತರುಣೆಗೆ ನಗೆ ತಡೆಯದಂತಾಯಿತು.

ಬೆಳಗಿನ ಈ ಭೆಟ್ಟಿಯನ್ನು ಭರಮನು ಎಂದಿಗೂ ಮರೆಯುವಂತಿರಲಿಲ್ಲ ಎಂದು ಹೇಳಿದೆಯಷ್ಟೆ. ಅದಕ್ಕೆ ಈ ನಗೆಯೂ ಒಂದು ಕಾರಣ. ಆ ನಗೆಯಿಂದ ಭರಮನ ಅಧೈರ್ಯವೆಲ್ಲ ಕಳಚಿ ಹೋಯಿತು. ಭರಮನ ಇತಿಹಾಸವನ್ನು ಕೇಳಿದರು. ಹೆಂಡಿರು-ಮಕ್ಕಳನ್ನು ಬಿಟ್ಟು ಹೊಟ್ಟೆಯ ಪಾಡಿಗಾಗಿ ತಾನು ಗತಿಗೇಡಾಗಿ ತಿರುಗುವುದನ್ನು ಹೇಳುವಾಗ ತರುಣೆಯ ಕಣ್ಣಲ್ಲಿ ನೀರು ಕಂಡಿತು. ಅದನ್ನು ನೋಡಿ ಭರಮನಿಗೆ ಎಷ್ಟೋ ಸಮಾಧಾನವಾಯಿತು. ಈ ಹಾಳುಬಿದ್ದ ಮನೆಯ ವಿಷಯ ತನಗೆ ಏನೂ ಗೊತ್ತಿಲ್ಲವೆಂಬುದನ್ನು

ಹೇಳಿದನು. ಆ ಮನೆಯಲ್ಲಿ ಅನೇಕ ವರ್ಷಗಳಿಂದ ಭೂತ ಸೇರಿದೆ, ಎಂದಳು ತರುಣಿ; ಇಲ್ಲ, ಎಂದು ತರುಣನ ಹಟ. ಕೆಲಹೊತ್ತು ಇವರ ಚರ್ಚೆಯಿಂದ ಭರಮನ ಮನರಂಜನೆಯಾಯಿತು. ತನಗೆ ದೆವ್ವನಲ್ಲಿ ವಿಶ್ವಾಸವಿಲ್ಲ, ಎಂದು ಚರ್ಚೆಯಲ್ಲಿ ಭಾಗ ವಹಿಸಿದನು. ಎರಡು ದಿವಸ ಮುಂಚಿತ ಹೀಗೆ ಅನಂತ ಚರ್ಚೆಯಾಗಿ ಕೊನೆಗೆ ತರುಣನು ಆ ಮನೆಯನ್ನು ಕೊಂಡುಕೊಂಡನೆಂದೂ ಆ ದಿನ ಬೆಳಿಗ್ಗೆ ಇಬ್ಬರೂ ಮನೆ ನೋಡಲು ಬಂದರೆಂದೂ ಭರಮನೆ ಅಲ್ಲಿಯ ದೆವ್ವ ಎಂದು ತರುಣನು ತರುಣಿಯನ್ನು ಚೇಷ್ಟೆಯಿಂದ ಪೀಡಿಸಿದನೆಂದೂ ಕೇಳಿ ಭರಮನಿಗೆ ಸಮಾಧಾನವಾಯಿತು. ಆ ಸಮಾಧಾನಕ್ಕೆ ಇನ್ನೂ ಒಂದು ಕಾರಣವಿದ್ದಿತು. ಮೂರು-ನಾಲ್ಕು ದಿವಸಗಳಲ್ಲಿ ಇವರಿಬ್ಬರೂ ತಮ್ಮ ಗೆಳೆಯರೊಡನೆ ಅಲ್ಲಿ ಒಂದು ವಾಸ ಮಾಡುವವರು. ಮನೆಯನ್ನೂ ಸುತ್ತು ಮುತ್ತಲನ್ನೂ ಹಸನ ಮಾಡುವ ಕೆಲಸ ಭರಮನಿಗೆ ದೊರಕಿತು. ಇವನಿಗೆ ದೆವ್ವನಲ್ಲಿ ವಿಶ್ವಾಸವಿಲ್ಲ, ಎಂಬ ಧೈರ್ಯದಿಂದ ಇವನನ್ನೆ ಮನೆಗಾವಲಕ್ಕೂ ಇಟ್ಟುಕೊಳ್ಳಬೇಕೆಂದು ತರುಣಿ ಹಟ ತೊಟ್ಟಳು; ತರುಣನು ಒಪ್ಪಿದನು. 'ಅಮ್ಮಾ ಅವ್ರು, ದೆವ್ವ ಇದ್ರೂ ಸುಬದ್ದ (=ಶುಭದ) ದೆವ್ವ ಇರ್ಬೇಕು ನೋಡ್ರಿ. ನನಗೊಂದು ನೌಕರಿ ಕೊಡಿಸ್ತು' ಎಂದು ಭರಮನು ಹೇಳಲು 'ದೆವ್ವನ ಮಾತು ತೆಗೆದ್ರ ನಿನ್ನ ನೌಕರೀನೇ ಹೋದೀತು ಇನ್ನೊಮ್ಮೆಗೆ' ಎಂದಳು. 'ಜಿಂವಾ (=ಜೀವ) ಹೋದ್ರೂ ನಿಮ್ಮಂಥೋರ ನೌಕರಿ ಬಿಟ್ಟೇನ್ರಿ ನಾನು?' ಎಂದು ಭರಮನು ಅಭಿಮಾನದಿಂದಲೆ ನುಡಿದನು.

* * * *

ಭರಮಪ್ಪನ ಮಾತು ಸತ್ಯವಾಗಲಿಲ್ಲ. ಮುಂದೆ ಎರಡು ದಿವಸಗಳಲ್ಲಿಯೆ ತರುಣ-ತರುಣಿಯರು ತಮ್ಮ ಗೆಳೆಯರೊಡನೆ ಒಂದು ಬಿಡಾರ ಹೂಡಿದರು. ಎಲ್ಲರೂ ಯುವಕರೆ. ಇಡಿಯ ಮೊದಲ ದಿನವನ್ನು ಉಲ್ಲಾಸದಿಂದ ಕಳೆದರು. ರಾತ್ರಿ ಅದೆಷ್ಟೋ ಹೊತ್ತು ದೆವ್ವನ ಚೇಷ್ಟೆಯ ಮಾತುಗಳನ್ನಾಡುತ್ತ ಕಾಲ ಕಳೆದರು. ಇದನ್ನೆಲ್ಲ ನೋಡಿ 'ನಾ ಹೇಳಲಿಲ್ಲ? ಜಿಂವಾ ಹೋದ್ರೂ ಇಂಥಾ ನೌಕರಿ ಬಿಡಲಾಕಿಲ್ಲ' ಎಂದು ಭರಮನು ಪ್ರತಿಜ್ಞೆಯ ಪುನರುಚ್ಚಾರ ಮಾಡಿದನು.

ಆದರೆ ಮುಂದೆ ಎರಡೇ ದಿವಸಗಳಲ್ಲಿ ಜೀವವೂ ಹೋಯಿತು, ನೌಕರಿಯೂ ಹೋಯಿತು; ತರುಣನ ಜೀವ ಹೋಯಿತು, ಭರಮನ ನೌಕರಿ ಹೋಯಿತು. ಒಂದು ಬೆಳಗಿನಲ್ಲಿ ತರುಣನು ತನ್ನ ಕೋಣೆಯಲ್ಲಿಯೆ ಮರಣ ಹೊಂದಿದ ಸಂಗತಿಯಿಂದ ಮನೆತುಂಬ ಹಾಹಾಕಾರವೆದ್ದಿತು. ಸಂಜೆಯ ವರೆಗೆ ಪೋಲೀಸ ಅಧಿಕಾರಿಗಳು ಮನೆಯೊಳಗಿನವರೆಲ್ಲರನ್ನೂ ಪ್ರಶ್ನೆ ಮಾಡಿದರು. ರಾತ್ರಿ ಎಲ್ಲರ ಮೇಲೆ ಕಾವಲಿಟ್ಟರು. ಮಾರನೆಯ ಬೆಳಗ್ಗ ತರುಣನನ್ನು ಬುದ್ಧಿಪೂರ್ವಕವಾಗಿ ಕೊಂದನೆಂಬ ಆರೋಪದ ಮೇಲೆ ಭರಮನನ್ನು ಬಂಧಿಸಿದರು.

—

## ೨ ಭವಾನಿಯ ಭೂತ

ಭರಮಪ್ಪನನ್ನು ಬಂಧಿಸಿದ್ದು ಧಾಗಳ್ಳಿಯಲ್ಲಿ ದೊಡ್ಡವರಿಗೂ ದಾಂಡಿಗರಿಗೂ ಕೂಡಿಯೆ ಒಂದು ಹಬ್ಬವಾಯಿತು. 'ಆ ಹುಡುಗ ಯಾರು—ಜೀವ ಬಿಟ್ಟ ಹುಡುಗ?—ಅದೇನೊ ಭವಾನ್ಯೊ ಪವಾನ್ಯೊ ಅಂತಾರಲ್ಲ?—ಆ ಹುಡುಗ ಶುದ್ಧ ತನ್ನ ಅವಿವೇಕಕ್ಕೆ ಆಹುತಿಯಾದ' ಎಂದು ಅನೇಕ ಹಿರಿಯರು ತಲೆಯಲ್ಲಾಡಿಸಿದರು. 'ಭರಮನೆ ಇರಲಿ—ಬ್ರಹ್ಮನೆ ಇರಲಿ—ಯಾರನ್ನ ಹಿಡಿದರೂ ಅಷ್ಟೆ. ಆ ಹುಡುಗನ್ನ ಕೊಂದದ್ದು ಇಲ್ಲಿಯ ಭೂತ' ಎಂದು ನಿರುದ್ಯೋಗ ತಂಡಗಳು ಭಾಷ್ಯವನ್ನು ಬರೆದುವು. 'ಈಗಿನ ಹುಡುಗರ ಹಣೆಯಬರಹಾನೆ ಹೀಗೆ. ದೆವ್ವಿನಾಗೂ ವಿಶ್ವಾಸ ಇಲ್ಲ ಅಂದ್ರೆ! ಕೇಳೀತೇ ದೆವ್ವ?' ಎಂದು ಮಡಿವಂತರು ಮೂಗು ಮುರಿದರು. 'ಪಾಪ! ಸತ್ತ ಹುಡುಗ ಆ ಹುಡುಗೇನ್ನ ಇಂದೊ ನಾಳೆಯೊ ಮದಿವೆ ಆಗಾತ ಇದ್ದನಂತರೆ? ಹುಡುಗೆಯ ದೈವ. ಮಂಗಳಸೂತ್ರದ ಹುರಿ ಗಟ್ಟಿ ಆಕೇದು' ಎಂದು ತಾಯಂದಿರು ಹರಸಿದರು. ಅಂತೂ ಹಾದಿಯ ಹೆಣ ನೋಡಿದವರಿಗೆ ಶುಭ, ಎನುವಂತೆ ಧಾಗಳ್ಳಿಯವರು ಒಳಗಿಂದೊಳಗೆಯೆ ಈ ಅಪಮರಣದಿಂದ ಪುಳಕಿತರಾಗಿದ್ದರು.

ಆ ಭಾಗ್ಯ ಭವಾನಿಯ ಗೆಳೆಯರಿಗಾಗಲಿ ಭರಮಪ್ಪನಿಗಾಗಲಿ ಇದ್ದಿರಲಿಲ್ಲ. ತನ್ನನ್ನು ಬಂಧಿಸಿದರೂ ತಾನು ನಿರ್ದೋಷಿ, ಎಂದು ಭರಮಪ್ಪನು ಹಟತೊಟ್ಟು ಪೋಲೀಸರ ಪ್ರಶ್ನೆಗಳಿಗೆ ಕ್ರಮೇಣ ತಿರಸ್ಕಾರವನ್ನು ತೋರಿಸ ತೊಡಗಿದನು. ಇತ್ತ ಭರಮನನ್ನು ಬಂಧಿಸಿದರೂ ಭವಾನಿಯ ಗೆಳೆಯರಿಗೆ ಸಮಾಧಾನವಿದ್ದಿರಲಿಲ್ಲ. ಇದ್ದುದರಲ್ಲಿಯೆ ಉಲ್ಲಾಸವೃತ್ತಿಯನ್ನು ತೋರಿಸಲು ಯತ್ನಿಸಿದವನು **ಮೋಹನ** ಎಂಬ ತರುಣನು. ಮೋಹನನು ಭವಾನಿಯ ಸರಿವರೆಯದವನು; ಮೊದಲಿನಿಂದಲೂ ಸುಖ-ಸಮೃದ್ಧಿಗಳಲ್ಲಿಯೆ ಕಾಲವನ್ನು ಕಳೆದವನು. ಈಗ ಕೂಡ ಅವನಿಗೆ ಗೆಳೆಯನ ಅಪಮರಣಕ್ಕಾಗಿ ದುಃಖವಾಗಲಿ, ತನ್ನ ವಿಷಯವಾಗಿ ಚಿಂತೆಯಾಗಲಿ ಇರಲಿಲ್ಲ. ಇಷ್ಟೇಕೆ? ಈ

ಅಪಮರಣದ ನಿಮಿತ್ತದಿಂದ ತನ್ನ ಹೆಸರಿಗೆ ಅಲ್ಲಲ್ಲಿ ಪ್ರಸಿದ್ಧಿ ದೊರೆಯುತೆಂಬ ಅವನ ಅಭಿಮಾನ ಕೆಣಕಿದ್ದಿತು. ದೊಡ್ಡದೊಡ್ಡ ದೇಶಭಕ್ತರಂತೆ ತಾನೂ ಸಿ. ಆಯ್. ಡಿ ಪೋಲೀಸರ ಕಾವಲಿನಲ್ಲಿರುವೆನಲ್ಲ, ಎಂದು ಉಬ್ಬು ಅವನಿಗೆ! ಇದಲ್ಲದೆ ಇನ್ನೊಂದು ಹಟ. ಮಿಕ್ಕ ಎಲ್ಲರಂತೆ ತಾನೂ ಈ ಅಪಮರಣದಿಂದ ಅಲಿಪ್ತನೆಂದು ಹೇಳಿದ್ದರೂ ನಿಜವಾದ ದೋಷಿಯನ್ನು ಹುಡುಕಿ ತೆಗೆದು ಇನ್ನೂ ಹೆಸರಾಗಬೇಕೆಂದು ಅವನ ಆಕಾಂಕ್ಷೆ. ಭವಾನಿಯನ್ನು ಯಾರು ಕೊಂದಿರಬಹುದು? ಭರಮನ ಹೊರತಾಗಿ ಎಲ್ಲರೂ ಅವನ ಮಿತ್ರರು. ಇಂದುಮತಿಯಂತೂ ಅವನಲ್ಲಿ ಅನುರಕ್ತಳು, ಅವರ ಮದುವೆ ಇಷ್ಟರಲ್ಲಿಯೆ ಆಗಬಹುದೆಂಬ ಅಂದಾಜು ಇದ್ದಿತು. ಅಥವಾ ಭರಮನೆ ಕೊಂದಿರಬಹುದೆ? ಮೋಹನನಿಗೆ ಆ ಮಾತಿನಲ್ಲಿ ವಿಶ್ವಾಸವಾಗದು. ಕಾರಣಗಳನ್ನು ಹೇಳಲು ಶಕ್ಯವಿಲ್ಲದಿದ್ದರೂ ಭರಮನು ಭವಾನಿಯನ್ನು ಕೊಲ್ಲುವುದಶಕ್ಯ, ಎಂದು ಅವನಿಗೆ ನಿಶ್ಚಯವಿದ್ದಿತು. ಆದರೆ ಯಾರೂ ಕೊಂದಿಲ್ಲವೆಂದೂ ಹೇಳುವಂತಿಲ್ಲ. ಯಾಕೆಂದರೆ ಭವಾನಿಯ ದೇಹವನ್ನು ನೋಡಿದಾಗ ಆ ಜೀವವಿಲ್ಲದ ಮುಖದಲ್ಲಿ ಹೆದರಿಕೆಯ ಕಳೆ ಮೂಡಿದುದನ್ನೂ, ಕೋಣೆಯಲ್ಲಿ ಸಾಮಾನುಗಳು ಅಸ್ತವ್ಯಸ್ತವಾಗಿರುವುದನ್ನೂ ಮೋಹನನೂ ಕಂಡಿದ್ದನು. ಭವಾನಿಯ ಕೋಣೆಯ ಬಾಗಿಲು ಒಳಗಿನಿಂದಲೆ ಮುಚ್ಚಲ್ಪಟ್ಟಿದ್ದಿತು. ಭವಾನಿಯು ತಾನಾಗಿಯೆ ಮುಚ್ಚಿರಬಹುದೆ ಎನುವಂತೆ ದೇಹವೂ ಬಾಗಿಲನ ಹತ್ತಿರವೆ ಬಿದ್ದಿತ್ತು. ಮುಖದ ಕಳೆಯಿಂದ, ಕೋಣೆಯ ಅವ್ಯವಸ್ಥೆಯಿಂದ ಆತ್ಮಹತ್ಯೆ ಎಂದು ಹೇಳಲು ಬರುವಂತಿಲ್ಲ; ಬಾಗಿಲು, ಅದರ ಹತ್ತಿರದಲ್ಲಿ ದೇಹ—ಇವುಗಳಿಂದ ಆತ್ಮಹತ್ಯೆಯೆ ಇದಾಗಿರಬಹುದೇ, ಎಂದು ಸಂದೇಹ. ಆದರೆ ಒಂದೆರಡು ದಿವಸಗಳಲ್ಲಿ ಮಾಡಿದ ಅಂತರ್ದೇಹ ಪರೀಕ್ಷೆಯಿಂದ ಆತ್ಮಹತ್ಯೆ ಇದಲ್ಲ, ಎಂಬುದು ದೃಢವಾಯಿತು. ಮೃತನದೇಹದಲ್ಲಿ ಕ್ರೂರವಾದ ಉಗುರಿನ ಗಾಯಗಳೂ ಇದ್ದುವು. ಆದ್ದರಿಂದ ಇದು ಕೊಲೆಯೆ ಆಗಿದೆ, ಎಂದು ಮೋಹನನು ನಿರ್ಧರಿಸಿದನು. ಮನೆಯ ಹೊರಗಿನಿಂದ ಯಾರೂ ಬಂದಿಲ್ಲವೆಂಬುದು ಸ್ಪಷ್ಟವಾಗಿದ್ದಿತು. ಭವಾನಿಯ ಕೈಗಡಿಯಾರ ಕೈಗೆಯೆ ಇದ್ದುದರಿಂದ ಇಲ್ಲಿ ಕಳ್ಳರ ಸಂಬಂಧವೂ ಇರಲಿಲ್ಲ. ಹಾಗಾದರೆ ಮನೆಯೊಳಗಿನವರೆ ಯಾರಾದರೂ ಈ ಕೊಲೆಯನ್ನು ಮಾಡಿರಬೇಕು? ಯಾರು? ಈ ಪ್ರಶ್ನೆಗೆ ಉತ್ತರವನ್ನು

ಹುಡುಕಲೇಬೇಕೆಂಬ ಹಟದಿಂದ ಮೋಹನನ ಉಲ್ಲಾಸವೃತ್ತಿಗೆ ಉಕ್ಕು ಬಂದಿತು.

ಮೋಹನನಿಗೆ ಎಷ್ಟು ಉಲ್ಲಾಸವೊ ಅಷ್ಟು ಜೋಲುಮೋರೆ ಅನಂತ ಎಂಬವನದಿದ್ದಿತು. ಅನಂತನು ಸ್ವಭಾವದಿಂದ ಪುಕ್ಕನು; ಎರಡು ರೀತಿಯ ಪುಕ್ಕನು. ಒಂದು, ವಿಚಾರದ ಪುಕ್ಕತನ; ಇನ್ನೊಂದು, ವಸ್ತುಸ್ಥಿತಿಯ ಪುಕ್ಕತನ. ಸಾಮಾನ್ಯವಾಗಿ ಚಿಕ್ಕಂದಿನಿಂದ ಕತ್ತಲೆಗೆ, ಕಾಣದ ವಸ್ತುವಿಗೆ, ಅಸಾಮಾನ್ಯ ಆಕೃತಿಗೆ ಹೆದರುತ್ತಲೆ ಅವನು ಬೆಳೆದಿದ್ದನು ಹಿಂದಿನಿಂದ ಒಮ್ಮೆಲೆ 'ಹುತ್' ಎಂದರೆ ಮುಂದೆ ಒಂದು ಮೈಲು ಒಂದೇಸಮನೆ ಹಿಂದು ನೋಡದೆಯೆ ಓಡುವ ಹೇಡಿತನ ಅವನದು ಎಷ್ಟೋ ಸಲ ಮಧ್ಯಾಹ್ನದ ಬಿಸಿಲಿಗಾಗಿ ಬರಿದಾದ ಬೀದಿಯಲ್ಲಿ ಗಾಳಿಯಿಂದ ಜೆಂಯ್‌ಗುಡುವ ಗಿಡದ ಸದ್ದಿಗಾಗಿ ಅನಂತನು ಚೀತ್ಕಾರದಿಂದ ಪುಟಿದದ್ದುಂಟು. ಶಾಲೆಯ ಶರ್ಯತ್ತುಗಳಲ್ಲಿ ಓಡುವ ಮೇಲಾಟದಲ್ಲಿ ಇವನಿಗೆಯೆ ಮೊದಲ ಇನಾಮು ಸಿಕ್ಕುವದೆಂದು ಗೆಳೆಯರು ಇವನನ್ನು ಯಾವಾಗಲೂ ಹಂಗಿಸುತ್ತಿದ್ದರು. ಹೆದರಿದರೆ ಇವನಂತಹ ಶೂರನಿಲ್ಲ, ಎಂದು 'ಬೋಧಿ' ಎಂಬವನು ಯಾವಾಗಲೂ ಹೇಳುವನು. ಅನಂತನು ಬೆಳೆಬೆಳೆದಂತೆ ಅವನ ಹೆದರಿಕೆಯ ಸ್ವರೂಪವೂ ಬೆಳೆದು ಬದಲಾಯಿಸಿತು. ಈಗ ಅವನು ಹೆದರುವುದು ವಿಚಾರಗಳಿಗೆ. ಸದ್ಯಕ್ಕೆ ಗೆಳೆಯನ ಮರಣದಿಂದ ಅವನಲ್ಲಿ ಈ ತರಹದ ಹೆದರಿಕೆಯೆ ಹೆಚ್ಚಾಗಿದ್ದಿತು. ಯಾಕೆಂದರೆ—ನಿರುದ್ಯೋಗಿಯೂ ಸಿರಿವಂತನೂ ಆದ ಭವಾನಿಯ ವಿಷಯವಾಗಿ ಜನರ ಅಭಿಪ್ರಾಯವು ಒಳ್ಳೆಯದಿದ್ದಿರಲಿಲ್ಲ. ಭವಾನಿಯು ಅತ್ಯಂತ ದುರ್ವ್ಯಸನಿ ಅವನ ಗೆಳೆಯರೆಲ್ಲರೂ ಅಂತಹರೆ, ಅಲ್ಲಿ ನಡೆಯದ ಅನಾಚಾರವಿಲ್ಲ, ಎಂದು ಊರಲ್ಲಿ ಗುಲ್ಲು ಇದ್ದಿತು. ಈಗ ಅನಂತನು ಹೆದರುತ್ತಿರುವುದು ಇದಕಾಗಿಯೆ. ತಾನು ಬಹಳ ಸಂಭಾವಿತನೆಂದು ಸೋಗನ್ನಿಟ್ಟುಕೊಂಡಿದ್ದನು. ಈಗ ಈ ಕೊಲೆಯ ನಿಮಿತ್ತದಿಂದ ತಾನು ಈ ಗುಂಪಿನ ಸದಸ್ಯನಿದ್ದುದು ಹೊರಬೀಳುವುದಲ್ಲ, ಎಂಬುದೆ ಅವನ ಹಿರಿಯ ಹೆದರಿಕೆ. ಇದಲ್ಲದೆ ಇನ್ನೂ ಒಂದು ಹೆದರಿಕೆ. ಒಂದು ವೇಳೆ ದೋಷಿಯು ಸಿಕ್ಕದಿದ್ದರೆ ಎಲ್ಲರೊಡನೆ ತನ್ನ ಮೇಲೂ ಸಂಶಯದ ನೆಳಲು ಬೀಳುವುದು. ಏನೆ ಇರಲಿ—ಭರಮನನ್ನು ಹಿಡಿದಿದ್ದಾರೆ, ಅವನೇ ದೋಷಿ, ಎಂದು ನಿಶ್ಚಿತವಾದರೆ ಒಂದು ಹೆದರಿಕೆ

ಯಾದರೂ ತಪ್ಪುವುದಲ್ಲ, ಎಂಬ ಆಶೆ ಅನಂತನಿಗಿದ್ದಿತು. ಆದರೆ ಆ ವಿಷಯವಾಗಿ ಪ್ರಯತ್ನ ಮಾಡಬೇಕೆಂದರೂ ಹೆದರಿಕೆ. ಇಂತಹ ಪುಕ್ಕನಾದ ತಾನು ಈ 'ಭೂತ ಬಂಗಲೆಗೆ' ಬರಲು ಒಪ್ಪಿದುದಾದರೂ ಹೇಗೆ, ಎಂಬುದು ಅವನಿಗೆಯೆ ಆಶ್ಚರ್ಯದ ಸಂಗತಿಯಾಗಿದ್ದಿತು. ಪಾಪ! ಅವನ ಹೆದರಿಕೆಗೆ ತುದಿ ಮೊದಲಿರಲಿಲ್ಲ. ವಾಡಿಕೆಯಂತೆ ಭವಾನಿಯ ಮೃತದೇಹವನ್ನು ಅವನೂ ನೋಡಲೇಬೇಕೆಂದು ಅಧಿಕಾರಿಗಳು ಹಟತೊಟ್ಟರು. ಅನಂತನ ಕಾಲುಗಳ ತ್ರಾಣವೆ ಕಡಿದುಹೋಯಿತು. ಆದೊಂದು ನಿಮಿಷ ಹೇಗೆ ಕಳೆಯಿತೊ! ಈಗ ಪ್ರತಿ ನಿಮಿಷ ಭವಾನಿಯ ಆ ಭಯವಿಕಾರದ ಮುಖ ಅನಂತನನ್ನು ಇದಿರಿಸುವಂತಿತ್ತು. ಗಟ್ಟಿಯಾಗಿ ಮುಖ ಮುಚ್ಚಿಕೊಂಡು ಚೀರಿ ಆ ಕೋಣೆಯಿಂದ ಅವನು ಓಡಿದಾಗ ಅವನನ್ನು ತಡೆಯಲು ಇದ್ದ ಪೋಲೀಸರೆಲ್ಲ ಬೇಕಾದರು. ಕಣ್ದೆರೆದಾಗ ಪೋಲೀಸರು ತನ್ನನ್ನು ಹಿಡಿದುದನ್ನು ನೋಡಿ ಮತ್ತೊಮ್ಮೆ ಚೀರಿ ಮೂರ್ಛಿತನಾಗಿದ್ದನು ಅನಂತ. ಇದೊಂದು ಮೋಹನನಿಗೆ ತಮಾಷೆಯ ವಿಷಯವೆ ಆಗಿದ್ದಿತು.

ಸದ್ಯಕ್ಕೆ ಅನಂತನ ತಮಾಷೆ ಮಾಡುವವನು ಮೋಹನನೊಬ್ಬನೆ ಆಗಿರಲಿಲ್ಲ. 'ಬೋಧಿ' ಎಂಬ ಹೆಸರನ್ನು ಮೇಲೆ ಹೇಳಿದೆಯಷ್ಟೆ. ಈ ತರುಣನ ಪೂರ್ತಿಯಾದ ಹೆಸರು ಬೋಧರಾಯ. ಆದರೆ ಇವನು ವಿಶೇಷವಾಗಿ ಪುಸ್ತಕ ಪಂಡಿತನಾದುದರಿಂದಲೂ ಅನುಕೂಲತೆಗಾಗಿಯೂ ಗೆಳೆಯರೆಲ್ಲರೂ 'ಬೋಧಿ' ಎಂದೇ ಅವನನ್ನು ಸಂಬೋಧಿಸುತ್ತಿದ್ದರು. ಯಾಕೆಂದರೆ ಅವನು ಕಟ್ಟದ ಪರೀಕ್ಷೆ ಇರಲಿಲ್ಲ, ಕೇಳದ ಕೆಲಸವಿರಲಿಲ್ಲ. ಎಲ್ಲ ಪರೀಕ್ಷೆಗಳಲ್ಲೂ ಉತ್ತಮವಾಗಿ ಉತ್ತೀರ್ಣನಾಗುತ್ತಿದ್ದಾಗ ಮುಂದೆ ಬೇಡಿದ ಕೆಲಸ, ಬೇಡಿದಷ್ಟು ಸಂಬಳ ತನಗೆ ದೊರೆಯುವುವೆಂದು ತಿಳಿದುಕೊಂಡಿದ್ದನು. ಕೊನೆಯ ಪರೀಕ್ಷೆಯಾಯಿತು, ಅರ್ಜಿಗೆ ಪ್ರಾರಂಭವಾಯಿತು, ಅರ್ಜನೆ ಮಾತ್ರ ಸೊನ್ನೆ ಎಂದು ತಿಳಿಯತೊಡಗಿತು. ಕೆಲವೇ ದಿವಸಗಳಲ್ಲಿ ಅವನಿಗೆ ಅಸಹ್ಯಕ್ಕಿಟ್ಟಿತು. ಮೊದಲು ಎಷ್ಟು ಉನ್ನತವಾದ ಆಕಾಂಕ್ಷೆ ಇದ್ದಿತೊ ಅಷ್ಟು ಉದ್ಧತವಾದ ಜುಗುಪ್ಸೆ ಮೂಡಿತು. ಭವಾನಿಯ ಪರಿಚಯ ಬಹುದಿವಸಗಳಿಂದಲೂ ಅವನಿಗಿದ್ದರೂ ಆ ಗೆಳೆಯರ ಲಂಪಟತನಕ್ಕಾಗಿ ಅವನಿಗೆ ತಿರಸ್ಕಾರವಿದ್ದಿತು. ಆದರೆ ಈಗ ತನ್ನ ಸ್ಥಿತಿಯನ್ನು ನೋಡಿ 'ಬೋಧಿ'ಗೆ ಜ್ಞಾನೋದಯವಾದಂತಾಯಿತು.

ತಾನು ಇಷ್ಟೊಂದು ಕಲಿತು ತಜ್ಞ ಮತ್ತು ಉಪಯುಕ್ತನೆನಿಸಿದರೂ ತನಗೆ ಸಮಾಜದಲ್ಲಿ ಸ್ಥಾನವಿಲ್ಲ, ಜೀವನದಲ್ಲಿ ಸುಖಸೌಕರ್ಯಗಳಿಲ್ಲ! ಆದರೆ ಭವಾನಿಯಂತಹನಿಗೆ ಹೇಳಿಕೊಳ್ಳುವಂತಹ ಶಿಕ್ಷಣವಿಲ್ಲ, ಉದ್ಯೋಗದ ಮಾತೇ ಇಲ್ಲ, ಆದರೂ ಅವರಿಗೆ ಸುಖ-ಸಮಾಧಾನಗಳಿವೆ, ಸ್ನೇಹಿತರಿದ್ದಾರೆ, ಸೇವಕರಿದ್ದಾರೆ! ಹೀಗೆ ನಿಜವಾಗಿ ಬೋಧಿಗೆ ಭವಾನಿಗಾಗಿ ಅತ್ಯಂತ ಅಸೂಯೆ ಇದ್ದಿತು. ತನಗೆ ಸ್ಥಿತಿ-ಸನ್ಮಾನಗಳಿಲ್ಲದಿದ್ದರೂ ತಾನು ಇವರೆಲ್ಲರಿಗಿಂತ ಹೆಚ್ಚಿನವ, ಎಂದು ಅವರೆದುರು ತೋರಿಸಬೇಕೆಂದೇ ಬೋಧಿಯು ಲಂಪಟತನದ ಲಹರಿಯನ್ನೇರಿದ್ದನು. ಒಂದು ದೃಷ್ಟಿಯಿಂದ ಭವಾನಿಯ ಮರಣದಿಂದ ಬೋಧಿಗೆ ಭವಾನಿಗಾಗಿದ್ದ ತಿರಸ್ಕಾರ ಹೆಚ್ಚಾಗಿದ್ದಿತು. 'ಎಂತಹ ಜೀವನ ಎಂತಹ ಮರಣ! ಭವಾನಿಯ ಮರಣ,'ಕೊಲೆ'ಎಂದು ಬೋಧಿಯು ನಿಸ್ಸಂದೇಹವಾಗಿ ತಿಳಿದಿದ್ದನು. ಆದರೆ ತನ್ನನ್ನು ಕೂಡ ಪೋಲೀಸರು—ವಾಡಿಕೆಯಿಂದೆ ಆಗಲಿ—ಪ್ರಶ್ನೆ ಮಾಡಿದರಲ್ಲ, ಎಂಬುದಕ್ಕಾಗಿ ಸತ್ತವನ ಮೇಲೆ ಇವನ ಸಿಟ್ಟು ಇನ್ನಿಷ್ಟಾಯಿತು. ಕೊಲೆ! ಕೊಂದವನಿಗೆ ಹೇಸಿತನ, ಸತ್ತವನಿಗೆ ಉಪಮರಣ! ತನ್ನಂತಹನನ್ನು ಇದರಲ್ಲಿ ಸೇರಿಸಬಹುದೆ? ಆದರೆ—ಲಂಪಟತನವನ್ನು ಬುದ್ಧಿಪೂರ್ವಕವಾಗಿ ಕೈಕೊಂಡ ಬೋಧಿಗೆ, ಅವನ ಶಿಕ್ಷಣದ ನಿಮಿತ್ತವಾಗಿಯೊ ಏನೊ, ಒಂದು ತರದ ಆನಂದವೂ ಆಗಿದ್ದಿತು. ಭವಾನಿಯನ್ನು ಯಾರು ಕೊಂದಿರಬಹುದು? ಆ ಕೊಲೆಗಡಕನ ಮನಃಸಂಸ್ಕಾರ ಎಂತಹದಿರಬಹುದು? ತಾನು ಈ ಹೇಸಿತನದಿಂದ ಅಲಿಪ್ತನೆಂಬ ಅಹಂಕಾರದ ಆತ್ಮವಿಶ್ವಾಸದಲ್ಲಿ ಮಿಕ್ಕವರು ತನ್ನಂತೆ ಇಲ್ಲ,ಎಂಬುದು ಅವನಿಗೆ ಸಂತೋಷದ ಬುದ್ಧಿಯಾಟವಾಗಿತ್ತು. ಅದಕಾಗಿಯೆ ಅನಂತನನ್ನು—ಹುಟ್ಟು ಹೇಡಿಯನ್ನು—ಕೆಣುಕುವುದರಲ್ಲಿ ಅವನಿಗೊಂದು ವಿನೋದ. ಮೋಹನನು ಕೂಡ ಅಚಲವಿಚಲನಾಗಿದ್ದಂತೆ ಇವನಿಗೆ ತೋರಿತು. ಎಲ್ಲಕ್ಕೂ ಹೆಚ್ಚಿನ ಮೋಜೆಂದರೆ ಇಂದುಮತಿಯ ವಿಷಯ. ಈ ರಣಗುಡುವ ಮನೆಯಲ್ಲಿ ಹೆದರಿದ ಜಿಂಕೆಯಂತೆ ಸದ್ದಿಲ್ಲದೆ ಇವಳು ಇತ್ತಿಂದತ್ತ ಸುಳಿದಾಡುವುದನ್ನು ಕಣ್ಣಿಟ್ಟು ನೋಡಿದ್ದನು ಬೋಧಿ. ಇವಳೇಕೆ ಹೆದರಬೇಕು? ಹೆಂಗುಸಾದ ತನ್ನನ್ನು ಕೊಲೆಯ ವಿಷಯದಲ್ಲಿ ಯಾರೂ ಸಂಶಯಕ್ಕಿಳಿಸಲಾರರೆಂಬ ಆತ್ಮವಿಶ್ವಾಸವಿರಬಾರದೆ ಇವಳಿಗೆ? ಅಥವಾ—

ಬೋಧಿಯು ಹೆಮ್ಮೆಯಿಂದ ಮುಗುಳ್ನಗೆಯನ್ನು ಸೂಚಿಸುವನು, ಯಾಕೆಂದರೆ ಯಾರಿಗೂ ಹೊಳೆಯದ ಒಂದು ಶೋಧವನ್ನು (ತರ್ಕಬುದ್ಧಿಯಿಂದ) ಮಾಡಿರುವನೆಂಬ ಹೆಮ್ಮೆ ಇವನಿಗೆ—ಅಥವಾ ಇಂದುಮತಿಯ ಹೆದರಿಕೆಗೆ ಕಾರಣವಿರಬಹುದೆ? ಮೃತನ ಮೈಮೇಲೆ ಉಗುರಿನ ಗಾಯಗಳಿವೆಯಂತೆ! ಹೆಣ್ಣಿಗೆ ತಕ್ಕುದಾದ ಸಾಧನವಿದು, ಸಾಹಸವಿದು, ಎಂದು ಬೋಧಿಯು ಮತ್ತೆ ತರ್ಕದಲ್ಲಿ ಮಗ್ನನಾಗಿ ಸುಳಿದಾಡುವನು.

ಇಂದುಮತಿಯು ವಿಶೇಷವಾಗಿ ಹೆದರಿದ್ದಳೆಂಬದು ನಿಜ ಆದರೆ ಬೋಧಿ ತಿಳಿದುಕೊಂಡ ಕಾರಣಗಳನ್ನು ಮಾತ್ರ ಆಕೆ ತಿಳಿದುಕೊಂಡಿರಲಿಲ್ಲ. ಇಂದೂನ ಹೆದರಿಕೆಗೆ ಎರಡು ತರದ ಕಾರಣಗಳಿದ್ದುವು ಮೊದಲನೆಯದು, ತನ್ನ ಭವಿತವ್ಯದ ವಿಷಯವಾಗಿ; ತಾನು ಕಲಿತಾಕೆ; ಭವಾನಿಯು ಶಿಕ್ಷಣ ಹೇಳಿಕೊಳ್ಳುವಂತಹದಲ್ಲ; ಆದರೂ ತನ್ನ ಮನಸ್ಸು ಎಂದಿನಿಂದಲೂ ಭವಾನಿಯ ಕಡೆಗೇ ಎಳೆದು ಅದನ್ನವಳು ತಡೆದಿರಲಿಲ್ಲ. ಇಷ್ಟೇಕೆ? ಸಾಮಾಜಿಕ ವ್ಯವಹಾರದಲ್ಲಿ ದಿಟ್ಟಳೂ ಸ್ವತಂತ್ರಬುದ್ಧಿಯವಳೂ ಆಗಿದ್ದರೂ ಭವಾನಿಯ ವಿಷಯದಲ್ಲಿ, ಆತನ ಸಹವಾಸದಲ್ಲಿ ಆಕೆ ಆನಂದದಿಂದ, ಸ್ವಸಂತೋಷದಿಂದ ವಿಧೇಯಳಾಗಿರುತ್ತಿದ್ದಳು. ಮೊದಮೊದಲು ತನ್ನ ಪ್ರವೃತ್ತಿ ತನಗೆಯೆ ಸರಿಬಂದಿರಲಿಲ್ಲ; ಆದರೆ ಕೊನೆಗೆ ತನ್ನನ್ನೇ ಮೀರಿಯೇ ಈ ವೃತ್ತಿ ಪ್ರಕಟವಾಗುವುದನ್ನು ಕಂಡು ಆಕೆ ಸಮಾಧಾನದಿಂದಲೆ ಸುಮ್ಮನಾಗಿದ್ದಳು. ಭವಾನಿಯ ಮೇಲೆ ತನ್ನ ಪ್ರೇಮವಿದೆ, ಎಂದೇ ಹೇಳಬೇಕಾಯಿತು. ಆದರಂತೆ ಭವಾನಿಯಾದರೂ ತನ್ನನ್ನು ಪ್ರೀತಿಸುವನೆಂದು ಆಕೆಯ ಮನವರಿಕೆಯಾಗಿತ್ತು. ಈ ಪರಸ್ಪರ ಪ್ರೀತಿಗೆ ಮದುವೆಯೆ ಕೊನೆಯಾಗಬಾರದು, ಎಂದು ಚೇಷ್ಟೆಮಾಡಿ ಭವಾನಿಯು ಮದುವೆಯನ್ನು ಮುಂದೆ ನೂಕುತ್ತಿದ್ದನು. ಇಂದುಮತಿಗೆ ಇದು ಸರಿ ಎನಿಸದಿದ್ದರೂ ಆವನ ಇಚ್ಛೆ ಎಂದು ಒಪ್ಪಿದ್ದಳು. ಯಾಕೆಂದರೆ, ಭವಾನಿಯ ಸಹವಾಸದಲ್ಲಿ ಆತನ ನೆರಳಿನಂತೆಯೆ ನಡೆದುಕೊಳ್ಳಲು ಆಕೆಗೆ ಈಚೀಚೆಗೆ ಅಭಿಮಾನವೆನಿಸುತ್ತಿದ್ದಿತು. ಆದರೆ ಈಗ? ಒಮ್ಮೆಲೆ ಆಕೆಯ ಬಾಳಿನ ದಾರಿಯೆ ಕತ್ತಲಾದಂತಾಯಿತು. ಭವಾನಿಯನ್ನೆ ಹೆಚ್ಚಾಗಿ ಆಧಾರವಾಗಿಟ್ಟುಕೊಂಡಂದಿನಿಂದ ತನ್ನ ಮುಂಚಿನ ಸ್ವಭಾವವಾದ ದಿಟ್ಟತನ, ಸ್ವಾತಂತ್ರ್ಯವೃತ್ತಿ ಆಕೆಗೆ ಮರೆತಂತಾಗಿದ್ದುವು. ಮೊದಲೇ ಬಡ

ತನದ ಮನೆಯಲ್ಲಿ ಹುಟ್ಟಿದವಳು. ಭವಾನಿಯ ಸಹವಾಸದಲ್ಲಿ ಸೇರಿದ್ದರಿಂದ ಜನರ ಅಸಡ್ಡೆಗೂ ಅಪವಾದಕ್ಕೂ ಕಾರಣಳಾಗಿದ್ದಳು. ಇನ್ನು ಆ ಭವಾನಿಯೆ ಹೋದ ಮೇಲೆ ತನ್ನ ಗತಿ? ಭವಾನಿಯು ಒಮ್ಮೆಲೆ ಹೋದುದಾದರೂ ಹೇಗೆ? ಇಲ್ಲಿ ಆಕೆಯ ಹೆದರಿಕೆಯ ಇನ್ನೊಂದು ಕಾರಣವಿದ್ದಿತು. ಇಂತಹ ಕ್ರೂರ, ಹೇಸಿ, ನೀಚ ಕೃತ್ಯದಲ್ಲಿ ತಾನು ಯಾರ ಸಂಶಯಕ್ಕೂ ಒಳಗಾಗಲಾರಳೆಂಬ ಗಟ್ಟಿಯಾದ ಮನವರಿಕೆ ಆಕೆಗಿತ್ತು. ಹೆಚ್ಚೆಂದರೆ, ಕಿಡಿಗೇಡಿತನದ ಕುತೂಹಲಕ್ಕೆ ಆಸ್ಪದ ದೊರೆತು, ತನ್ನ ಮತ್ತು ಭವಾನಿಯ ಕಾಗದಗಳಿಗೆ ಪ್ರಸಿದ್ಧಿ ದೊರಕಬಹುದು. ಭವಾನಿಯ ಪ್ರೀತಿಗಾಗಿ ಅಷ್ಟನ್ನು ತಡೆದುಕೊಳ್ಳಲು ತಾನು ಸಿದ್ಧಳಿದ್ದಳು. 'ಆ ಕಾಗದ' ವೂ ಬಯಲಿಗೆ ಬರಬಹುದೆ? 'ಆ ಕಾಗದ' ಎಂದರೆ ಇಂದೂ ಸಿಟ್ಟಿನ ಭರದಲ್ಲಿ ತಾನು ಆತ್ಮಹತ್ಯೆ ಮಾಡಿಕೊಳ್ಳುವಳೆಂದು ಬರೆದ ಕಾಗದ. ಆಗ ತಾನು ನಿಜವಾಗಿಯೆ ಆತ್ಮಹತ್ಯೆ ಮಾಡಿಕೊಂಡಿದ್ದರೆ? ಸಿಟ್ಟಿನ ಭರದಲ್ಲಿ ಭವಾನಿಗೆ ಎಷ್ಟೊ ಕಟುಕ ಮಾತುಗಳನ್ನು ಬರೆದಿದ್ದಳು. ನಿಜವಾಗಿ ಅದರಲ್ಲಿ ಕಟುಕ ಬುದ್ಧಿ ಇರಲಿಲ್ಲ. ಕೆಣಕುವ ಇಚ್ಛೆ ಇದ್ದಿತು, ಎಂಬುದೊಂದು ಈಗ ಆಕೆಗೆ ಸಮಾಧಾನ ತಂದಿತು. ಅದನ್ನು ಬರೆಯಲು ಇನ್ನೂ ಒಂದು ಕಾರಣವೆಂದರೆ, ಅನಂತ. ಅನಂತನು ಏನೇನೊ ಭವಾನಿಯ ವಿರುದ್ಧ ಸುಳ್ಳು ಮಾತುಗಳನ್ನು ಹೇಳಿದ್ದನು. ಅನಂತನಿಗಾಗಿಯೆ ಆಕೆಗೆ ಈಗ ಹೆದರಿಕೆ. ಯಾಕೆಂದರೆ—ಅನಂತನೂ ತನ್ನನ್ನು ಪ್ರೀತಿಸುತ್ತಿದ್ದುದಾಗಿಯೂ ಅದಕಾಗಿ ಭವಾನಿಯನ್ನು ಅವನು ದ್ವೇಷಿಸುತ್ತಿದ್ದುದೂ ಆಕೆ ಮರೆತಿರಲಿಲ್ಲ. ಅನಂತನ ಪ್ರೀತಿಸುವ ರೀತಿಯಾದರೂ ಎಂತಹದು! ಅಸೂಯೆಯ ಅಗ್ನಿಕುಂಡನವ. ಇಂದುಮತಿ ತನ್ನನ್ನು ಪ್ರೀತಿಸದಿದ್ದರೆ ತಾನು ಭವಾನಿಯನ್ನು ಕೊಲ್ಲಲು ಕೂಡ ಸಿದ್ಧನೆಂದು ಎಷ್ಟೊ ಸಲ ಹರಟಿದ್ದನು. ಇಂದುಮತಿಯ ಪ್ರೀತಿಗಾಗಿ ತಾನು ಬೇಕಾದ್ದನ್ನು ಮಾಡಬಲ್ಲನೆಂದಾಗ ಈ ಪುಕ್ಕನ ಪ್ರತಿಜ್ಞೆಗಾಗಿ ಆಕೆ ನಕ್ಕಿದ್ದಳು. ಅದರಿಂದ ಕನಲಿದ ಅನಂತನು ತಾನು ಪುಕ್ಕನಲ್ಲವೆಂದು ತೋರಿಸಲು ಈ ಮನೆಗೆ ಬರಲು ಒಪ್ಪಿದನು. ಅಥವಾ—ಅನಂತನು ಬರಲು ಬೇರೆ ಕಾರಣವಿದ್ದಿತೆ? ಎಷ್ಟು ವಿಚಾರ ಮಾಡಿದರೂ ಇಂದುಮತಿಗೆ ಈ ಮಾತಿನ ನಿರ್ಣಯವೆ ಆಗಲಿಲ್ಲ. ಭವಾನಿಗೆ 'ಹಾಗಾದ' ಬೆಳಗಿನಿಂದ ಅನಂತನ ವರ್ತನೆಯನ್ನು ನೋಡಿ

ಅವಳ ಸಂದೇಹಕ್ಕೆ ಪುಟುವು ದೊರೆಯುವಂತಿತ್ತು. ಆ ಮಾತನ್ನು ಎತ್ತಿದೊಡನೆ ಅನಂತನ ಮುಖ ಪೆಚ್ಚಾಗುತ್ತಿತ್ತು. ಆ ಕೋಣೆಯ ದಿಕ್ಕಿಗೆ ಕೂಡ ಅನಂತನು ಸುಳಿಯುತ್ತಿರಲಿಲ್ಲ; ತುಸು ಸದ್ದಾದಲ್ಲಿ ಬೆದರುತ್ತಿದ್ದನು. ಯಾರನ್ನೂ ಮುಖ ದಿಟ್ಟಿಸಿ ನೋಡುತ್ತಿರಲಿಲ್ಲ, ಯಾವಾಗಲೂ ಮುಖದಲ್ಲಿ ಒಂದು ತರದ ಗಾಬರಿಯ ಕಳೆ ಇರುತ್ತಿದ್ದಿತು.

ಅನಂತನ ಈ ಮುಖಲಕ್ಷಣಗಳನ್ನು ಮೋಹನನೂ ಕಂಡುಕೊಂಡಿದ್ದನು. ಒಂದೆರಡು ಸಲ ಅನಂತನನ್ನು ಸೂಕ್ಷ್ಮವಾಗಿ ಪರೀಕ್ಷಿಸುವ ಉದ್ದೇಶದಿಂದ ಅವನೊಡನೆ ಮಾತುಕತೆಗಳನ್ನು ಬೆಳೆಸಿದನು. ಇಂತಹ ಪರಿಸ್ಥಿತಿಯಲ್ಲೂ ಮೋಹನನು ಉಲ್ಲಾಸದಿಂದಿದ್ದುದನ್ನು ನೋಡಿ ಅನಂತನಿಗೆ ಮೊದಲು ಆಶ್ಚರ್ಯವಾಯಿತು. ಆದರೆ ಕ್ರಮೇಣ ಅವನಿಗೆ ಸಂಶಯ ಬರತೊಡಗಿತು. ಮೋಹನನು ಬೇಕೆಂತಲೆ ಹೆಚ್ಚಿನ ಉಲ್ಲಾಸವನ್ನು ತೋರಿಸುತ್ತಿರಬಹುದು, ಏನನ್ನೋ ಮುಚ್ಚಲು ಯತ್ನವಿರಬಹುದು, ಅಥವಾ ಘೋರಕೃತ್ಯವನ್ನೇ ಮುಚ್ಚಲು ಉಲ್ಲಾಸದ ಈ ಹಸನಾದ ಬಟ್ಟೆಯಂತಹ ಆಚ್ಛಾದನವಿರಬಾರದೇಕೆ?—ಎಂಬ ವಿಚಾರದಿಂದ ಅನಂತನ ಮೈ ಜುಮ್ಮೆಂದಿತು. ಅಬ್ಬಾ! ಮೋಹನನು ಇಂತಹ ಕೃತ್ಯವನ್ನು ಮಾಡಿರಬಹುದೆ? ಪರೀಕ್ಷೆಯನ್ನಾದರೂ ಮಾಡೋಣ, ಎಂದು ಅನಂತನೂ ಮೋಹನನೊಡನೆ ಮಾತುಕತೆಗಳನ್ನು ಬೆಳೆಯಿಸತೊಡಗಿದನು.

ಬೋಧಿಯೊಬ್ಬನಿಗೆ ಮಾತ್ರ ಪರಿಸ್ಥಿತಿ ಅಸಹ್ಯವಾಗತೊಡಗಿತು. ಮನೆಯನ್ನು ಬಿಟ್ಟುಹೋಗುವದಂತೂ ಉಳಿಯಿತು, ಹೊರಗೆ ತಿರುಗಾಡಲು ಕೂಡ ನಿರ್ಬಂಧವಿದ್ದಿತು. ಮನೆಯೊಳಗೆ ಹೊತ್ತುಗಳೆಯಲು ಸಾಧನವಿಲ್ಲದಂತಾಯಿತು. ವಿಶೇಷವಾಗಿ ಯಾವ ವಸ್ತುವಿಗೂ ಕೈ ಹಚ್ಚಬಾರದೆಂದು ಪೋಲೀಸ ಅಧಿಕಾರಿಗಳು ವಿಧಿಸಿದ್ದರಿಂದ ಬೋಧಿಯು ತನ್ನ ಪುಸ್ತಕಗಳನ್ನು ಓದುವದನ್ನೂ ಬಿಟ್ಟುಕೊಟ್ಟಿದ್ದನು. ಮಾತನಾಡುವದೆಂದರೆ ಮತ್ತೆ ಘಟಿಸಿದ ಅಪಮರಣವೆ ವಿಷಯ. ಅದಕ್ಕೆ ಇಷ್ಟೊಂದು ಮಹತ್ವವನ್ನು ಕೊಡುವುದು ಬೋಧಿಗೆ ಹೇಗೆ ಸಹನವಾದೀತು? ಆದ್ದರಿಂದ ಕೊನೆಗೆ ಅವನಿಗೆ ಪುಸ್ತಕಗಳ ಅಪೇಕ್ಷೆಯೆ ಹೆಚ್ಚಾಯಿತು. ತನ್ನಂತೆ ಓದುವ ಅಭಿರುಚಿ ಇದ್ದವನೆಂದರೆ ಅನಂತನೊಬ್ಬನೆ. ಅವನಿಂದ ಒಂದೆರಡು ಪುಸ್ತಕಗಳನ್ನು

ತೆಗೆದುಕೊಂಡಿದ್ದನು. ಆದರೆ ಈಗ ಅನಂತನು ಕೇಳಿದರೆ ಮತ್ತೆ ಕೊಡ ಬಹುದೆ, ಎಂದು ಬೋಧಿಗೆ ಸಂಶಯವಿದ್ದಿತು. ಯಾಕೆಂದರೆ- ಬೋಧಿಯ ಕೈಯಲ್ಲಿ ಪುಸ್ತಕಗಳು ತಡೆಯುತ್ತಿರಲಿಲ್ಲ. ವಿಶೇಷವಾಗಿ ಮೇಲಿನ ಪುಟ ಗಳು ಕಳಚತಕ್ಕುವೆ. ಅನಂತನ ಎರಡೂ ಪುಸ್ತಗಳ ಹಣೇಬರಹ ಹೀಗಾಗಿ ದ್ದಿತು. ಅದು ಅನಂತನಿಗೆ ತಡೆಯುತ್ತಿರಲಿಲ್ಲ. ಯಾಕೆಂದರೆ ಪುಸ್ತಕವನ್ನು ಕೊಂಡಾಕ್ಷಣ ಮೇಲಿನ ಎರಡು ಪುಟಗಳಲ್ಲಿ ತನ್ನ ಹೆಸರನ್ನು ಬರೆದಿಡು ವುದು ಅವನದೊಂದು ಚಟವಾಗಿದ್ದಿತು. ಬೋಧಿಯ ಅಲಕ್ಷ್ಯದ ಅವ್ಯವ ಸ್ಥೆಗಾಗಿ ಆ ಪುಟಗಳೆ ಹರಿದುಹೋಗಲು ಅನಂತನು ನೊಂದುಕೊಂಡಿದ್ದನು. ಮೇಲೋಲೆಯಲ್ಲಿ ಹೆಸರನ್ನಿಡುವುದು ಅನಂತನದೊಂದು ವ್ಯಸನವೆ ಆಗಿದ್ದಿ ತೆಂಬುದು ಅವನು ನೊಂದು ಮಾತನಾಡಿದ ಬಿರುನುಡಿಗಳಿಂದ ಬೋಧಿಗೆ ತಿಳಿದಿತ್ತು. ಅಂತೂ ಅನಂತನಿಗೆ ಪುಸ್ತಕವನ್ನು ಬೇಡುವಂತಿಲ್ಲ. ಹೀಗೆ ಬೋಧಿಯ ಬೇಜಾರ ಬಲಿಯಿತು. ಇತ್ತ ಈ ಹಾಳ ಪೋಲೀಸರು ಅಪರಾ ಧಿಯನ್ನಾದರೂ ಬೇಗ ಗೊತ್ತುಪಡಿಸುವದಿಲ್ಲವಲ್ಲ, ಎಂಗೂ ಬೋಧಿಗೆ ತಲೆ ನೋವು. ಭರಮನನ್ನು ಬಂಧಿಸಿದ ವರೆಗೆ ನಿಜವಾದ ಅಪರಾಧಿ ಸಿಕ್ಕುವದೆ ಇಲ್ಲ, ಎಂದು ಅವನೂ ತಿಳಿದಿದ್ದನು. ಯಾಕೆಂದರೆ ಅನೇಕರಂತೆ ಅವನೂ ಭರ ಮನು ನಿರ್ದೋಷಿ ಎಂದೇ ನಿಶ್ಚಯದಿಂದ ಹೇಳುತ್ತಿದ್ದನು.

ಮನೆಯಲ್ಲಿಯ ವಾತಾವರಣವು ಹೀಗೆ ಎಲ್ಲರಿಗೂ ಅಸಹ್ಯವಾಗತೊಡ ಗಿತು. ಅದರೊಳಗಂತೂ ಮನೆಗೆ ಸೇವಕನಾಗಿದ್ದ ಭರಮಪ್ಪನೂ ಕೆಲಸಕ್ಕೆ ಇಲ್ಲದಂತಾಗಲು ಎಲ್ಲರೂ ತೊಂದರೆಗೆ ಸಿಕ್ಕಿಕೊಂಡರು. ಕೊನೆಗೆ ಮೋಹ ನನೆ ಒಂದು ಯುಕ್ತಿಯನ್ನು ಶೋಧಿಸಿದನು. ಸದ್ಯಕ್ಕೆ ಇಂದುಮತಿಯೆ ಎಲ್ಲರ ಊಟತೀಟದ ವ್ಯವಸ್ಥೆಯನ್ನು ಮಾಡುತ್ತಿದ್ದುದರಿಂದ ಅವಳಿಗೆ ವೇಳೆ ಅಷ್ಟೊಂದು ಭಾರವಾಗಿರಲಿಲ್ಲ. ಆದರೆ ಮನೆಯ ಮುಕ್ಕ ಕೆಲಸಕ್ಕೆ ಯಾರೂ ಇಲ್ಲವೆ ಇಲ್ಲವೆಂಬುದು ಮೋಹನನಿಗೆ ಅನುಕೂಲವಾಯಿತು. ಯಾರಾ ದರೂ ಆ ಕೆಲಸವನ್ನು ಕೈಕೊಳ್ಳಲೇಬೇಕೆಂದು ಅವನು ಸೂಚಿಸಿದನು. ಅನಂ ತನು ಗದಗದ ನಡುಗಿದನು. ಮನೆತುಂಬ ಸುಳಿದಾಡುತ್ತ ಕೆಲಸ ಮಾಡು ವುದು ಹೇಗೆ? ಬೋಧಿಯಂತೂ ಅತ್ಯಂತ ತಿರಸ್ಕಾರದಿಂದ ಮ..ಗು ಏರಿಸಿ ದನು. ಈ ಹಾಳು ಸಹವಾಸಕ್ಕೆ ಈಗಾಗಲೆ ತನ್ನ ಹೆಸರಿಗೆ ಸಾಕಷ್ಟು ಮಸಿ

ಮುತ್ತಿದೆ, ಇನ್ನು ಆಳಿನ ಕೆಲಸವನ್ನೂ ಮಾಡಿ ತಾನು ತನ್ನ ದರ್ಜೆಗೆ ಕುಂದು ತರಲಾರ, ಎಂದನು. ಅಂತೂ ಉಳಿದವನು ಮೋಹನನೊಬ್ಬನೆ. ಅವನು ಉಸಿರೆಳೆದು, ಅನಿವಾರ್ಯವೆಂದು ತಾನೇ ಆ ಕೆಲಸಕ್ಕೆ ಅಣಿಯಾದನು. ಇಂದುಮತಿ 'ಬೇಡ' ಎಂದಳು. ಇನ್ನು ಇಲ್ಲಿ ಮನೆಮಾಡಿಕೊಂಡಿರುವವರು ಯಾರು? ಯಾಕೆ ವ್ಯರ್ಥ ಮೈ ದಣಿಸಿಕೊಳ್ಳುವುದು ಈ ಕಸಕಡ್ಡಿಗಳನ್ನು ಎತ್ತಾಡಿ—ಎಂದು ಆಕೆ ವಾದಿಸಿದಳು. ಅನಂತನಂತೂ ಕಣ್ಣು ಮುಚ್ಚಿ 'ಮನೆತುಂಬ ಒಬ್ಬನೇ ಸುಳಿದಾಡುವುದು ಶುದ್ಧ ದುರ್ಬುದ್ಧಿ' ಎಂದನು. ಬೋಧಿಯು ಮಾತ್ರ ತಾನು ಎಲ್ಲರಿಗಿಂತ ಬಲ್ಲವನೆಂಬ ಹೆಮ್ಮೆಯಿಂದಲೆ ಮಾತನಾಡಿದನು. 'ನೀವೆಲ್ಲರೂ ಹುಚ್ಚರು! ಮನೆಯಲ್ಲಿ ಯಾವ ವಸ್ತುವನ್ನೂ ಮುಟ್ಟಬಾರದೆಂಬ ಕಾಯಿದೆ ಇದೆ, ಪೋಲೀಸರ ಆಜ್ಞೆ ಇದೆ. ಹೀಗಿರುವಾಗ—' ಎಂದೂ ಇನ್ನೂ ಏನೇನು ಹೇಳುವವನಿದ್ದನೊ! ಅಷ್ಟರಲ್ಲಿ ಮೋಹನನೆ ನಗೆಯಿಂದ ಅವನಿಗೆ ತಡೆಹಾಕಿದನು. 'ಇಡಿಯ ಮನೆಯ ವಿಷಯವಾಗಿ ಆ ಮಾತಲ್ಲ. ಕೇವಲ ಅದೊಂದು ಕೋಣೆಯಲ್ಲಿ ಯಾರೂ ಕಾಲಿಡಬಾರದೆಂದು ಹೇಳಿದ್ದಾರೆ' ಎಂದನು. ಆದರೆ ಬೋಧಿ ವಾದದಲ್ಲಿ ಸೋಲುವನೆ? 'ಬೇಕಾದ್ದನ್ನು ಮಾಡು. ಕಳ್ಳನ ಜೀವ ಹುಳ್ಳುಳ್ಳು!' ಎಂದು ಹಂಗಿಸಿದನು. ಮೋಹನನು ಶಾಂತನಾಗಿಯೆ ಆ ಮಾತನ್ನು ಕೇಳಿಕೊಂಡನು. ಕೊನೆಗೆ ಬೋಧಿಯನ್ನು ಚೆನ್ನಾಗಿ ದಿಟ್ಟಿಸಿ 'ಬೋಧಿ, ಒಂದು ಮಾತನ್ನು ಹೇಳುವೆ. ನೀನು ನನ್ನನ್ನು ಹಂಗಿಸಿದರೂ ಚಿಂತೆ ಇಲ್ಲ. ಯಾಕೆಂದರೆ ಸದ್ಯಕ್ಕೆ ನಾವು ನಾಲ್ವರೂ ಪೋಲೀಸರ ದೃಷ್ಟಿಯಿಂದ ಕಳ್ಳರೆ—ಎಂದರೆ, ನಮ್ಮೆಲ್ಲರ ಮೇಲೂ ಅವರ ಸಂಶಯವಿರಬಹುದಾಗಿದೆ. ಆದ್ದರಿಂದ ಆ ಹೆದರಿಕೆ ನನಗಿಲ್ಲ. ಆದರೆ ನಿಮ್ಮೊಡನೆ ನಿರರ್ಥಕ ಹರಟೆ ಹೊಡೆದು ತಲೆನೋವು ತಂದುಕೊಳ್ಳುವುದಕ್ಕಿಂತ ಮನೆಗೆಲಸ ಮಾಡಿ ವೇಳೆ ಕಳೆಯುವದು ನನಗೆ ಇಷ್ಟವಾಗಿದೆ. ಬೇಕಾದರೆ ನಾನು ಹೀಗೆ ಮಾಡಿದೆನೆಂದು ಪೋಲೀಸರಿಗೆ ನೀನು ಹೇಳು' ಎಂದವನೆ ಮೋಹನನು ಕೆಲಸಕ್ಕೆ ಸಜ್ಜಾಗಿ ಕೋಣೆಯಿಂದ ಹೊರಬಿದ್ದನು. ಬೋಧಿಗೆ ಅವಮಾನವಾಯಿತು. 'ಪೋಲೀಸರಿಗೆ ಹೇಳುವಂತಹದಿದ್ದರೆ ಹೇಳಿಯೆ ತೀರುವೆ. ಆ ದಡ್ಡ ಹಳ್ಳಿಗನನ್ನು ಬಿಡಿಸಿದರೆ ಅದೊಂದು ಸತ್ಕಾರ್ಯವಾದೀತು' ಎನ್ನುತ್ತ ಅವನೂ

ಹೊರಬಿದ್ದನು. ಅನಂತನು 'ಬೇಡ, ಬೇಡ' ಎಂದು ಚೀರುತ್ತ ಮುಖ ಮುಚ್ಚಲು ಇಂದುಮತಿಗೆ ಆಶ್ಚರ್ಯವಾಯಿತು. ಹೃದಯದಲ್ಲಿ ಕನಿಕರವೂ ತೆರೆಯೆದ್ದಿತು.

## ೩ ದೆವ್ವಿನ ಮನೆಯಲ್ಲಿ

ಭರಮಪ್ಪನೊಬ್ಬನಿಗೆ ಮಾತ್ರ ಯಾವ ತೊಂದರೆಯೂ ಇದ್ದಿರಲಿಲ್ಲ ತಾನು ಬಂಧನದಲ್ಲಿದ್ದುದರ ಮಹತ್ವವೇ ಅವನಿಗೆ ತಿಳಿದಿರಲಿಲ್ಲವೋ ಅಥವಾ ತನ್ನ ನಿರ್ದೋಷದ ಬಗ್ಗೆ ಅಷ್ಟೊಂದು ಆತ್ಮವಿಶ್ವಾಸವಿದ್ದಿತೋ—ಅಂತೂ ಅವನ ಮನಸ್ಸು ಸ್ಥಿಮಿತವನ್ನು ಬಿಟ್ಟಿರಲಿಲ್ಲ. 'ಹರಿಶ್ಚಂದ್ರ ರಾಜಾನ ಕತೆ ಕೇಳಿಲ್ಲ? ಅದ್ಯಾಕೋ—ದೊಡ್ಡಾಟಾ ನೋಡಿಲ್ಲ?' ಎಂದು ಭರಮನು ತನ್ನನ್ನು ತಾನೇ ಪ್ರಶ್ನೆ ಮಾಡಿಕೊಳ್ಳುವನು. ಆ ಪ್ರಶ್ನೆಯ ತಾತ್ಪರ್ಯವೆಂದರೆ—ಹರಿಶ್ಚಂದ್ರನಂತೆ ತಾನೂ ಸತ್ಯಕ್ಕಾಗಿ ದುಃಖವನ್ನು, ಕಷ್ಟವನ್ನು, ತಾಪತ್ರಯಗಳನ್ನು ಸಹಿಸುತ್ತಲಿದ್ದಾನೆಂದು. ಹರಿಶ್ಚಂದ್ರನಂತೆಯೆ ಕೊನೆಗೆ ತಾನೂ ಸುಖ-ಸಂತೋಷಗಳಿಂದ ಬಾಳುವನೆಂಬ ಭರವಸೆಯೂ ಅವನಿಗೆ ಇದ್ದಿತು. 'ಸತ್ಯ' ಎಂದರೆ ಭವಾನಿಯ ಅಪಮರಣದಲ್ಲಿ ತನ್ನದೇನೂ ಸಂಬಂಧವಿಲ್ಲವೆಂಬುದಿಷ್ಟೆ. ಆದರೆ ಸತ್ಯದ ಈ ವ್ಯಾಖ್ಯೆಯಲ್ಲಿ ಭರಮನಿಗೂ ಪೋಲೀಸ ಅಧಿಕಾರಿಗಳಿಗೂ ಭಿನ್ನಾಭಿಪ್ರಾಯವಾಗಿದ್ದಿತೆನಬಹುದು. ಭವಾನಿಯ ಕೊಲೆಯಲ್ಲಿ ಭರಮನ ಸಂಬಂಧವಿಲ್ಲ,ಎಂದಿಷ್ಟೆ ಅಲ್ಲದೆ ಯಾರ ಸಂಬಂಧವಿದೆ, ಎಂಬುದನ್ನು ಶೋಧಿಸುವುದೆ ಅಧಿಕಾರಿಗಳಿಗೆ 'ಸತ್ಯ' ಎನಿಸಿದ್ದಿತು. ಅದಕಾಗಿ ಅವರು ಭರಮನೊಡನೆ ನಾನಾರೀತಿಯಿಂದ ಸಂಭಾಷಣೆಯನ್ನು ಸಾಧಿಸತೊಡಗಿದರು. ಅಧಿಕಾರಿಗಳು ಹೆಚ್ಚೆಚ್ಚು ಪ್ರಯತ್ನಪಟ್ಟಂತೆ ಭರಮನು ಬುದ್ಧಿಪೂರ್ವಕವಾಗಿಯೆ ಒರಟು ಉತ್ತರಗಳನ್ನು ಕೊಡತೊಡಗಿದನು. ಭರಮನಿಂದ ಒಂದೇ ಉತ್ತರವನ್ನು ಕೇಳಿಕೇಳಿ ಕೇಸರಾದ ಅಧಿಕಾರಿಯೊಬ್ಬನು ಕೊನೆಗೆ ಕೈಚೆಲ್ಲಿ, 'ಕೊಲ್ಲುವುದು ಕೊಂದೆ, ಯಾಕ ಕೊಂದೆ ಇಷ್ಟು ಹೇಳಬಾರದೆ?' ಎಂದು ಕೆಣಕುವ ಪ್ರಶ್ನೆಯನ್ನು ಕೇಳಿದನು. ಭರಮನ ಉತ್ತರವು ಸಿದ್ಧವೆ ಇದ್ದಿತು; 'ನನ್ನ ದತ್ತುಕಾ ಮಾಡಿಕೋಳಾಕವಲ್ಲೆ ಅಂದ, ಅದಕ' ಎಂದು! ಭರಮನ ಮತ್ತು ಅಧಿಕಾರಿಗಳ ವಾಗ್ವಾದವು ಕೇಳುವವರಿಗೆ ಮನರಂಜನೆಯನ್ನುಂಟುಮಾಡಬಹುದಾಗಿತ್ತು.

'ನಿನ್ನ ಊರು ಯಾವುದು ?'

'ಇದ್ದದ್ದು ಊರು, ಗೆದ್ದದ್ದು ರಾಜ್ಯ'

'ಪ್ರಶ್ನೆಗೆ ಸರಳ ಉತ್ತರ ಕೊಡು!' ಎಂದು ಅಧಿಕಾರಿ ಗರ್ಜಿಸುವನು.

'ರಾಜಾ ಮಂತ್ರಿ ಜೋಡಿ ಮಾತಾಡೋದು ಸರಳ ಅಲ್ಲ?' ಎಂದು ಭರಮನ ಮರುಸವಾಲು.

'ನೀನು ಈ ಊರಿಗೆ ಯಾಕೆ ಬಂದೆ?'

'ಹಿಂದಿನ ಊರಾಗ ಎಲ್ಲಾರ ಖೂನಿ (=ಕೊಲೆ) ಮಾಡಿದೆ, ಅದಕ ಮುಂದಿನ ಊರ ಖೂನಿಗೆ....'

'ಉದ್ಧಟ ಉತ್ತರ ಕೊಟ್ಟರೆ ಸರಳ ಮಾತಾಡಲಿಕ್ಕೆ ಗೋಳಾಡ ಬೇಕಾದೀತು, ಎಚ್ಚರ!'

'ಬೇಕಾದಂಥಾ ಫರಸ್ನ (ಪ್ರಶ್ನೆ) ಮಾಡಿದರ ಮಾಡ್ಬೇಕೇನು?'

'ಯಾವ ಪ್ರಶ್ನೆ ಕೇಳ್ಬೇಕಂಬೋದು ನಂ ಕೆಲಸ....'

'ಅಂದ್ರ ಎಲ್ಲಾರ್ನ ಬಿಟ್ಟು ನನಗ ಯಾಕ ಕೇಳ್ತೀರಿ? ಖೂನಿ ಮಾಡೋ ಮನಸ್ಯಾರ್ಹಾಂಗ ಕಾಣ್ತೇನೆ ನಾ?'

ಅಧಿಕಾರಿಗೂ ನಗೆ ತಡೆಯದೆ 'ಛೆ! ಛೆ! ನೀನು ಕಾಣೋದು ಹುಬೇಹೂಬ್ ಹರಿಶ್ಚಂದ್ರನ ಹಾಗ' ಎನ್ನುವನು. ಆ ಮಾತು ಭರಮನನ್ನು ಕೆಣಕುವುದು. ತನ್ನ ಮನದೊಳಗಿನ ವಿಚಾರದ ಸುಳಿವು ಇವನಿಗೆ ಹೇಗೆ ಹತ್ತಿತು, ಎಂದು ಕನಲುವನು. ಕೊನೆಗೆ ಸಿಟ್ಟಿನ ಹಟದಿಂದ 'ನನಗೆಲ್ಲ ತಿಳೀತೇತರಿ ನಿಂ ನಗಚಾಟಿ! ಯಾರ್ಹಾಂಗ ಕಂಡು ಏನ್ಮಾಡೋದೇತಿ? ಹೊಟ್ಟೆಗಿಲ್ದೆ ಸಾಯೋ ಬಡಮಗಾ ನಾ ಅಂತ ಬೇಕಾದ್ಮಾತಾಡ್ತೀರಿ! ಸಾಯಲಾರದ ನನ್ನ ಜೀವಾನೆ ಹೊಡೀಲಾಕ ತಿಳೀವಲ್ಲದು ನನಗ, ಮಂದಿ ಜೀವಾ ಹೊಡೀತೀನೆ ನಾ?' ಎಂದು ಭರಮನು ಆವೇಶದ ದನಿಯಲ್ಲಿ ಕೇಳಲು ಅಧಿಕಾರಿಯು ನಿರಾಶೆಯಿಂದ ತಲೆಯಲ್ಲಾಡಿಸುವನು.

ಈ ಮಾತಿನ ದ್ವಂದ್ವಕ್ಕೆ ಕೊನೆಮೊದಲಿಲ್ಲದಾಯಿತು. ಎಲ್ಲ ಪ್ರಯೋಗಗಳನ್ನೂ ಮಾಡಿದ್ದಾಯಿತು. ಮೈ ಕೈ ಕಸರತ್ತಿನಿಂದಾದರೂ ಇವನನ್ನು ದಣಿಸಿ ನೋಡೋಣ,ಎಂದು ಒಮ್ಮೆ ಅಧಿಕಾರಿಗೆ ತೋಚಿತು. ಆದರೆ ಭರಮನ

ದನಿಯಲ್ಲಿ ಯಾವುದೊ ಒಂದು ತರದ ಸರಳತೆ ಇದ್ದಿತು. ಭರಮನೊಡನೆ ಹೆಚ್ಚೆಚ್ಚು ಮಾತನಾಡಿದಂತೆ ಅಧಿಕಾರಿಗೆ ಸಂಶಯ ಕಡಮೆಯಾಗತೊಡಗಿತು. ಇದಲ್ಲದೆ ಅಪಮರಣ ಘಟಿಸಿದ ಮನೆಯಲ್ಲಿ ಬೇರೆ ಅಧಿಕಾರಿಗಳು ಶೋಧವನ್ನು ನಡೆಸಿದ್ದರು. ಅವರು ಬರುವ ವರೆಗೆ ಭರಮನಿಂದ ಶಕ್ಯವಾದರೆ ಬೇರೆ ಸಂಗತಿಗಳನ್ನಾದರೂ ತಿಳಿದುಕೊಳ್ಳೋಣ, ಎಂಬ ವಿಚಾರದಿಂದ ಅಧಿಕಾರಿಯು ಒಂದು ಯುಕ್ತಿಯನ್ನು ಹೂಡಿದನು.

' ಅಂತೂ, ಭರಮಾ, ನೀ ಏನೂ ಹೇಳೋದಿಲ್ಲ ಅಂದ್ಹಾಂಗ ಆಯಿತು ' ಎಂದನು.

' ಏನೂ ಹೇಳೋದಿಲ್ಲ ಅನ್ನಾಕ ನಾಯೇನ ಬೆದರೀನೆ ? ' ಎಂದು ಭರಮನು ಆವ್ಹಾನಿಸಿದನು.

' ನಾನು ಕೇಳಿದ್ದಕ್ಕೊಂದು ಏನಾದರೂ ಹೇಳ್ತಿ ನೀ, ಅದಕ್ಕ ಹೇಳಿದೆ.'

' ಸಿಕ್ಕಸಿಕ್ಕದ್ದು ಕೇಳಿದರ ? ಗೊತ್ತಿಲ್ಲದ್ದನ್ನ ಹೇಳಾಕ ನಾಯೇನ ಸಕುಣ ಹೇಳ್ತೇನೆ ?

' ಹೋಗಲಿ ಬಿಡು. ಸತ್ತವ ಎಂಥವನಿದ್ದನೊ, ಯಾರ್‍ಯಾರ್‍ನ ಕಾಡಿದ್ದನೊ ! ದೇವರೆ ಅವನಿಗೆ ಶಿಕ್ಷಾ ಕೊಟ್ಟಿರಬೇಕು '

' ದೇವರು ! ದ್ಯಾವ್ರು ಪೋಲೀಸ ಅಂತ ತಿಳಿದೀರೇನು ಬೇಕ್ಕೇಕಾದ ನನ್ನಂಥಾ ಬಡಮಗನ್ನ ತಂದು ಹಿಡಿದ್ಹಾಕಲಾಕ ? ಭವಾನೆಪ್ಪ—ಅಂದ್ರ, ಗೊತ್ತೈತೇ ನಿಮಗ್ಹೆಸರು ?—ಭವಾನೆಪ್ಪ ಯಾರನ್ನೂ ಕಾಡೋ ಮನಸ್ಯಾ ಅಲ್ರಿ. . . . '

' ಹೋಗಲಿ ಬಿಡು. ನಿನಗೆ ಏನೂ ಗೊತ್ತಿಲ್ಲ ಅಂತೀ, ಮತ್ತೆ ಯಾಕೆ. . . . '

' ಎಲೆ ನಿಮ ! ಏನೂ ಗೊತ್ತಿಲ್ಲಾ ಅಂದ್ರ ಗೊತ್ತಿದ್ದಟೂ ಸುಳ್ಳೇನು ' ಈ ೫-೬ ದಿನದ ಮಟ್ಟಿಗೆ ಅವರ ಮನ್ಯಾಗ ಎಲ್ಲಾ ಕೆಲಸ ನಾನೆ ಮಾಡ್ತಿದ್ದಿನಿರಿ. '

ಅಧಿಕಾರಿಯು ಉಸುರ್ಗರೆವ ಸೋಗನ್ನು ತಾಳಿ ' ಅದಾದರೂ ನಿನಗೆ ಗೊತ್ತಿದೆಯಲ್ಲ ' ಎಂದನು.

ಭರಮನಿಗೆ ಇನ್ನೂ ಕೆಣಕಿದಂತಾಯಿತು. ' ಅದಾದರೂ ಅಂದ್ರ? ಗೊತ್ತಿದ್ದನ್ನ ಬಿಟ್ಟು ಸೀಪೇಸೇನೊ ಕೇಳಿದ್ರ ಹೇಳಲಾಕ ನಮಗ ಸಂದೀ ಆದ್ರೂ ಸಾಧಸಬೇಕಲ್ಲ ? ಬೇಕಾರ ಆ ಮನೇ ಹಕೀಕತ ಕೇಳರಿ, ಆ ಮಂದೆಲ್ಲ ಅಲ್ಲಿ ಏನೇನು ಮಜೀವು ಮಾಡ್ತಿದ್ರು ಕೇಳಿ ನೋಡ್ರಿ, ಭರಮಗ ಗೊತ್ತೈತೊ ಇಲ್ಲೊ ? '

ಕೊನೆಗೊಮ್ಮೆ ಅಧಿಕಾರಿ ಗೆದ್ದನು. ಭರಮನಾದರೂ ತಾನು ಹೇಳಿದ್ದನ್ನು 'ಇವರು ಲಕ್ಷ್ಯಗೊಟ್ಟು ಕೇಳುವರಲ್ಲ, ಎಂಬ ಉಬ್ಬಿನಿಂದ ತಾನು ತರುಣ-ತರುಣಿಯರಿಬ್ಬರನ್ನು ಒಂದು ಬೆಳಗ್ಗೆ ಆಕಸ್ಮಾತ್ತಾಗಿ ಭೆಟ್ಟಿಯಾದಂದಿನಿಂದ ಭವಾನಿಯ ಮರಣದ ವರೆಗೆ ನಡೆದ ಎಲ್ಲ ಸಂಗತಿಗಳನ್ನು ಹೇಳಿದನು. ಅನುಕೂಲತೆಗೆ ಆ ಸಂಗತಿಗಳನ್ನು ಒಂದು ಕ್ರಮದಲ್ಲಿ ಕೂಡಿಸಿ ಇಲ್ಲಿ ಕಾಣಿಸಿದೆ

* * * * *

ಭವಾನಿ ಮತ್ತು ಇಂದುಮತಿ ಇವರಿಬ್ಬರೆ, ತನಗೆ ಮುಂಚೆ ಭೆಟ್ಟಿಯಾದುದನ್ನೂ ಆ ಬೆಳಗಿನ ವಿನೋದಗಳನ್ನೂ ಕೊನೆಗೆ ತನಗೆ ಮನೆಯಾಳು, ಎಂದು ಗೊತ್ತುಮಾಡಿದುದನ್ನೂ ಭರಮಪ್ಪನು ಸಾದ್ಯಂತವಾಗಿ ಹೇಳಿದನು. ಆಗ ಭವಾನಿ ಮತ್ತು ಇಂದುಮತಿಯರು ಗಂಡ-ಹೆಂಡಿರಿರಬೇಕೆಂಬ ಊಹೆಯಾಗಿತ್ತು ಅವನಿಗೆ. ಆದರೆ ಗೆಳೆಯರೆಲ್ಲರೂ ಕೂಡಿ ಮನೆಯಲ್ಲಿ ವಾಸ ಮಾಡಲು ಒಂದ ತರುವಾಯ ತನ್ನ ಊಹೆ ತಪ್ಪೆಂದು ತಿಳಿಯಲು ಭರಮನಿಗೆ ತಡವಾಗಲಿಲ್ಲ. ಆದರೆ ಆ ಮಾತಿನಿಂದ ಭರಮನಿಗೆ ಯಾಕೊ ಅಸಮಾಧಾನವಾದಂತಾಯಿತು. ' ಕೆಟ್ಟದಾಗೋದಿದ್ರ ಒಮ್ಮೊಮ್ಮೆ ಒಳಗಿಂದೊಳಗ ಹ್ಯಾಂಗೊ ಅನಿಸಿ ತಿಳೀತೈತಿ ' ಎಂದು ಭರಮನು ತನ್ನ ಅನುಭವಕ್ಕೆ ಭಾಷ್ಯ ಬರೆದು ತಿಳುಹಿಸಿದನು. ' ಸುಬಾ(ಶುಭ)ನೂ ಹಾಂಗೇ ತಿಳೀತಿದ್ರ ಧಂದೇನೆ ಮಾಡ್ತಿದ್ದೆ, ಹೊಟ್ಟೆಗಿಲ್ದೆ ಸಾಯೋಕಿಂತ ' ಎಂದು ನಗೆಯಾಡಿದ ಅಧಿಕಾರಿಗೆ ಉತ್ತರಕೊಟ್ಟನು. ' ಲಗ್ಗಿಣ ಆಗ್ದಿದ್ರೂ ಆಗಲಾಕ ಹಾಕೇತಿ ' ಅಂತ ಭರಮನಿಗೆ ಭರವಸೆ. ಆದರೆ ಮೊದಲ ದಿವಸ ಭರಮನಿಗೆ ಇಷ್ಟೆಲ್ಲ ವಿಚಾರ ಬರಲು ವೇಳೆಯೂ ಇರಲಿಲ್ಲ, ಅನುವೂ ದೊರೆಯಲಿಲ್ಲ. ' ಎಲ್ಲಾ ಕೆಲ್ಸಾನೂ ಮಾಡೋದೆ, ಎಲ್ಲಾರೂ ಒಂದೊಂದು ಕೆಲ್ಸಾ ಹೇಳೋರೆ ' ಹೀಗಾಗಿ

ಭರಮನು ಬೊಗರೆಯಂತೆ ಗಿಮಿಗಿಮಿ ತಿರುಗಬೇಕಾಯಿತು. ‘ಧಣೇರು ಮತ್ತು ಅವರವರು’ ಇವರಲ್ಲದೆ ಬೇರೆ ಮೂರು ಜನ ಇದ್ದರು. ಅವರಲ್ಲಿ ಮೋಹನರಾಯ ಅನ್ನುವವರ ಮೇಲೆ ಭರಮನದು ಒಮ್ಮೆಲೆ ವಿಶ್ವಾಸ ಕೂತಿತು. ಒಡಚನ ಆಳು ಜನ ಅಂತ ಆ ಮಹಾರಾಯನಿಗೆ ಭೇದಬುದ್ಧಿಯೆ ಇಲ್ಲ ಎಲ್ಲಾರ ಜೋಡಿ ಮಾತು, ಯಾವಾಗಲೂ ಮಾತು, ಮಜೇವಿನ ಮಾತು. ಬೋಧರಾಯ ಅನ್ನೊ ಇನ್ನೊಬ್ಬಗ ಬರೀ ಪುಸ್ತಕ. ತಾನೇ ದೊಡ್ಡ ಮನಸ್ಯಾ ಅಂತ ತಿಳಿದಿದ್ದನೊ ಏನೊ—ಎಲ್ಲಾರ್ನ ಬಿಟ್ಟು ನಾಲ್ಕು ಗೇಣು ಮಗ್ಗಲಿಗೆ ಒಂದು ಪುಸ್ತಕ ಹಿಡಿದುಕೊಂಡು ಕೂತುಬಿಡುವವ. ಅವನನ್ನು ಮಾತಾಡಿಸುವ ಧೈರ್ಯ ಭರಮನಿಗೂ ಆಗಲಿಲ್ಲ. ಮೂರನೆಯದೊಂದು ತರ ಬೇರೇನೆ. ಅದು ಅನಂತರಾಯ ಅಂತ. ಎಂದಾದರೂ ಹೆಣ್ಣು ಮಗಳ್ನ ನೋಡ್ಯಾನೊ ಇಲ್ಲೊ ಅನ್ನೋರ ಹಾಂಗ ಮಿಕಿಮಿಕಿ ಇಂದವ್ವಾ ಅವರು ಇದ್ದ ಕಡೆ ನೋಡುವ. ಬುಡ ಗಟ್ಟಿ ಇದ್ದ ಗೊಂಬೆ ಇರತಾವ ನೋಡ್ರಿ, ಹ್ಯಾಂಗ ಮನಗಿಸಿದರೂ ಮತ್ತ ಸೆಟೆದೆ ಸಿಲ್ತಾವ—ಹಾಂಗ ಯಾ ಕಡೆ ಮೋತಿ (ಮುಖ) ಇದ್ರೂ ಗಬಕ್ನೆ ಇಂದವ್ವಾ ಅವರ ಕಡೆ ತಿರುಗಿತೆ! ಕಣ್ಣಿನ ಲಕ್ಷಣ ಅಷ್ಟೇನು ಚೆನ್ನಾಗಿರಲಿಲ್ಲ ಎಂದು ಭರಮನ ತರ್ಕ.

ಮುಂಚಿನ ದಿವಸ ಐದೂ ಜನ ಮನೆಬಿಟ್ಟು ಕದಲಲೆ ಇಲ್ಲ. ಇಂದವ್ವಾ ಅವರು ಬ್ಯಾಡ ಬ್ಯಾಡ ಅಂದರೂ, ಬರಿಯ ದೆವ್ವಿನ ಮಾತು, ದೆವ್ವಿನ ಕತೆ. ಆ ಮನೆಯಲ್ಲಿ ದೆವ್ವ ಇದೆ, ಎಂಬ ಮಾತನ್ನು ಭರಮನು ಕೇಳಿದ್ದನು. ಒಂದು ದಿವಸ ಯಾರೊ ದಾರಿಹೋಕರೊಬ್ಬರು ಭರಮನಿಗೆ ಹೇಳಿದ್ದರು. ಭೆಟ್ಟಿಯ ಮೊದಲ ದಿನ ಭವಾನಿಯೂ ಇಂದುಮತಿಯೂ ಅದೇ ಮಾತನ್ನು ತನ್ನೆದುರು ಆಡಿದ್ದರು. ಭರಮಪ್ಪನಿಗೆ ದೆವ್ವನಲ್ಲಿ ವಿಶ್ವಾಸವಿರಲಿಲ್ಲ. ಭವಾನಿರಾಯರಿಗೂ ಇದ್ದಂತೆ ತೋರಲಿಲ್ಲ. ಆದರೆ ಇಂದುಮತಿಗಿಂತ ಅನಂತನೆ ಈ ಮಾತು-ಕತೆಗಳಿಗೆ ಹೆಚ್ಚಾಗಿ ಹೆದರುತ್ತಿದ್ದನೆಂಬುದು ಅವನ ಕಳೆಗೆಟ್ಟ ಮುಖದಿಂದ ತಿಳಿಯುವಂತಿತ್ತು. ಒಂದೊಂದು ಸಲ ಅನಂತನು ಎರಡೂ ಕಿವಿಗಳನ್ನು ಬೆರಳುಗಳಿಂದ ಗಟ್ಟಿಯಾಗಿ ಹಿಡಿದುಕೊಂಡು ಕಣ್ಣುಗಳನ್ನು ಮುಚ್ಚುತ್ತಿದ್ದನು. ಬೋಧರಾಯನು ಮಾತ್ರ ಆಗಾಗ ತಾನು ಓದಿದ ಪುಸ್ತಕಗಳೊಳಗಿನ ದೆವ್ವಿನ ಕತೆಯನ್ನು—ಹೆಚ್ಚಾಗಿ ತಾನು ಓದಿದವನೆಂದು ತೋರಿಸುವು

ದಕ್ಕಾಗಿಯೆ ಎನಬಹುದು—ಹೇಳುತ್ತಿದ್ದನು. ಅವನಿಗೂ ಪುಸ್ತಕಗಳ ಹೊರಗೆ ದೆವ್ವಗಳಿರಬಹುದೆಂಬ ವಿಶ್ವಾಸವಿದ್ದಂತೆ ತೋರಲಿಲ್ಲ. ಮೊದಲ ರಾತ್ರಿ ಎಲ್ಲವೂ ಹೆಚ್ಚಾಗಿ ವಿನೋದವಾಗಿತ್ತು. ಕೊನೆಕೊನೆಗೆ ಭರಮಪ್ಪ ನನ್ನೂ ಕರೆದು ಅವನು ಒಬ್ಬನೇ ಮಲಗುತ್ತಿರುವಾಗ ದೆವ್ವಗಳನ್ನು ಕಂಡನೊ ಹೇಗೆ, ಎಂದು ಚೇಷ್ಟೆ ಮಾಡಿದರು. ಮಿಕ್ಕವರಿಗೆ ವಿನೋದ ವಾದರೂ ಅನಂತನ ಎದೆ ಒಡೆದು ನೀರಾಗಿತ್ತು. ಉಳಿದ ನಾಲ್ವರು —ಇಂದುಮತಿಯೂ ಸಹ—ಅವನನ್ನು ಹಂಗಿಸಿದರು. ಇಂದುಮತಿಯ ಮೇಲೆ ಅವನು ಸಿಟ್ಟಿಗೇಳಲು ಎಲ್ಲರೂ ಅವನನ್ನು ಛೀಗಿಡುವುದಕ್ಕಾಗಿ ಅವನ ಕೋಣೆಯ ವರೆಗೆ ಇಂದುಮತಿಯೆ ಅವನನ್ನು ಮುಟ್ಟಿಸುವಂತೆ ಮಾಡಿದರು. ಇಂದುಮತಿ ಮುಟ್ಟಿಸಿ ಬಂದೊಡನೆ ಹಿಂದಿನಿಂದಲೆ ಅನಂತನು ಗಾಬರಿಯಿಂದ ಓಡುತ್ತ ಬಂದನು. ಆ ನಗೆಗಾಗಿ, ಮುಂದಿನ ವಿನೋದಕ್ಕಾಗಿ ಆ ರಾತ್ರಿ ಯಾರೂ ನಿದ್ರೆ ಮಾಡಲಿಲ್ಲವೆಂದರೆ ನಡೆಯುವುದು. ಬೋಧರಾಯನೊಬ್ಬನು ಮಾತ್ರ ತನ್ನ ಕೋಣೆಯಲ್ಲಿಯೆ ಓದುತ್ತ ಮಲಗಿಕೊಂಡನು.

ಆದರೆ ಮಾರುದಿನ ಬೆಳಗಾಗುವುದರಲ್ಲಿ ಮನೆಯ ವಾತಾವರಣವೆ ಬೇರೆ ಯಾಗಿತ್ತು. ಅನಂತನು ಕೋಣೆಯಿಂದ ಓಡಿ ಬಂದ ಮೇಲೆ ಉಳಿದವರು ಅವ ನನ್ನು ಇನ್ನಿಷ್ಟು ಹಂಗಿಸಿದರು. ಅದನ್ನು ತಡೆಯದೆ ಅವನೂ ಕನಲಿದನು. ದೆವ್ವಿನ ಕತೆ ಎಂದರೆ ಬರಿಯ ವಿನೋದವಲ್ಲ, ಹಿಂದಿನವರ ಹುಚ್ಚು ಕಟ್ಟುಕತೆ ನಂಬುಗೆಯಲ್ಲ. ಇಂದಿನ ಸುಪ್ರಸಿದ್ಧ ಪಾಶ್ಚಾತ್ಯ ವೈಜ್ಞಾನಿಕರಾದ ಸರ್ ಒಲಿವರ್ ಲಾಜ್, ಎ ಕಾನನ್ ಡೊಯಿಲ್ ಮುಂತಾದವರು ಕೂಡ ದೆವ್ವ ಗಳಲ್ಲಿ ನಂಬುವದಲ್ಲದೆ ಅವುಗಳೊಡನೆ ಸುದ್ದಿಸಂದೇಶಗಳನ್ನು ಕಳುಹಿಸುವ ಹಂಚಿಕೆಗಳನ್ನು ಹುಡುಕುತ್ತಿದ್ದಾರೆ. ಹೋದ ವರ್ಷ ಇಂಥಲ್ಲಿ ಹೀಗಾ ಯಿತು, ಅಂಥಲ್ಲಿ ಹಾಗಾಯಿತು, ಎಂದು ಒಂದೇಸವನೆ ಆವೇಶದಿಂದ ಹರಟಿ ದನು. ಅಷ್ಟಕ್ಕೆ ಮುಗಿದಿದ್ದರೆ ಏನೂ ಆಗುತ್ತಿರಲಿಲ್ಲವೇನೊ? ಆದರೆ ಬೆಳಗು ಹರಿಯುವದಕ್ಕೆ ಎಲ್ಲರೂ ಎದ್ದು ಹೊರಡಬೇಕೆನ್ನುವಷ್ಟರಲ್ಲಿ ಮೊದಲ ನೆಯ ಅದ್ಭುತಕ್ಕೆ ಪ್ರಾರಂಭವಾಯಿತು. ಅದೆಂದರೆ ಎಲ್ಲರೂ ಮಾತ ನಾಡುತ್ತ ಕುಳಿತ ಕೋಣೆಯ ಬಾಗಿಲು ಹೊರಗಿನಿಂದ ಮುಚ್ಚಲ್ಪಟ್ಟಿತ್ತು ! ಎಳೆದರೂ ತೆರೆಯಲಿಲ್ಲ!

ನಿಜವಾಗಿ ನೋಡಿದರೆ ಅದೇನೂ ಮಹತ್ವದ ಮಾತಾಗಿರಲಿಲ್ಲ. ತನ್ನ ಕೋಣೆಗೆ ಹೋಗುವಾಗ ಬೋಧರಾಯನು ಮುಚ್ಚಿಕೊಂಡು ಹೋಗಿರ ಬಹುದಾಗಿತ್ತು. ಅಥವಾ ಭರಮಪ್ಪನಾದರೂ ಮುಚ್ಚಿರಬಹುದಾಗಿತ್ತು. ಆದರೆ ಬಾಗಿಲು ಮುಚ್ಚಿದೆ, ಎಂದು ಕಂಡಕೂಡಲೆ ನಾಲ್ವರೂ ತಟ್ಟನೆ ಒಬ್ಬರ ಮುಖವನ್ನೊಬ್ಬರು ನೋಡಿದರು. ಒಂದರೆನಿಮಿಷ ಯಾರೂ ಉಸಿರಾಡಿಸ ದಂತಾಗಿ ಎಲ್ಲರ ಮೈ ಜುಮ್ಮೆಂದಿತು. ಮರುಗಳಿಗೆಯಲ್ಲಿ ಮೋಹನನು 'ಭರಮಪ್ಪಾ' ಎಂದು ಕೂಗುತ್ತ ಬಾಗಿಲನ್ನು ಒಡಿಯತೊಡಗಿದನು. ಭರ ಮಪ್ಪನು ಬಾಗಿಲನ್ನು ತೆರೆದು ಎಲ್ಲವನ್ನೂ ಕೇಳಿ ಆಶ್ಚರ್ಯಚಕಿತನಾದನು. ಇಷ್ಟರಲ್ಲಿ ಬೋಧರಾಯನೂ ಬಂದಿದ್ದನು. ತಾನು ಖಂಡಿತವಾಗಿ ಬಾಗಿ ಲನ್ನು ಮುಚ್ಚಿಕೊಂಡಿಲ್ಲ ಎಂದನು. ಭರಮಪ್ಪನೆ ಪೆಚ್ಚುವಡೆದು 'ಗಾಳಿ ಬರ್‍ಲೇತಿ ಅಂತ ಮುಂದ್ಮಾಡೋವಾಗ ಮರೆತು ನಾನೇ ಕೊಂಡೆ ಹಾಕಿರ ಬೇಕ್ರಿ' ಎಂದನು. ತಾತ್ಪೂರ್ತಿಕವಾಗಿ ಎಲ್ಲರ ಮುಖಗಳೂ ಪ್ರಸನ್ನವಾ ದವು. ಆದರೆ ತಾನು ಬಾಗಿಲನ್ನು ಮುಚ್ಚಿಲ್ಲ, ಎಂಬುದು ಭರಮಪ್ಪನಿಗೆ ಚೆನ್ನಾಗಿ ಗೊತ್ತಿತ್ತು. ಮುಚ್ಚುವಾಗ ನಮಗೆ ಯಾವ ಸದ್ದೂ ಕೇಳಿಸ ಲಿಲ್ಲ ಹೇಗೆ—ಎಂದು ಮಿಕ್ಕವರಿಗೆ ಸಂಶಯ.


ಬಾಗಿಲಿನ ಪ್ರಸಂಗ ಮುಗಿಯಿತು. ಆದರೆ ಆ ಕ್ಷಣದಿಂದ ಒಂದೊಂದೆ ಅದ್ಭುತ ಸಂಗತಿಗಳು ಒಂದರ ಮೇಲೊಂದು ಜರುಗತೊಡಗಿದವು. ಅನಂತನ ಸಂಕಟ ಹೇಳಲಾಸಲ್ಲ. ಆದರೆ ಸುದೈವದಿಂದ ಅವನ ಪಕ್ಕದ ಕೋಣೆಯ ಲ್ಲಿಯೆ ಬೋಧನು ಮಲಗುತ್ತಿದ್ದು ರಾತ್ರಿ ಬಹಳ ಹೊತ್ತು ಅವನು ಓದುತ್ತ ಕುಳಿತಿರುವುದೆ ಅನಂತನಿಗೆ ಸಮಾಧಾನವೆನಿಸಿತು. ಇಲ್ಲವಾದರೆ ಮಧ್ಯಾ ನ್ಹದಲ್ಲಿ ಕೂಡ ಅನಂತನು ತನ್ನ ಕೋಣೆಯಲ್ಲಿ ಕಾಲನ್ನಿಡುತ್ತಿರಲಿಲ್ಲ. ರಾತ್ರಿ ಯೆಲ್ಲ ನಿದ್ರೆ ಇಲ್ಲದ್ದಕ್ಕೆ ಆ ದಿನ ಮಧ್ಯಾನ್ಹ ಎಲ್ಲರೂ ವಿಶ್ರಮಿಸಿದ್ದರು. ಅನಂ ತನು ತಟ್ಟನೆ ಎದ್ದನು. ಯಾರೋ ಉಗುರಿನಿಂದ ತನ್ನ ಬಾಗಿಲನ್ನು ಸವರಿ ದಂತಾಯಿತು. ಕಡೆಗೆ ತಡೆಯದೆ ಅನಂತನು ಬೋಧನ ಕೋಣೆಗೆ ಧಾವಿಸಲು ಬೋಧನು ಓದುತ್ತಲೆ ಕುರ್ಚಿಯಲ್ಲಿ ಬಿದ್ದುಕೊಂಡಿದ್ದನು. ಅನಂತನ ಕತೆ ಕೇಳಿ ನಕ್ಕನು. ಆದರೆ ಇಡಿಯ ಮಧ್ಯಾನ್ಹ ಅನಂತನು ಆ ಸವರುವ ಸದ್ದನ್ನು ಕೇಳುತ್ತ ಹಾಸಿಗೆಯಲ್ಲಿ ಬೆವರುತ್ತ ಬೀಳಬೇಕಾಯಿತು. ಸಾಯಂಕಾಲ

ನೋಹಿಸ, ಭವಾನಿ, ಇಂದುಮತಿ ತಿರುಗಾಡಲು ಕರೆದಾಗ ಅನಂತನು ನಡುಗಿದನು; ಕರುಣಾಜನಕ ದೃಷ್ಟಿಯಿಂದ ಬೋಧನ ಕಡೆ ನೋಡಿದನು. ಬೋಧನು ಅವನ ಕಷ್ಟವನ್ನು ತಿಳಿದು ನಕ್ಕು 'ನಾನು ಇಲ್ಲಿಯೆ ಓದುತ್ತ ಕುಳಿತಿರುವೆ, ಹೆದರಬೇಡ' ಎಂದನು. ಅಂತೂ ಅನಂತನು ಮತ್ತೆ ತನ್ನ ಕೋಣೆಯಲ್ಲಿ ಸೇರಿಕೊಂಡು ಎಷ್ಟು ಬಿಗಿಯಾದ ಮುಸುಕನ್ನು ಹಾಕಿಕೊಳ್ಳ ಬೇಕೆನ್ನುವಷ್ಟರಲ್ಲಿ ಮಗ್ಗುಲಿನ ಕೋಣೆಯಿಂದ 'ಯಾರದು?' ಎಂದು ಬೋಧಿಯು ಗಟ್ಟಿಸಿ ಕೂಗಿದ ದನಿ ಕೇಳಬಂತು. ಅನಂತನು ತಟ್ಟನೆ ಮಂಚ ದಿಂದ ಜಿಗಿದು ಓಡಬೇಕೆನುವಾಗ ಬೋಧ ಬಾಗಿಲದಲ್ಲಿದ್ದುದು ಕಂಡುಬಂತು. ಬೋಧನು ಕೂಡ ಅವಸರವಸರವಾಗಿ 'ಅನಂತಾ, ಇಲ್ಲಿ ನೋಡು' ಎಂದು ಕೈಹಿಡಿದು ತನ್ನ ಕೋಣೆಯೊಳಕ್ಕೆ ತೋರಿಸಿ 'ಯಾರೋ ನಿಂತ್ಹಾಂಗ ಕಾಣೋದಿಲ್ಲ?' ಎನ್ನುವಷ್ಟರಲ್ಲಿ ಅನಂತನು ಚಿಟ್ಟನೆ ಚೀರಿ ನೆಲಕ್ಕೆ ಬಿದ್ದನು.

ಹೊರಗೆ ಹೋದವರು ಮರಳಿ ಬಂದಾಗ ಅನಂತನು ಆದೇ ಚೇತರಿಸು ತ್ತಿದ್ದನು. ಬೋಧನು ಇಷ್ಟರಲ್ಲಿಯೆ ತನ್ನ ಕತೆಯನ್ನು ಹೇಳಿದ್ದನು. ತಾನು ಕುಳಿತಾಗ ಏನೊ ಸದ್ದಾಯಿತೆಂದೂ ಕೋಣೆಯಲ್ಲಿ ಯಾರೂ ಕಾಣಿಸದಕ್ಕೆ ಬಾಗಿಲಿಗೆ ಬಂದೆನೆಂದೂ, ಆಗ ಮತ್ತೆ ಒಳಗೆ ಸದ್ದಾದದ್ದನ್ನು ಕೇಳಿ ಆ ಕಡೆ ನೋಡಲು ಒಂದು ಅಸ್ಪಷ್ಟವಾದರೂ ವಿಕಾರವಾಗಿ ಕಾಣುವ ಮುಖ ಕಂಡಿ ತೆಂದೂ ಹೇಳಿದನು. ಆಶ್ಚರ್ಯದ ಮಾತೆಂದರೆ ಚೇತರಿಸಿದ ಮೇಲೆ ಅನಂ ತನೂ ಅದೇ ಕತೆಯನ್ನೆ ಹೇಳಿದನು. ಅವನಾದರೂ ಅಸ್ಪಷ್ಟವಾದ ವಿಕಾರ ವಾದ ಮುಖವನ್ನೇ ಕಂಡು ಎಚ್ಚರದಪ್ಪಿ ಬಿದ್ದಿದ್ದನು. 'ಈ ಮನೀ ವಳಗ ಇನ್ನೊಂದು ಗಳಿಗೆ ಇದ್ದರೆ ಜೀವ ಕೂಡಾ ಹೋಗಬಹುದು. ಈಗಿಂ ದೀಗ ನಾವು ಹೊರಡೋಣ' ಎಂದನು ಅನಂತನು. ಭವಾನಿಗೆ ಕೆಣಕಿದಂ ತಾಯಿತು. 'ಯಾರಿಗೆ ಇಲ್ಲಿ ಇರೋ ಧೈರ್ಯ ಇಲ್ಲ, ಅವರು ರಾತ್ರಿ ಏರೋದ ರೊಳಗ ಹೋಗಬಹುದು. ಹೋಗಲಿಕ್ಕೆ ಹೆದರಿಕೆ ಇದ್ದರೆ ಭರಮುನನ್ನು ಜೋಡಿ ಕಳುಹಿಸುವೆ' ಎಂದು ಅವನು ಒಬ್ಬೊಬ್ಬರನ್ನೇ ನೋಡತೊಡಗಿ ದನು. ಯಾರಾದರೂ 'ಆಗಲಿ' ಎನಬಹುದೆಂಬ ಆಶೆಯಿಂದ ಅನಂತನೂ ಮಿಕ್ಕವರ ಮುಖವನ್ನು ನೋಡಿದನು. ಯಾರೂ ಮಾತನಾಡಲಿಲ್ಲ. ಕೊನೆಗೆ

ಮೋಹನನೆ ಹೇಳಿದನು; ' ಈ ಮನೆಯೊಳಗಿನ ದೆವ್ವವನ್ನು ಹೊರದೂಡಿ ಆ ಮೇಲೆ ನಾನು ಹೋಗುವೆ. ಆದರೆ ಯಾರಾದರೂ ಹೆದರಿಕೊಂಡೇ ಇಲ್ಲಿ ಉಳಿದರೆ ಅವರು ಹೇಳಬೇಕು. ಅವರ ಸಂರಕ್ಷಣೆಯ ವ್ಯವಸ್ಥೆಯನ್ನು ಮಾಡ ಲಾದೀತು ' ಎಂದನು. ಈ ವ್ಯವಸ್ಥೆಗೆ ಅನಂತನೊಬ್ಬನೆ ಹುದ್ದರಿಯಾದನು.

ಆ ರಾತ್ರಿಯ ಅನುಭವ ಮರೆಯದಂತಾಯ್ತು. ಮೋಹನ ಮತ್ತು ಭವಾನಿ ಇಬ್ಬರೂ ಮೊದಲು ಇಂದುಮತಿಯ ಸುರಕ್ಷಿತೆಗಾಗಿ ಹಂಚಿಕೆ ಹಾಕಿದರು. ಈ ಕೆಲಸದಲ್ಲಿ ಅವರಿಗೆ ಅನಂತನಿಂದ ತುಸು ತೊಂದರೆಯಾಯಿ ತೆಂದೆ ಹೇಳಬಹುದು. ಯಾಕೆಂದರೆ ಅನಂತನು ಇತ್ತ ಇವರಿಬ್ಬರ ಜೊತೆ ಯಲ್ಲಿ ಉಳಿಯಲೊಲ್ಲ, ಅತ್ತ ತನ್ನ ಕೋಣೆಯಲ್ಲೂ ತನ್ನ ಮಟ್ಟಿಗೆ ಉಳಿಯ ಲಾರ; ತಾನು ತನ್ನ ಕೋಣೆಯಲ್ಲಿ ಇರುವಾಗ ಬೋಧಿ ಬದಿಯ ತನ್ನ ಕೋಣೆಯಲ್ಲಿಯೆ ಓದುತ್ತ ಕುಳಿತಿರಬೇಕೆಂಬ ಸೂಚನೆಗೆ ಕೂಡ ಅವನು ಅನಿವಾರ್ಯವಾಗಿ ಒಪ್ಪಿದನು. ಹೀಗಾಗಿ ಬೋಧಿಯ ಸಹಾಯವು ಹೆಚ್ಚಾಗಿ ದೊರಕದಂತಾಯಿತು. ಆದರೂ ಬೋಧಿಯು ಅನಂತನಿಗೆ ತಿಳಿಯದಂತೆ ತನ್ನ ಕೋಣೆಯ ಹೊರಬಾಗಿಲನ್ನು ತೆರೆದಿಟ್ಟು ಕಾವಲಿರಲಿಕ್ಕೆ ಒಪ್ಪಿದ್ದನು. ಅಂತೂ ಇಂದುಮತಿಯ ಸಂರಕ್ಷಣೆಯ ಸಂಪೂರ್ಣ ಜವಾಬ್ದಾರಿಯು ಭರ ಮಪ್ಪನ ಮೇಲೆಯೆ ಬಿದ್ದಿತು. ಆ ರಾತ್ರಿಯ ಸಂಗತಿಯನ್ನು ಹೆಚ್ಚು ಅನುಕೂಲವಾಗಿ ತಿಳಿದುಕೊಳ್ಳಬೇಕಾದರೆ ಮನೆಯ ಕಲ್ಪನೆ ಕಣ್ಣುಮುಂದಿರ ಬೇಕಾದುದರಿಂದ ಅದರ ಸ್ಥೂಲಚಿತ್ರವನ್ನೂ ಯಾರಾರು ಯಾವ ಕೋಣೆಯ ಲ್ಲಿದ್ದುಕೊಳ್ಳುತ್ತಿದ್ದರೆಂಬುದನ್ನೂ ಇಲ್ಲಿ ಕಾಣಿಸಿದೆ. ಅದನ್ನು ನೋಡ ಬಹುದು. ಮೋಹನನ ಕೋಣೆಯಿಂದ ಹೊರಬದಿಗೆ ಬಾಗಿಲು ಇದ್ದುದರಿಂದ ಅವನು ಆ ಬಾಗಿಲನ್ನು ತೆರೆದಿಟ್ಟು ಪೂರ್ತಿಯಾಗಿ ಒಚ್ಚಲುಮನೆಯಿಂದ ಹೊರಕಟ್ಟೆಯ ವರೆಗೆ ಸುಳಿದಾಡುತ್ತಿದ್ದನು. ಇತ್ತ ಅನಂತ ಮತ್ತು ಬೋಧಿ ಇವರಿಬ್ಬರ ಕೋಣೆಯ ಮೇಲುಪ್ಪರಿಗೆಗೆ ಭವಾನಿಯ ಕೋಣೆ ಇದ್ದು ಅವನು ಮೇಲೆ ಸುಳಿದಾಡಿ ಕಾವಲಿಟ್ಟನು. ಅನಂತನು ತನ್ನ ಕೋಣೆಯ ಬಾಗಿ ಲನ್ನು ಹಾಕಿಕೊಳ್ಳುವಾಗ ಬೋಧಿಯು ಹೊರಕಟ್ಟೆಯಲ್ಲಿದ್ದ ತನ್ನ ಕೋಣೆಯ ಬಾಗಿಲನ್ನು ಹಾಕಿಕೊಳ್ಳುವ ಕರಾರನ್ನು ಮಾಡಿಕೊಂಡಿದ್ದನು. ಈ ಯುಕ್ತಿಗಾಗಿ ಅವನು ಅನಂತನಿಗೆ ತಿಳಿಯದಂತೆ ತನ್ನ ಕೋಣೆಯ ಹೊರ


ಕಿಟಕಿ
ಹಿಂಬಾಗಿಲು
ಕಿಟಕಿ
ಬಚ್ಚಲುಮನೆ
ಬಾಗಿಲು
ಬಾಗಿಲು
ಅಡುಗೆಯ ಮನೆ.
ಕಬ್ಬಿಣದ ಕಟಾಂಜನ
ಸಾಮಾನಿನ ಕೋಣೆ
ಬಾಗಿಲು
ಇಂದುಮತಿ
ಕಿಟಕಿ
(ಭರಮಪ್ಪ) ಬಾಗಿಲು
ಪಾವಟಿಗೆ ಮೇಲುಪ್ಪರಿಗೆಗೆ
ಬಾಗಿಲು
ಅನಂತ
ಕಿಟಕಿ
ಬಾಗಿಲು
ಬಾಗಿಲು
ಬೋಧಿ
ತಲೆಬಾಗಿಲು
ಕಿಟಕಿ
ಬಾಗಿಲು
ಹೊರಕಟ್ಟೆ
ಬಾಗಿಲು
— — — ಮೇಲುಪ್ಪರಿಗೆಯ 'ಭವಾನಿ' ಕೋಣೆ.

ಮನೆಯ ಚಿತ್ರ

ಬಾಗಿಲನ್ನು ತೆರೆದಿಟ್ಟು ಆ ಬದಿಗೆ ಅಡುಗೆಯ ಮನೆಯ ವರೆಗೆ ನೋಡಲು ಒಪ್ಪಿದನು. ಭರಮನಿಗೆ ಮಾತ್ರ ನಿರಾಶೆಯಾಗಿತ್ತು. ಅವನು ನಡುಕೋಣೆಯ ಒಳಬಾಗಿಲಿಗೆ ಕುಳಿತುಕೊಳ್ಳಬೇಕಾಯಿತು. ಮೋಹನನ ಕೋಣೆ, ಅನಂತನ ಕೋಣೆ, ಇತ್ತ ಇಂದುಮತಿಯ ಕೋಣೆ ಇವು ಮೂರನ್ನೂ ಅವನು ನೋಡಿಕೊಳ್ಳುವಂತಿತ್ತು.

ಆದರೆ ಈ ವ್ಯವಸ್ಥೆ ಭರಮಪ್ಪನಿಗೆ ಸರಿಹೋಗಿರಲಿಲ್ಲ. ದೆವ್ವಿನ (ಅದು ಬರುವುದೆ ಆದರೆ) ಇದಿರಾ-ಇದಿರು ಸನ್ನದ್ಧವಾಗಿರಬೇಕೆಂಬ ಆಕಾಂಕ್ಷೆ ಅವನಿಗೆ ಬಲವಾಗಿದ್ದಿತು. ಆ ರಾತ್ರಿ ನಡೆದ ಘಟನೆಗಳನ್ನು ನೆನೆದು ತಾನು ಬಯಲಿಗಿದ್ದರೆ ಒಂದೂ ನಡೆಯುತ್ತಿರಲಿಲ್ಲವೆಂದು ಅವನು ಹಟದಿಂದ ಹೇಳಿದನು. ಇನ್ನು, ರಾತ್ರಿಯ ಘಟನೆಗಳೆಂದರೆ ಮೊದಮೊದಲು ಎಲ್ಲವೂ ಎಂದಿನಂತೆ ಶಾಂತವಾಗಿದ್ದಿತು. ಮೋಹನನು ಇತ್ತಿಂದತ್ತ ಪಹರೆಯಲ್ಲಿ ಹೊರ ಕಟ್ಟೆಯನ್ನೇರಿ ಬೋಧಿಯ ಬಾಗಿಲನ್ನು ಮೆಲ್ಲಗೆ ಮುಂದೂಡಿ ನೋಡುವನು; ಹೊರಬಾಗಿಲ ಕಡೆ ಮುಖ ಮಾಡಿಕೊಂಡು ಕುರ್ಚಿಯಲ್ಲಿ ಬಿದ್ದುಕೊಂಡ ಬೋಧಿಯ ತಲೆ ಮಾತ್ರ ಅವನಿಗೆ ಹಿಂದಿನಿಂದ ಕಾಣುವುದು; ಒಮ್ಮೊಮ್ಮೆ ಬೋಧಿ ತಲೆ ತಿರುಗಿಸಿ ನೋಡುವನು. ಇಬ್ಬರೂ ಮುಗುಳ್ನಗೆ ಸಕ್ಕಮೇಲೆ ಮುಗಿಯಿತು ಮೂಕ ಮಲಾಖತ್ತು. ಮೋಹನನು ಮೆಲ್ಲಗೆ ಕದವನ್ನು ನುಂದೆ ಮಾಡಿಕೊಂಡು ಹೋಗುವನು. ಹೋಗುವಾಗ ಉಪ್ಪರಿಗೆಯಲ್ಲಿ ಸುಳಿವ ಭವಾನಿಗೆ ಕೈಯನ್ನು ತೂರಿ ಹೋಗುವನು. ಮಧ್ಯರಾತ್ರಿಯ ವರೆಗೂ ಸದ್ದಿಲ್ಲದ ಈ ಸನ್ನಾಹ ನಡೆಯಿತು. ಮೋಹನನಿಗೆ ಬೇಜಾರವಾಯಿತು. ತನ್ನ ಕಲ್ಪನೆಯೆ ಸಡಿಲುಗೊಂಡು ತನ್ನನ್ನು ಈ ಹುಚ್ಚು ವ್ಯವಹಾರಕ್ಕೆ ನೂಕಿದೆ, ಎಂಗು ಪಶ್ಚಾತ್ತಾಪವಾಗತೊಡಗಿತು. ಪಹರೆಯ ಮೂಕ ಮಲಾಖತ್ತಿನ ಮುಗುಳ್ನಗೆ ನುಂದನುಂದವಾಗತೊಡಗಿತು; ಬೋಧಿಯ ತಲೆಯೂ ಚುರುಕಿನಿಂದ ತಿರುಗಿ ನೋಡುವುದು ಕಡಮೆಯಾಯಿತು; ಭವಾನಿಗೂ ಕೈ ತೂರುವುದು ಬೇಜಾರಕ್ಕಿಟ್ಟಿತು. ಕೆಲಹೊತ್ತು ಹಾಗೆಯೆ ನಡೆದಿದ್ದರೆ ಈ ಮುವ್ವರೂ ಸುಖವಾಗಿ ಮಲಗುತ್ತಿದ್ದರೆಂಬುದಕ್ಕೆ ಸಂದೇಹವಿಗಲಿಲ್ಲ. ಈ ಹುಚ್ಚಾಟವನ್ನು ಬಿಟ್ಟು ಮಲಗೋಣವೆ—ಎಂದು ಮೋಹನನೂ ವಿಚಾರ ಮಾಡುವುದರಲ್ಲಿದ್ದನು. ಅಷ್ಟರಲ್ಲಿ ಇಂದುಮತಿಯ

ಕೋಣೆಯಿಂದ ಚಿಟ್ಟನೆ ಚೀರಿದ್ದು ಕೇಳಬಂದಿತು. ಭರಮನು ಒಂದೇಟಿಗೆ ಬಾಗಿಲಿಗೆ ಬಂದನು. ಭವಾನಿಯೂ ಬಂದು ಇಳಿತಕ್ಕೆ ಅಲ್ಲಿಯೆ ಜಾರಿದನು. ಇತ್ತ ಇವರು ಬಾಗಿಲನ್ನು ಬಡೆಯುವಷ್ಟರಲ್ಲಿ ಹಿಂದಿನಿಂದ ಮೋಹನನು ಓಡಿ ಕಿಟಕಿಗೆ ಬಂದನು. ಬಂದರೆನಿಮಿಷದಲ್ಲಿ ಬೋಧಿಯೂ ಧಾವಿಸುತ್ತ ಮುಂಬದಿಯಿಂದ ಓಡಿಬಂದು ಮೋಹನನನ್ನು ಕೂಡಿದನು.

ಕೆಲಹೊತ್ತಿನ ಮೇಲೆ ಶಾಂತಳಾದ ಇಂದುಮತಿ ಯಾರ ಕುತೂಹಲವನ್ನೂ ತಣಿಸುವಂತಿರಲಿಲ್ಲ. ಏನಾಯಿತೆಂಬುದರ ಸ್ಪಷ್ಟ ಕಲ್ಪನೆ ಆವಳಿಗಿದ್ದಿರಲಿಲ್ಲ. ಕಿಟಕಿಯ ಕಡೆ ಏನೊ ಸದ್ದಾಯಿತಂತೆ. ಆಗ ಆವಳು ಮುಸುಕನ್ನು ತುಸು ಸರಿಸಿ ನೋಡಿದಳಂತೆ. ಮುಂದೆ ಅದೇ ಕತೆ. ಬೋಧಿ-ಅನಂತರಂತೆ ಆವಳಿಗೆ ಕಾಣಿಸಿದ್ದೂ ಒಂದು ಅಸ್ಪಷ್ಟವಾದ ಅಂತ್ಯಂತ ವಿಕಾರವಾದ ಮುಖ. ಬೇರೆ ಯಾವ ಅವಯವವೂ ಕಾಣಲಿಲ್ಲ. ಕ್ಷಣಾರ್ಧದಲ್ಲಿ ಆ ಮುಖವೂ ಅದೃಶ್ಯವಾಯಿತು—ಆಕೆ ಚಿಟ್ಟನೆ ಚೀರಿದಳು. ಇಷ್ಟರಲ್ಲಿ ಅನಂತನೂ ಈ ಗುಂಪಿಗೆ ಬಂದು ಸೇರಿದ್ದನು. ಇಂದುಮತಿಗೆ ಕನಸೇ ಬಿದ್ದಿತ್ತೆಂದು ಬೋಧಿ-ಭರಮ-ಭವಾನಿ-ಮೋಹನರು ಬಹುಮತದಿಂದ ನಿರ್ಣಯಕೊಟ್ಟರು. ಅಂತೂ ಇಷ್ಟರಿಂದ ಕಾವಲಿನ ಚಟುವಟಿಕೆ ಮತ್ತೆ ಜಾಗೃತವಾಯಿತು, ಭರಮಪ್ಪನು ಇಂದುಮತಿಯ ಬಾಗಿಲಿಗೆಯೆ ತಲೆ ಇಟ್ಟು ಮಲಗಬೇಕಾಯಿತು.

ಸುಮಾರು ರಾತ್ರಿ ಎರಡು ಗಂಟೆಯಾಗಿರಬಹುದು. ಮೋಹನನು ಈಗ ಮನೆಯನ್ನು ಹೆಚ್ಚಾಗಿ ಸುತ್ತುತ್ತಿದ್ದನು. ಇಂದುಮತಿಯ ಕೋಣೆಯ ಕಿಟಕಿಯಿಂದ ಮನೆಯ ಹಿಂದೆ ಸುತ್ತಿ ಹೊರಕಟ್ಟೆಗೆ ಬಂದು ಬೋಧಿಯನ್ನು ನೋಡಿ ಮತ್ತೆ ತಿರುಗಿ ನಡೆಯುವನು. ಹೀಗೆ ನಡೆದಾಗ ಒಮ್ಮೆ ತಾನು ಬಚ್ಚಲುಮನೆಯ ಮೂಲೆಗಿದ್ದಾಗ ತನ್ನ ಕೋಣೆಯ ಹೊರಬಾಗಿಲಿಗೆ ಯಾರೊ ನಿಂತಂತೆ ತೋರಿತು. 'ಯಾರವರು ?' ಎನ್ನುತ್ತ ಅವಸರದಿಂದ ನಡೆದು ಬರುವಷ್ಟರಲ್ಲಿ ಬಾಗಿಲು ಮುಚ್ಚಿತು. ಆದರೆ ಮೋಹನನು ಹೆದರದೆ ಮುಂಬದಿಯ ಕಿಟಕಿಗೆ ಬಂದನು. ಅಲ್ಲಿಂದ ಅವನಿಗೆ ತನ್ನ ಕೋಣೆಯ ಒಳಬಾಗಿಲು ಕಾಣುವಂತಿತ್ತು. ಆದರೆ ಒಂದು ಕ್ಷಣ ಆ ಬಾಗಿಲಲ್ಲಿ ಒಂದು ಅಸ್ಪಷ್ಟವಾದ, ವಿಕಾರವಾದ ಮುಖವು ಕಂಡಿತು. ಕಂಡಿತು ಎನುವಷ್ಟರಲ್ಲಿ ಮಾಯವಾಯಿತು. ಮೋಹನನು ದಿಟ್ಟನು, ಕೂಗಲಿಲ್ಲ. ಯಾಕೆಂದರೆ

ಎಲ್ಲಿಯೊ ನೋಡಿದ ಮುಖದ ಕಳೆ ಆ ವಿಕಾರವಾದ ಮುಖದಲ್ಲಿ ಕಂಡು ಅವನನ್ನೆ ವಿಚಾರಕ್ಕೆ ತೊಡಗಿಸಿತ್ತು. ಆದರೆ ಅಷ್ಟರಲ್ಲಿ ತನ್ನ 'ಯಾರವರು' ಎಂಬುದನ್ನು ಕೇಳಿ ಬೋಧಿ ಅವಸರವಸರವಾಗಿ ತನ್ನ ಹೊರಬಾಗಿಲಿನಿಂದ ಓಡಿಬಂದನು. ಅವನು ಮಾತನಾಡುವ ಮುಂಚೆಯೆ ಮೋಹನನು ಅವನನ್ನು ಸನ್ನೆಯಿಂದ ತಡೆದನು. ತನ್ನ ಅನುಭವವನ್ನೂ ಹೇಳಿ ಕೊನೆಗೆ 'ಇದೇನೊ-ಗುರುತಿನ ದೆವ್ವ ಇದ್ದಾಂಗ ಕಾಣ್ತದೆ. ಇನ್ನೊಮ್ಮೆ ಬಂದರೆ ಹಿಡಿದೇ ಬಿಡೋಣ—ಸ್ವಲ್ಪ ಜಾಗೃತ ಇಗಿರು' ಎಂದನು. ಹೆಚ್ಚಿಗೆ ಏನನ್ನೂ ಹೇಳ ಬಯಸದ್ದರಿಂದ ಬೋಧಿ ನಿರಾಶಿತನಾಗಿ ತನ್ನ ಕೋಣೆಗೆ ಹೋದನು.

ಆದರೆ ಎಲ್ಲಕ್ಕೂ ಮೋಜಿನ ಘಟನೆ ನಸುಕಿನ ೪-೫ ಗಂಟೆಯ ನಡುವೆ ಜರುಗಿತು. ಭರಮಪ್ಪನು ಮಲಗಿದಲ್ಲಿಯೆ ನಿದ್ರೆಹೋಗಿ ತುಸು ವೇಳೆಯಾಗಿತ್ತು. ಅವನಿಗೆ ಒಮ್ಮೆಲೆ ಎಚ್ಚರವಾಯಿತು. ಇಂದುಮತಿಯ ಕೋಣೆಯಲ್ಲಿ ಏನೊ ಸದ್ದಾದಂತೆ ಭಾಸವಾಯಿತು. ಚಟ್ಟನೆ ಎದ್ದನು. ಬಾಗಿಲು ತಟ್ಟಿದನು. ಸದ್ದಿಲ್ಲ. ತನ್ನ ಕಲ್ಪನೆಯೆ ತಪ್ಪಾಗಿರಬಹುದು, ಎಂದು ತಡೆದನು. ಕೊನೆಗೆ ಇದು ಯೋಚಿಸುವ ವೇಳೆಯಲ್ಲ, ಎಂದು ಮತ್ತೆ 'ಅವ್ವಾ, ಅವ್ವಾ ಅವರ' ಎಂದು ಕೂಗಿ ಬಾಗಿಲು ತಟ್ಟಿದನು. ಇಂದುಮತಿ ಬಾಗಿಲು ತೆರೆಯುವುದಕ್ಕೆ ಮೋಹನ-ಭವಾನಿ-ಬೋಧಿಯವರು ಅಲ್ಲಿಗೆ ಬಂದರು. ಭರಮನು ತನ್ನ ಸಂಶಯವನ್ನು ಹೇಳಿದನು; ಇಂದುಮತಿ ತಾನು ನಿದ್ರಿಸು ತ್ತಿದ್ದಳೆಂದು ಹೇಳಿದಳು. ಎಲ್ಲರೂ ಸಮಾಧಾನ ತಂದುಕೊಳ್ಳುವಷ್ಟರಲ್ಲಿ ಅನಂತನನ್ನು ನೋಡಿದರು. ಅನಂತನು ಇವರಿದ್ದಲ್ಲಿ ಬಂದಿರಲಿಲ್ಲ. ಬೋಧಿಗೆ ಆಶ್ಚರ್ಯವಾಯಿತು. ನಡುಕೋಣೆಯಲ್ಲಿ ಬಂದು ನೋಡಿದರೆ ಅನಂತನ ಕೋಣೆಯ ಬಾಗಿಲು ತೆರೆದಿದೆ? ಒಳಗೆ ನೋಡಿದರೆ ಅನಂತನು ಇಲ್ಲವೆ ಇಲ್ಲ! ಬೋಧಿಯ ಸುದ್ದಿಯನ್ನು ಕೇಳಿ ಎಲ್ಲರೂ ಚಕಿತರಾದರು. ಭರಮ ನನ್ನೂ ಇಂದುಮತಿಯನ್ನೂ ಅಲ್ಲಿಯೆ ಬಿಟ್ಟು ಮನೆತುಂಬ ಹುಡುಕಿದರು. ಆದರೆ ಅನಂತನ ಸುಳಿವೆ ಇಲ್ಲ!

ಯಾರಿಗೂ ಏನೂ ತಿಳಿಯದಂತಾಯಿತು. ಭವಾನಿಯ ಮುಖ ಕಳೆ ಗಟ್ಟಿತು; ಬೋಧಿಯ ಮುಖದಲ್ಲೂ ಹೆದರಿಕೆ ಮೂಡತೊಡಗಿತು; ಆದರೆ ಮೋಹನನು ಮಾತ್ರ ವಿಚಾರದಲ್ಲಿ ಮಗ್ನನಾಗಿದ್ದನು. ಕೊನೆಗೆ ಐವರೂ

ಹೊರಕಟ್ಟೆಯಲ್ಲಿಯೆ ಕುಳಿತುಕೊಂಡರು. ಮೌನದಿಂದಿದ್ದರೆ ಹೆದರಿಕೆ; ಮಾತನಾಡಬೇಕೆಂದರೆ ಬೇರೊಂದು ಮಾತಿಲ್ಲ. ಹೀಗೆಯೆ ನಸುಕನ್ನು ಹೇಗಾದರೂ ದೂಡಬೇಕೆನುವಷ್ಟರಲ್ಲಿ ಒಮ್ಮೆಲೆ ಹಿತ್ತಲುಬಾಗಿಲು ನೂಕಿದ ಸದ್ದಾಯಿತು. ಒಂದೇ ನಿಮಿಷಕ್ಕೆ ಐವರೂ ಎದ್ದುನಿಂತರು. ಎಲ್ಲರಿಗೂ ಒಂದೇ ವಿಚಾರ—ಮತ್ತೆ ಏನಾಯಿತು ?– ಎಂದು. ಕೊನೆಗೆ ಎಲ್ಲರೂ ಹಾಗೆಯೆ ಮೂಕಗೊಂಬೆಗಳಂತೆ ನಿಂತಿರಲು ಮೋಹನನು ನಿಶ್ಚಯದ ಹೆಜ್ಜೆಗಳಿಂದ ಹಿಂದಿನ ಬಾಗಿಲಿಗೆ ನಡೆದನು. ಒಂದೊಂದೆ ಹೆಜ್ಜೆ ಗುಡುಗಿನಂತೆ ಪಡಿದನಿಸುವದೇನೊ ಎನ್ನಿಸಿತು ನಿಂತವರಿಗೆ. ಮೋಹನನ ಹೆಜ್ಜೆಯ ಸದ್ದು ನಿಂತಿತು. ಎಲ್ಲರೂ ಹಾರುವ ತಂತವನ್ನು ಹೃದಯದ ಸದ್ದಿಗೇ ಹೆದರುವಂತೆ ನಿಂತರು. ಅಷ್ಟರಲ್ಲಿ 'ಅನಂತ!' ಎಂದು ಮೋಹನನ ದನಿ ಕೇಳಬಂದಿತು. ಎಲ್ಲರೂ ಓಡಿದರು· ನಿಶ್ಚೇಷ್ಟನಾಗಿ ಅನಂತನು ಬಿದ್ದಿದ್ದಾನೆ, ಬಾಗಿಲು ಪೂರ್ತಿಯಾಗಿ ತೆರೆದಿದೆ! ಅನಂತನನ್ನು ಕೋಣೆಯಲ್ಲಿ ಮಲಗಿಸಿ ಸುತ್ತಲು ಆತುರತೆಯಿಂದ ಕುಳಿತರು. ಅನಂತನು ಕಣ್ದೆರೆದಾಗ ಹೊರಗೆ ಸೂರ್ಯನು ಮೇಲೇರುವುದರಲ್ಲಿದ್ದನು.

* * * *

ಮರುದಿನದ ಸಮಾಚಾರ ಮರೆಯದಂತಹದಾಗಿತ್ತು. ಚೇತರಿಸಿದ ಅನಂತನು ಹೆಚ್ಚಿಗೇನನ್ನೂ ಹೇಳದಾದನು. ಕೇವಲ ಆ ಅಸ್ಪಷ್ಟವಾದ, ವಿಕಾರವಾದ ಮುಖವನ್ನು ನೋಡಿ ತಾನು ಹೆದರಿದ್ದಷ್ಟೆ ಅವನಿಗೆ ಗೊತ್ತು. ಮುಂದೆ ಏನಾದುದು, ತಾನು ಹಿಂಬಾಗಿಲ ಹತ್ತಿರ ಬಂದುದು ಹೇಗೆ, ಅಲ್ಲಿಯ ವರೆಗೆ ಇದ್ದುದು ಎಲ್ಲಿ—ಇದೊಂದೂ ತನಗೆ ಗೊತ್ತಿಲ್ಲ, ಎಂದೇ ಹೇಳಿದನು. ಎಲ್ಲರಿಗೂ ಏನೂ ತಿಳಿಯದಂತಾಯಿತು. ಅಂದುಬೆಳಗಿನಿಂದ ಯಾರ ಕಣ್ಣಲ್ಲೂ ಜೀವವಿಲ್ಲದಂತಿತ್ತು. ಮೊದಲ ದಿನದ ಹರಟೆ, ಚೇಷ್ಟೆ, ನಗೆ—ಇವೆಲ್ಲ ಮಾಯವಾದುವು. ಮುಖ್ಯವಾಗಿ ಭವಾನಿಯ ಮುಖ ಬಹಳೇ ಕಳೆಗುಂದಿತ್ತು. ಭವಾನಿಗೂ ಭೂತ ಪಿಶಾಚಿಗಳಲ್ಲಿ ಹುಚ್ಚುನಂಬಿಕೆ ಹುಟ್ಟಿರಬಹುದೆ, ಎಂದು ಮೋಹನನಿಗೆ ಸಂದೇಹ. ಆದರೆ ಭವಾನಿಯ ಸ್ಥಿತಿ ಹಾಗೇಕೆ ಆಗಿದೆ, ಎಂಬುದು ಅವನ ಮಾತುಗಳಿಂದಲೆ ಮೋಹನನಿಗೆ ಸ್ಪಷ್ಟವಾಯಿತು. 'ಅನಂತಾ, ನನ್ನ ಹಟಕ್ಕಾಗಿ ನೀವೆಲ್ಲ ಇಲ್ಲಿ ಬಂದಿದ್ದಿರಿ. ನನ್ನಿಂದ ನಿಮಗೆ ತೊಂದರೆ. ನಾನಂತೂ ಇಂತಹ ಸ್ಥಿತಿಯಲ್ಲಿ ಹೇಡಿಯಂತೆ ಮನೆಯನ್ನು

ಬಿಡಲಾರೆ. ನಿಮಗೂ ಹೆಚ್ಚಿನ ತೊಂದರೆ ಬೇಡ. ಆದಕಾಗಿ ಈ ರಾತ್ರಿ ಪೋಲೀಸರನ್ನು ಕಾವಲಿಗಾಗಿ ಕೇಳಿಕೊಳ್ಳೋಣ' ಎಂದನು ಭವಾನಿ.

ಆ ಮಾತಿಗೆ ಮೊದಲು ಯಾರಿಂದಲೂ ಉತ್ತರ ಬರಲಿಲ್ಲ.

ಕೊನೆಗೆ ಬೋಧಿಯು ಖೊಳ್ಳನೆ ನಕ್ಕನು. ಆ ವಾತಾವರಣದಲ್ಲಿ ನಗೆ ಎಷ್ಟು ಅಸಂಭವನೀಯವಾಗಿತ್ತೆಂಬುದು ಆ ನಗೆಗೆ ತಟ್ಟನೆ ಎಲ್ಲರೂ ಬೆದರಿದ್ದರಿಂದ ತಿಳಿಯುವಂತಿತ್ತು. ಭವಾನಿಗೆ ಸಿಟ್ಟೂ ಬಂದಂತಿತ್ತು. ಅದನ್ನು ಕಂಡು ಬೋಧಿ ಅವಸರದಿಂದ ಹೇಳಿದನು, 'ಯಾವುದಕ್ಕೂ ನಿನಗೆ ಬೇಕು ಭವ್ಯ ಆನೆ! ಅದಕಂತೇ ನಿನಗ ಭವಾನಿ ಅಂತ ಹೆಸರು ಬಿದ್ದದ್ದು. ಈಗ ಪೋಲೀಸರನ್ನ ಕರೆಯೋದಂದ್ರ ಭವ್ಯ ಆನೆ ಬೇಡಿದ ಹಾಗೆಯೆ. ಯಾರಾದರೂ ನಮ್ಮ ಮಾತು ಕೇಳಿದರೆ ನಕ್ಕಾರು! ಏನಾಗಿದೆ ಅಂತ ಪೋಲೀಸರನ್ನ ಕರೆಸೋದು?'

'ಇನ್ನೇನು ಜೀವ ಹೋದಮೇಲೆ ಪೋಲೀಸರು ಬೇಕೇನು?' ಅನಂತನಿಗೆ ಸಿಟ್ಟು ತಡೆಯದಂತಾಯಿತು.

'ಜೀವ ಹೋದರೂ ಪೋಲೀಸರೆ ಬೇಕಂತಿಲ್ಲ. ನಿನ್ನಂತಹ ಪುಕ್ಕನ ಮಾತು ಕೇಳಿ ಪೋಲೀಸರನ್ನು ಕರೆಸಿದರೆ—'

'ಬೋಧಿ, ಹಾಗೆ ನೋಡಿದರೆ ನಾವೆಲ್ಲಾರೂ ಪುಕ್ಕರೆ!' ಎಂದಳು ಇಂದುಮತಿ.

ಅಂತೂ ಕೊನೆಗೆ ಇದೊಂದು ದಿವಸ ಪೋಲೀಸರ ಗೊಡವೆಗೆ ಹೋಗ ಬಾರದೆಂದು ನಿರ್ಣಯವಾಯಿತು. ಈ ನಿರ್ಣಯಕ್ಕೆ ಮೋಹನನು ಧೈರ್ಯ ಕೊಟ್ಟನು. ಮೋಹನನು ತನ್ನದೊಂದು ಕಾರಣವಿದೆ, ಎಂದೂ ಹೇಳಿದನು. ಯಾವ ಕಾರಣವೆಂದು ಎಲ್ಲರೂ ಹಟದಿಂದ ಕೇಳುವವರೆಗೆ ಅವನು ಹೇಳಲು ಇಚ್ಛಿಸಿದ್ದಿಲ್ಲ. ಕೊನೆಗೆ ಹೇಳತೊಡಗಿದನು.

'ನಿನ್ನಿನ ರಾತ್ರಿ ನಾನೂ ದೆವ್ವನನ್ನು ನೋಡಿದೆ!'

ಎಲ್ಲರೂ ಮತ್ತೆ ಮೊದಲಿನಂತೆ ಸ್ತಬ್ಧರಾದುದನ್ನು ನೋಡಿ ಮೋಹನನು—

'ನಾನು ನೋಡಿದ ದೆವ್ವಿಗಾಗಿ ಯಾರೂ ಹೆದರಬೇಕಾಗಿಲ್ಲ. ಯಾಕೆಂ-

ದರೆ—ನಾನೂ ಮುಖವನ್ನೆ ನೋಡಿದರೂ ಆದೆಲ್ಲಿಯೊ ನೋಡಿದ ಮುಖ ಎಂದು........'

ಬೋಧಿಯು ಈ ಸಲ ಮುಂಚಿನಗಿಂತ ಗಟ್ಟಿಯಾಗಿ ನಕ್ಕನು. ಹೆದರಿದವರ ನಡುವೆ ಸಿಡಿಮದ್ದು (bomb) ಪುಟಿದಂತಾಯಿತು ಆ ನಗೆಯಿಂದ. ಬೋಧಿಯು ಎರಡು ಸಲ ಹೀಗೆ ನಕ್ಕುದು ಮೋಹನನಿಗೆ ಮುಂದೆ ಒಳ್ಳೇ ಸೋಜಿಗವನ್ನುಂಟುಮಾಡುವ ಸಂಗತಿಯಾಯಿತು. ಸದ್ಯಕ್ಕೆ ಮಾತ್ರ ಎಲ್ಲರೂ ತನ್ನನ್ನು ತುಸು ಅಸಹ್ಯದಿಂದಲೂ ನೋಡುವುದನ್ನು ಕಂಡು ಬೋಧಿ ಅತ್ಯಂತ ಪ್ರಯಾಸದಿಂದ ನಗೆ ತಡೆದುಕೊಂಡನು.

'ಅಲ್ಲ—ನಾನು ನಕ್ಕದ್ದೂ ಅಂದ್ರೆ—ನನಗೊಂದು ವಿಚಾರ ಬಂದಿತು·· 'ಎಲ್ಲಿಯೊ ನೋಡಿದ ಮುಖ' ಅಂತ ಮೋಹನ ಅಂದದ್ದನ್ನು ಕೇಳಿ ನಮ್ಮ ಅನಂತನೇ ದೆವ್ವ ಆಗ್ಯಾನೊ ಏನೊ ಅಂತ—ಅಹ! ಹಹ!—ಹ್ಹಹ್ಹ!' ಎಂದು ಮತ್ತೆ ಬೋಧಿ ನಗೆಯಿಂದ ತೂಗತೊಡಗಿದನು.

ಮೋಹನನೊಬ್ಬನು ಮಾತ್ರ ಮರುಮಾತಿಲ್ಲದೆ ಕೋಣೆಯಿಂದ ಹೊರಬಿದ್ದನು.

*  *  *  *

ಆ ದಿನ ಮತ್ತೆ ಹೆದರಿಕೆಯ ವಾತಾವರಣವೆ ಮನೆ ತುಂಬಿಕೊಂಡಿತು. ಮಾತು-ಕತೆಗಳು ಮಂದವಾಗತೊಡಗಿದವು. ಸಂಜೆಯಾದಂತೆ ಒಬ್ಬೊಬ್ಬರು ಕೆಮ್ಮಲು ಕೂಡ ಹೆದರುವರೇನೊ ಎನಿಸುವಂತಿತ್ತು. ಕೂತ ಕುರ್ಚಿ 'ಚಿರ್' ಎಂದರೆ ತಟ್ಟನೆ ಎಲ್ಲರು ಎದ್ದು ಅತ್ತಿತ್ತ ನೋಡುವರು. ಗಾಳಿಗೆ ಬಾಗಿಲು ಒಡೆದರೆ ಎಲ್ಲರ ಎದೆ 'ಧಡಧಡ' ಎಂದಂತಾಗುವುದು. ಭರಮಪ್ಪ ಒಂದೇ ಸಲ ಬಾಯ್ತೆರೆದು ಮಾತನಾಡಿದರೆ ಮಿಕ್ಕವರೆಲ್ಲರೂ 'ಯಾರದು? ಏನಾಯ್ತು?' ಎಂದು ತಡವರಿಸಿದ್ದರು.

ಈ ಸ್ಥಿತಿಯಲ್ಲಿ ರಾತ್ರಿಗಾಗಿ ಭವಾನಿ ಒಂದು ಸೂಚನೆಯನ್ನು ಮಾಡಿದನು. ಅದೆಂದರೆ ಮುಂಚಿನ ರಾತ್ರಿಯಂತೆ ಯಾರೂ ಬಾಗಿಲು ತೆರೆದಿಟ್ಟು ಮನೆಯ ಹೊರಬದಿಗೆ ಸುಳಿಯುವ ಕಾರಣವಿಲ್ಲ, ಎಂದು. ಅನೇಕ ಕಾರಣಗಳಲ್ಲಿ ಭವಾನಿಯು ನಿದ್ರೆ ಇಲ್ಲದೆ ರಾತ್ರಿಯ ತಂಪಿನಲ್ಲಿ ತಿರುಗುವುದು

ಇಷ್ಟವಲ್ಲ' ಎಂದೂ ಹೇಳಿದನು. ಮೋಹನನಿಗೂ ಬೋಧಿಗೂ ಈ ಸೂಚನೆ ಯಿಂದ ಸಮಾಧಾನವಾದಂತೆ ಕಾಣಲಿಲ್ಲ. ಅವರಿಬ್ಬರ ಕುತೂಹಲ ಹೆಚ್ಚಾಗಿ ಕೆಣಕಿತ್ತು. ಕೊನೆಗೆ ಬಾಗಿಲನ್ನು ತೆರೆದಿಟ್ಟು ಕೋಣೆಯಲ್ಲಿ ಕುಳಿತೇ ಎಚ್ಚರದ ಕಾವಲನ್ನಿಟ್ಟರೂ ಅಡ್ಡಿ ಇಲ್ಲ, ಎಂಬ ನಿರ್ಣಯವಾಯಿತು. ಭರಮಪ್ಪನು ಮಾತ್ರ ಇಂದುಮತಿಯ ಕೋಣೆಯಿಂದ ಅನಂತನ ಕೋಣೆಯ ವರೆಗೆ ಸುಳಿದಾಡುತ್ತ ಹಿಂಬಾಗಿಲನ್ನು ನೋಡುತ್ತಿರಬೇಕೆಂದೂ ಗೊತ್ತಾಯಿತು. ಒಂದು ವಿಷಯ ಮಾತ್ರ ಯಾರೂ ಮಾತನಾಡದೆಯೆ ಸರ್ವಾನುಮತದಿಂದ ಸ್ವೀಕೃತವಾಗಿತ್ತು: ಎಲ್ಲರೂ ತಂತಮ್ಮ ಕೋಣೆಯ ಕಿಟಿಕಿಯನ್ನು ಜಾಗರೂಕತೆಯಿಂದ ನೋಡಬೇಕೆಂದು.

ಆ ರಾತ್ರಿ ಭವಾನಿಯ ಮುಖ ಯಾಕೊ ಸಪ್ಪಗಾದಂತಿತ್ತು. ಒಟ್ಟು ಪರಿಸ್ಥಿತಿಯ ಹೊಣೆ ತನ್ನದೆ ಎಂಬ ವಿಚಾರ ಅವನನ್ನು ಪೀಡಿಸತೊಡಗಿತು. ಯಾರಿಗೂ ಹೆಚ್ಚಿನ ತೊಂದರೆ ಕೊಡದೆ ತಾನೊಬ್ಬನೆ ಕಾವಲಿರಬೇಕೆಂದು ಅವನ ವಿಚಾರವಿದ್ದಿತು. ಆದರೆ ಮೋಹನನು ಬೇರೊಂದು ಯುಕ್ತಿಯನ್ನೆ ಹೂಡಿದನು:

' ಭವಾನೀ, ಈ ರಾತ್ರಿ ನೀನು–ನಾನು–ಬೋಧಿ–ಭರಮಪ್ಪ ನಾಲ್ವರು ಚತುರಂಗ ಸೈನ್ಯದಂತೆ! ಅಥವಾ ನಾವು ನಾಲ್ಕು ದಿಕ್ಪಾಲಕರೆನ್ನೋಣ. ನನ್ನ ಕೋಣೆಯ ಹೊರಬಾಗಿಲನ್ನು ತೆರೆದಿಟ್ಟು ಒಂದು ದಿಕ್ಕನ್ನು ನಾನು ನೋಡಿಕೊಳ್ಳುವೆ. ತನ್ನ ಕೋಣೆಯ ಹೊರಬದಿಯ ಬಾಗಿಲನ್ನು ತೆರೆದಿಟ್ಟು ಮುಂಬದಿಯನ್ನು ಬೋಧಿಯು ನೋಡಲಿ; ಹಿಂಬಾಗಿಲಿನ ಅಧಿದೇವತೆ ಭರಮಪ್ಪ; ಆದಕಾಗಿ ಉಳಿದ ಒಂದು ಬದಿಯನ್ನು ನೀನು ನೋಡು. ಅದು ನಿನ್ನ ಕಿಟಕಿಯ ಬದಿ. ಒಂದೇ ಮಾತು: ನಿನ್ನ ಬಾಗಿಲನ್ನು ಭದ್ರವಾಗಿ ಮುಚ್ಚಿಕೊಂಡು ಕಿಟಕಿಯಲ್ಲಿ ಸರ್ವಾಂಗ ತನ್ಮಯನಾಗು. '

ಈ ಮಾತನ್ನು ಹೇಳುವಾಗ ಮೋಹನನ ವಿಚಾರವೆ ಬೇರೆಯಾಗಿದ್ದಿತು. ಬಾಗಿಲು ಮುಚ್ಚಿಕೊಂಡು ಭವಾನಿ ನಿದ್ರೆಹೋದರೂ ಅಡ್ಡಿ ಇಲ್ಲ. ಒಮ್ಮೆಮ್ಮೆ ಅವನು ನಿದ್ರೆ ಹೋಗುವುದೆ ಹಿತಕರ, ಎಂದು ಮೋಹನನಿಗೆ ಎನಿಸುತ್ತಿತ್ತು.

ಮೋಹನನು ಯಾವ ರೀತಿಯಿಂದ ಹಿತಕರವೆಂದು ಬಗೆದಿದ್ದನೊ! ಯಾಕೆಂದರೆ, ಆ ರಾತ್ರಿ ಯಾವುದೂ ತೊಂದರೆ ಇಲ್ಲದೆ ಕಳೆಯಿತೆನುವಷ್ಟರಲ್ಲಿ ಬೆಳಗಿನಲ್ಲಿ ಭವಾನಿಯು ಬಾಗಿಲನ್ನು ಮುಚ್ಚಿಕೊಂಡೇ ಅಪಮರಣಕ್ಕೆ ಈಡಾಗಿದ್ದನು.

## ೪ ಪೋಲೀಸರ ಪ್ರಮೇಯ

ಇಲ್ಲಿಯ ವರೆಗೆ ಒಂದೇ ಕ್ರಮದಲ್ಲಿ ಕಾಣಿಸಿದ ಸಂಗತಿಗಳು ಅಧಿಕಾರಿಗಳಿಗೆ ಇಲ್ಲೊಂದು ಅಲ್ಲೊಂದು ಹರಕುಮುರುಕಾಗಿ ತುಣುಕು ಮಿಣುಕಾಗಿ ತಿಳಿದುಬಂದುವು; ವಿಶೇಷವಾಗಿ ಭರಮಪ್ಪನಿಂದ, ಕೆಲಕೆಲವು ಮಿಕ್ಕ ಗೆಳೆಯರಿಂದ. ಆದರೆ ಅಪಮರಣದ ಬೆಳಗಿನಲ್ಲಿ ಮಾತ್ರ ಅಧಿಕಾರಿಗಳು ಯಾವ ಸಂಗತಿಯನ್ನೂ ಅರಿಯಲಾಗದೆ ದಿಗಿಲುಗೊಂಡಿದ್ದರು. ಮೊದಲು ಭವಾನಿಯು ಅಪಮರಣಕ್ಕೆ ತುತ್ತಾದುದು ಅವನ ಗೆಳೆಯರಿಗೆಯೆ ತಿಳಿಯಲು ತಡವಾಯಿತು. ಮುಂಚಿನ ರಾತ್ರಿ ಕಾವಲಿನ ಕೆಲಸವನ್ನು ಜಾಗ್ರತೆಯಾಗಿ ವಹಿಸಿದ್ದಕ್ಕೆ ಭವಾನಿ ಬೆಳಗಾದರೂ ನಿದ್ರೆಮಾಡುತ್ತಿದ್ದಾನೆಂದು ಗೆಳೆಯರ ಕಲ್ಪನೆಯಾಯಿತು. ಹಾಗೆ ನೋಡಿದರೆ ಇಡಿಯ ರಾತ್ರಿ ಯಾವ ಚಮತ್ಕಾರವೂ ಘಟಿಸಲಿಲ್ಲ ಎಂಬ ಸಂತೋಷದ ಮಾತುಗಳನ್ನೆ ಒಬ್ಬರೊಬ್ಬರಿಗೆ ಹೇಳುತ್ತ ಕುಳಿತಿದ್ದರು. ಮೋಹನನಂತೂ ಬಹಳೆ ವಿನೋದವೃತ್ತಿಯಲ್ಲಿ ಇದ್ದನು. 'ನನಗ ದೆವ್ವಿನ ಗುರುತು ಇದೆ, ಅಂದ ಕೂಡಲೆ ಹೆದರಿ ದೆವ್ವ ಬರಲೇ ಇಲ್ಲ' ಎಂದು ಮೋಹನನು ಹೇಳಿಕೊಂಡಾಗ, 'ಯಾರಿಗೆ ಗೊತ್ತು—ನೀನೇ ದೆವ್ವಿನ ಸೋಗು ಹಾಕಿದ್ದೆಯೊ ಏನೊ?' ಎಂದು ಬೋಧಿಯು ಅವನನ್ನು ಮಾತಿನಲ್ಲಿ ಸೋಲಿಸಿದನು. ಮೋಹನನ ಉಲ್ಲಾಸಕ್ಕೆ ಉಕ್ಕು ಏರುತ್ತಲಿದ್ದಿತು.

'ಆದರೂ ದೆವ್ವ ಬರಬೇಕಾಗಿತ್ತು' ಎಂದನು. ಅವನ ದನಿಯಲ್ಲಿ 'ಬರಲಿಲ್ಲ ಯಾಕೆ?' ಎಂಬ ನಿರಾಶೆ ಇದ್ದಿತು. 'ಬಂದಿದ್ದರೆ ಅದನ್ನ—ಏನು ಅವನನ್ನೊ?—ಹೇಗೆ ಸತ್ಕಾರ ಮಾಡಬೇಕು — ರಾಷ್ಟ್ರಭಾಷೆಯೊಳಗ ಅದನ್ನ ಮಾತಾಡಿಸಬೇಕು — ಆದರದೊಂದು special interview ಪಡೆದುಕೋಬೇಕು—ಅಂತ ಏನೇನೊ ನಾ ಹಂಚಿಕೆ ಹಾಕಿದ್ದೆ' ಎಂದನು.

ಕೊನೆಗೆ ಬೋಧಿಯೆ ಭವಾನಿಯ ಮಾತನ್ನೆತ್ತಿದನು. 'ಅಲ್ಲ—ನಾವೊಂದು ತಮಾಷೆ ಯಾಕೆ ಮಾಡಬಾರದು? ಕೋಲಿಗೆ ನಾಲ್ಕು ಹರಕು

ಒಟ್ಟಿ ಸುತ್ತಿ ಅದಕ್ಕೆ ಹಗ್ಗ ಬಿಗಿದು—ದೆವ್ವನ್ನ ಕಟ್ಟಿಹಾಕೀವಿ ನೋಡು—ಅಂತ ಭವಾನಿ ಒಂದ ಕೂಡಲೆ ಅವನನ್ನ ಪೆಚ್ಚು ಮಾಡೋಣ' ಎಂದನು.

ಭವಾನಿಯ ಕೀಟಲೆ ಮಾಡುವುದು ಹೇಗೆ ಎನ್ನುವ ವಿಷಯ ಎಲ್ಲರೂ ತಂತಮ್ಮ ವಿಚಾರಗಳನ್ನು ಹೇಳತೊಡಗಿದರು. ಅನಂತನೊಬ್ಬನಿಗೆ ಮಾತ್ರ ಇನ್ನೂ ಹೆದರಿಕೆ ಹೋಗಿದ್ದಿಲ್ಲ. ನಿಜವಾಗಿ ಅವನ ಮುಖದಲ್ಲಿ ಒಹಳೆ ಹೆದರಿದಂತಿದ್ದುದನ್ನು ನೋಡಿ ಮೋಹನನಿಗೆ ಆಶ್ಚರ್ಯವಾಯಿತು. 'ಈಗ ಭವಾನಿಯೆ ದೆವ್ವ ಆಗಿ ಬಂದರೆ ಅನಂತನ ಸ್ಥಿತಿ ಏನಾದೀತು? ಎಂದನು. ಅನಂತನು ಆ ಮಾತನ್ನು ಕೇಳಿದಾಕ್ಷಣ ಚಿಟ್ಟನೆ ಚೀರಿ 'ಇಲ್ಲ-ಇಲ್ಲ-ನನ್ನ ದೇನೂ ಸಂಬಂಧ ಇಲ್ಲ' ಎಂದನು. ಮಿಕ್ಕ ಮುವ್ವರಿಗೆ ಒಹಳೇ ಆಶ್ಚರ್ಯ ವಾಯಿತು.

'ಯಾವುದಕ್ಕೆ ಸಂಬಂಧ?' ಮೋಹನ ಕೇಳಿದನು.

'ಈ ದೆವ್ವಿನ ಮನೆಗೆ' ಎಂದು ನಕ್ಕಳು ಇಂದುಮತಿ.

ಅನಂತನು ಉಗುಳ್ನುಂಗುತ್ತ 'ಅಹುದು. ಈ-ದೆವ್ವಿನ—ಮ-ಮ-ನೀ-ಗೆ, ಈ ಹ-ಹ-ಹರಟೆಗೆ' ಎಂದು ತಡವರಿಸಿದನು.

ಅಂತೂ ಉಲ್ಲಾಸದ ವೃತ್ತಿ ಕಳೆದು ಮತ್ತೆ ಭಯೋದ್ವೇಗದ ವಾತಾವರಣ ಪಸರತೊಡಗಿತು.

ಮಾತ-ಕತೆಗೆ ಮೌನದ ಮುಸುಕು ಬೀಳತೊಡಗಿತು.

ಪ್ರತಿಯೊಬ್ಬನ ಹೃದಯದಲ್ಲಿ ಮತ್ತೆ ಅನಿಶ್ಚಯದ ಆಲೋಲಕಲ್ಲೋಲ ಎದ್ದಿತು.

ಹೊರಗೆ ಕೆಲಸ ಮಾಡುತ್ತಿದ್ದ ಭರಮನ ದನಿ ಗುರುತಿಲ್ಲದಂತೆ ಕೇಳಿಸುತ್ತಲಿದ್ದಿತು.

ಕೊನೆಗೆ ಮೋಹನನು ಈ ಅಸಹ್ಯ ಪರಿಸ್ಥಿತಿಯನ್ನು ತಡೆಯದೆ ಎದ್ದನು. 'ಭವಾನಿ ಎದ್ದನೊ ಇಲ್ಲವೊ ನೋಡಿಕೊಂಡು ಬರುವೆ' ಎಂದು ಬಾಗಿಲು ಕಡೆ ಹೊರಟನು.

'ಬೇಡ, ಬೇಡ' ಎಂದು ಅನಂತನು ಧಾಪಿಸಿ ಅವನನ್ನು ತಡೆದನು. ಮೋಹನನಿಗೆ ಅತ್ಯಾಶ್ಚರ್ಯವಾಯಿತು. ಸಂಶಯದೃಷ್ಟಿಯಿಂದ ಅವನು ತನ್ನನ್ನು ದೃಷ್ಟಿಸುತ್ತಿದ್ದುದನ್ನು ಕಂಡು ಅನಂತನು 'ಇಲ್ಲ-ಇಲ್ಲ-ನನಗೆ

ಹೆದರಿಕೆ ತಡೆಯದಂತಾಗಿದೆ ' ಎಂದು ಸುಧಾರಿಸಿಕೊಂಡನು. ಮೇಲೆ ಮರು ಮಾತಿಲ್ಲದೆ ಹೊರಟನು. ಮೇಲುಪ್ಪರಿಗೆಗೆ ಹೋಗುವ ಮೋಹನನ ಹೆಜ್ಜೆಗಳು ಒಂದೊಂದೆ ಹೃದಯದ ಮೇಲೆ ಬೀಳುತ್ತಿರುವ ಆಘಾತಗಳು ಎಂಬ ಭಾವನೆ—ಅದೇಕೊ ?—ಈ ಮುವ್ವರಿಗೂ ಆಯಿತು. ಮೋಹನನು ಭವಾನಿಯನ್ನು ಕೂಗಿದ್ದು, ಬಾಗಿಲನ್ನು ತಟ್ಟಿದ್ದು, ಗಟ್ಟಿಯಾಗಿ ಕೂಗಿದ್ದು, ಆ ಮೇಲೆ ದಡದಡನೆ ಬಾಗಿಲನ್ನು ಒಡಿದದ್ದು, ಆಮೇಲೆ ಆರ್ತನಂತೆ ಆಕ್ರೋಶದಿಂದ ' ಭವಾನೀ ! ' ಎಂದದ್ದು—ಎಲ್ಲವೂ ಒಂದೊಂದು ಯುಗದ ವರೆಗೆ ಸಹಿಸುತ್ತಲಿದ್ದ ಘೋರಯಾತನೆಯಾಯಿತು. ಅಷ್ಟರಲ್ಲಿ ಪಾಪಟಿಗೆಗಳ ಮೇಲೆ ದುಡುದುಡು ಓಡಿದ ಸದ್ದಾಯಿತು. ಮುವ್ವರೂ ಬೆದರಿದಂತೆ ಎದ್ದುನಿಂತರು. ಮೋಹನನು ಧಾವಿಸುತ್ತ ಬಂದು ' ಒಳಗೆ ಭವಾನಿಯ ಸದ್ದೇ—ಕೇಳಿಸಲೊಲ್ಲದು ' ಎಂದವನೆ ಉಸಿರು ಸಾಲದಿದ್ದರೂ ಮತ್ತೆ ಓಡುತ್ತ ಮೇಲುಪ್ಪರಿಗೆಗೆ ನಡೆದನು. ಉಳಿದ ಮುವ್ವರೂ ಅವನ ಹಿಂದಿನಿಂದಲೆ ಓಡಿದರು.

*       *       *       *       *

ಹೊರಗೆ ಎಷ್ಟೊಂದು ಸದ್ದನ್ನು ಮಾಡಿದರೂ ಭವಾನಿಯು ಎಚ್ಚರಾಗದ್ದಕ್ಕೆ ಎಲ್ಲರೂ ಹೆದರಿದರು. ಕೊನೆಗೆ ' ಕದಾನಾದ್ರೂ ಮುರೀಲೇಸ್ರಿ ? ' ಎಂದು ಭರಮಪ್ಪನು ಸೂಚಿಸಿದನು. ಮೋಹನನು ಹತಾಶನಂತೆ ತಲೆ ತಗ್ಗಿಸಿದನು. ಆದರೆ ಬೋಧಿಯು ಅಷ್ಟರಲ್ಲಿ ಬೇರೊಂದು ಸೂಚನೆಯನ್ನು ಮಾಡಿದನು. ' ನಾನು ಹಿಂದಿನಿಂದ ಹತ್ತಿ ಕಿಟಕಿಯ ಒಳಗಿಂದ ನೋಡ್ತೀನಿ. ಭವಾನಿ ತಮಾಷೆ ನಡೆಸಿದರೂ ನಡೆಸಿರಬಹುದು. ಅಲ್ಲಿಯ ತನಕ ತಡೆ, ಭರಮಾ ' ಎಂದವನೆ ಕೆಳಗೆ ಓಡಿದನು.

ಬೋಧಿಯು ಹಿಂದಿನ ಕಿಟಕಿಗೆ ಏರಲು ೫-೬ ನಿಮಿಷಗಳು ಬೇಕಾಗಿರಬಹುದು. ಆದರೆ ಬಾಗಿಲ ಮುಂದೆ ಕಾಯುತ್ತ ನಿಂತವರಿಗೆ ಅದೆಷ್ಟೊ ದಿವಸಗಳಾಯಿತು ಬೋಧಿ ಕೆಳಗೆ ಹೋಗಿ ಎಂದೆನಿಸಿತು. ಬೋಧಿಗೆ ಮಾತ್ರ ತಡವಾಗಲಿಲ್ಲ. ತಟ್ಟನೆ ಅವನು ' ಅಯ್ಯೋ ! ' ಎಂದು ಚೀರಿದ್ದು ಕೇಳಿಸಿತು. ಮುಂದೆ ಎಲ್ಲವೂ ಸ್ತಬ್ಧ ! ಏನಾಗಿದೆಯೊ ಎನುವಷ್ಟರಲ್ಲ ಬೋಧಿಯೆ ಧಾವಿ

ಸುತ್ತ ಬಂದಿದ್ದನು. 'ಬಾಗಿಲು-ಬಾಗಿಲು....' ಎಂದಿಷ್ಟೆ ಅವನ ಬಾಯಿಯಿಂದ ಬಂದಿತು. 'ಮುರಿಯಬೇಕು' ಎಂದು ಕೈಸನ್ನೆಯಿಂದ ಹೇಳಿದನು. ಅದೊಂದೇ ತಡ ಹೊರಗೆ ಕೆಲಸ ಮಾಡುವಾಗ ಕೈಯೊಳಗಿದ್ದ ಕೊಡಲಿಯಿಂದ ಭರಮನು ಬಲವಾದ ಎರಡು ಏಟುಗಳನ್ನು ಕೊಟ್ಟನು. ಬಾಗಿಲದ ಹಲಗೆ ಬಿಟ್ಟಿತು. ಕಾಲಿನಿಂದ ಒದ್ದು ಭರಮನು ಅಸ್ತವ್ಯಸ್ತವಾದ ಹಲಗೆಗಳನ್ನು ಹಿಂದೆ ಸೂಕಿದನು, ಕೋಣೆಯೊಳಗೆ ನುಗ್ಗಿದನು. ಮೋಹನನು ಅವನ ಹಿಂದೆಯೆ ಬಂದನು. ಇಂದುಮತಿಯೂ ಒಳಗೆ ಕಾಲಿಡಬೇಕೆನುವಷ್ಟರಲ್ಲಿ ಭರಮನು 'ನೀವು ಕೆಳಗ ನಡೀರಿ ಯವ್ವಾ, ಇಲ್ಲಿ ಹೆಜ್ಜೆ ಇಡಾಕ ಜಾಗಾ ಇಲ್ಲ—ಅಲ್ಲ—ಬಾಗಿಲದ ಹಲಗೆ ಚುಚ್ಚೀತು' ಎಂದು ಅವಳನ್ನು ತಡೆದನು.

* * * * *

ಪೋಲೀಸ ಅಧಿಕಾರಿಗಳು ಬರುವ ವರೆಗೆ ಭರಮನೂ ಮೋಹನನೂ ಕೋಣೆಯಲ್ಲಿ ನಿಂತಿದ್ದಹಾಗೆಯೆ ಕಾದು ನಿಂತಿದ್ದರು. ಬೆಳಗಿನಿಂದ ನಡೆದುದನ್ನೂ ತಾವು ಭವಾನಿಯ ಕೋಣೆಯಲ್ಲಿ ಕಂಡುದನ್ನೂ ಮೋಹನನು ಸ್ವಲ್ಪದರಲ್ಲಿ ವಿವರಿಸಿದನು. ಬೋಧಿಯು ಹಿಂದಿನಿಂದ ಕಿಟಕಿಯನ್ನು ಏರಿದುದನ್ನೂ ತಾನು ಬಾಗಿಲನ್ನು ಮುರಿದುದನ್ನೂ ಭರಮಪ್ಪನು ರಸವತ್ತಾಗಿ ಬಣ್ಣಿಸತೊಡಗಿದನು. ಆದರೆ ಇಷ್ಟರಲ್ಲಿಯೆ ಕುತೂಹಲ ಕೆದರಿದಂತಾದ್ದರಿಂದ ಅಧಿಕಾರಿಯು ಭರಮನನ್ನು ತಡೆದನು. 'ಹೇಳಿದ್ದ ಕೇಳಿಕೊಂಡ್ರ ಪೋಲೀಸ ಯಾಕ ಅನಬೇಕು?' ಎಂದು ಭರಮನು ಮನಸಿನಲ್ಲಿಯೆ ತಕರಾರನ್ನು ಬರೆದನು.

ಅಧಿಕಾರಿಗಳ ಎದುರು ಬಂದಕ್ಕಿಂತ ಹೆಚ್ಚು ಪ್ರಶ್ನೆಗಳೆದ್ದುವು. ಮುಖ್ಯವಾದ ಪ್ರಶ್ನೆಯನ್ನು ಸ್ವಲ್ಪಾವಧಿಯಲ್ಲಿಯೆ ಬಂದ ಡಾಕ್ಟರನು ಬಿಡಿಸಿದನು. ಅದೆಂದರೆ — ಭವಾನಿಯು ಸಹಜಮರಣವನ್ನು ಹೊಂದಿರಲಿಲ್ಲ. ಅವನ ಮುಖದಲ್ಲಿ ತುಸು ಸೋಜಿಗದ ಮತ್ತು ಹೆಚ್ಚಾಗಿ ಭಯೋದ್ವೇಗದ ಕಳೆ ಇದ್ದಿತು. ಅವನು ಮುಷ್ಟಿಗಳನ್ನು ಬಿಗಿದಿದ್ದನು. ಆದರೆ ಗಾಯಗಳು ಮಾತ್ರ ಒಂದೂ ಇರಲಿಲ್ಲ. ಕಣ್ಣು ದಿಟ್ಟಿಸುವುದಾಗಿತ್ತು. 'ಯಾವುದೊ

ಸಂಗತಿ ಅಕಸ್ಮಾತ್ತಾಗಿ ಇವನ ಕಣ್ಣೆದುರು ನಡೆದಿದೆ. ಒಂದು ನಿಮಿಷ ಆಶ್ಚರ್ಯವಾದಂತಿದ್ದರೂ ಕೂಡಲೆ ಭಯವಿಕಾರ ಹೆಚ್ಚಾಗಿ ಇವನ ಹೃದಯ ಕ್ರಿಯೆಯೆ ತಡೆದುಹೋಗಿರಬಹುದು' ಎಂದು ತಾತ್ಪೂರ್ತಿಕ ನಿರ್ಣಯವಾಯಿತು. ಮರಣವು ಸಹಜವಾದುದಲ್ಲ, ಎಂದ ಮಾತ್ರಕ್ಕೆ ಪೋಲೀಸ ಅಧಿಕಾರಿಗಳು ತಮ್ಮ ಹೊಣೆಗಾರಿಕೆ ಹೆಚ್ಚಿತೆಂಬುದನ್ನು ಅರಿತರು. ಕೆಲಹೊತ್ತಿನಲ್ಲಿ—ಮಿಕ್ಕವರೆಲ್ಲರೂ ಭವಾನಿಯ ದೇಹವನ್ನು ಗುರುತಿಸಿ ತಂತಮಗೆ ಗೊತ್ತಿದ್ದುದನ್ನು ಹೇಳಿದ ತರುವಾಯ—ಆ ಕೋಣೆಯಲ್ಲಿ ಇಬ್ಬರೇ ಅಧಿಕಾರಿಗಳು ಉಳಿದರು. ಕೋಣೆಯಲ್ಲಿಯ ವಸ್ತುಸ್ಥಿತಿಯನ್ನು ಸೂಕ್ಷ್ಮವಾಗಿ ಪರೀಕ್ಷಿಸತೊಡಗಿದರು. ಎರಡು ಸಂಗತಿಗಳು ತಟ್ಟನೆ ಅವರ ಲಕ್ಷ್ಯವನ್ನು ಸೆಳೆದುವು. ಒಂದು, ಭವಾನಿಯು ಸಾಯುವಾಗ ಬಾಗಿಲದ ಹತ್ತಿರವಿದ್ದನು; ಇನ್ನೊಂದು, ಕೋಣೆಯಲ್ಲಿ ಎರಡನೆಯವರೊಬ್ಬರು ಒದಿರಲೇಬೇಕು,ಎಂಬುದು ಈ ಎರಡನೆಯ ಸಂಗತಿಗೆ ಕಾರಣವೆಂದರೆ ಕೋಣೆಯ ತುಂಬ ಕಾಗದಗಳು ಚೆಲ್ಲಾಪಿಲ್ಲಿಯಾಗಿ ತೂರಿದ್ದುವು. ಕೋಣೆಯೊಳಗಿನ ಮಿಕ್ಕ ಸಾಮಾನುಗಳನ್ನು ನೋಡಿದರೆ ಆಗಂತುಕ ಮತ್ತು ಭವಾನಿ ಇವರಿಬ್ಬರ ನಡುವೆ ಜಗ್ಗಾಟ-ಹೋರಾಟಗಳಾಗಿರಬೇಕೆಂಬುದು ಸ್ಪಷ್ಟವಾಗುತ್ತಿತ್ತು. ಇದ್ದ ಒಂದೆರಡು ಪೆಟ್ಟಿಗೆಗಳು ಸ್ಥಳದಿಂದ ನೂಕಲ್ಪಟ್ಟಂತಿದ್ದುವು. ಒಂದು ಕಡೆ ಕುರ್ಚಿಯೊಂದು ಎರಡೇ ಕಾಲ್ಗಳ ಮೇಲೆ ಗೋಡೆಗೆ ಆತು ಹೊಯ್ದಾಡುವಂತಿದ್ದಿತು. ಅಂತೂ ಕೋಣೆಯಲ್ಲಿ ಇನ್ನೊಬ್ಬರು ಬಂದಿದ್ದರೆಂದೂ ಭವಾನಿಯೊಡನೆ ಬಡಿದಾಡಿದರೆಂದೂ ತಿಳಿಯಲು ಸಂದೇಹವಿದ್ದಿರಲಿಲ್ಲ. ಆದರೆ ಇನ್ನೊಬ್ಬರು ಬಂದುದು ಹೇಗೆ? ಯಾಕೆಂದರೆ ಮೋಹನ-ಬೋಧಿ-ಭರಮಪ್ಪ ಇವರೆಲ್ಲರೂ 'ಬಾಗಿಲು ಒಳಗಿನಿಂದ ಭದ್ರವಾಗಿ ಮುಚ್ಚಲ್ಪಟ್ಟಿತ್ತು' ಎಂದು ಹೇಳಿದ್ದರು. ಇತ್ತ ಕಿಟಕಿ ತೆರೆದಿತ್ತೇನೋ ನಿಜ. ಆದರೆ ಯಾರೂ ಪ್ರವೇಶಿಸಿ ಬರುವಷ್ಟು ಅವಕಾಶ ಕಿಟಕಿಯ ಸಳಿಗಳ ನಡುವೆ ಇದ್ದಿರಲಿಲ್ಲ. ಭವಾನಿಯು ಬಾಗಿಲ ಹತ್ತಿರ ಇದ್ದುದರಿಂದ ಬಾಗಿಲನ್ನು ತೆರೆಯಲು ಹೋದಾಗ ಸತ್ತಿರಬಹುದೆ? ಹಾಗಾದರೆ ಅವನು ಹೆದರಲು ಕಾರಣವೇನು? ಕೋಣೆಯಲ್ಲಿ ಅವ್ಯವಸ್ಥೆಗೆ ಕಾರಣವೇನು? ಕೋಣೆಯೊಳಗೆ ಬಂದು ಹೋದವರು ಯಾರು? ಆ ವ್ಯಕ್ತಿಯಾದರೂ ಸಂಧಿಸಿದರೆ ಕೆಲವು ಸಂಗತಿಗಳಾದರೂ ತಿಳಿಯಬಹುದಾಗಿತ್ತು. ಆಗಂತುಕನು

ಮರಣಕ್ಕೆ ಎಷ್ಟರಮಟ್ಟಿಗೆ ಕಾರಣನಾಗಿರಬಹುದೆಂಬುದನ್ನೂ ಸದ್ಯಕ್ಕೆ ಹೇಳುವಂತಿರಲಿಲ್ಲ.

ಶವಪರೀಕ್ಷೆಯಾದ ಮೇಲೆ ಒಂದೆರಡು ಸಂಗತಿಗಳು ಪೋಲೀಸರಿಗೆ ತಿಳಿದುಬಂದುವು. ಭವಾನಿಯ ಮೈಮೇಲೆ ನಖದಿಂದ ಕ್ರೂರವಾಗಿ ಚಿವುರಿಕೊಂಡ ಚಿನ್ಹಗಳಿದ್ದುವು. ಇದಲ್ಲದೆ—ಬಿಗಿದ ಮುಷ್ಟಿಯಲ್ಲಿ ಕಾಗದದ ತುಣುಕುಗಳಿದ್ದುವು. ಆ ತುಣುಕುಗಳು ಪತ್ರದ ತುಣುಕುಗಳಾಗಿದ್ದುವು. 'ಈ ವ್ಯಾಸಂಗ ಬಿಡದಿದ್ದರೆ ನಿನ್ನನ್ನು ಕೊಂದು ಹಾಕಲೂ ಹಿಂದೆಮುಂದೆ ನೋಡಲಿಕ್ಕಿಲ್ಲ'; 'ಒಂದು ಹುಡುಗೆಯ ಜೀವನವನ್ನು ದುಡ್ಡಿನ ಸೊಕ್ಕಿನಿಂದ ಹಿಡಿದು ಹಿಪ್ಪೆಮಾಡುತ್ತಿರುವೆ'; 'ಇದು ನಿನ್ನ ಕೊನೆ ಎಂದು ತಿಳಿ'; 'ಆತ್ಮಹತ್ಯೆ ಮಾಡಿಕೆ. . . .' ಎಂದು ಮುಂತಾಗಿ ಅಪೂರ್ಣವಾಗಿದ್ದ ವಾಕ್ಯಗಳೂ ತುಂಡುಗಳೂ ಅಧಿಕಾರಿಗಳನ್ನು ಹೆಚ್ಚಾದ ಪೇಚಿಗೆ ಸೂಕಿದುವು. ಒಂದು ಪತ್ರವು ಪೂರ್ತಿಯಾಗಿರಲಿಲ್ಲ. ಒಂದರ ತಾರೀಕು ತಿಳಿಯುವಂತಿಲ್ಲ. ಮನೆಯೊಳಗಿದ್ದ ಗೆಳೆಯರೆ ಬರೆದಿದ್ದರೆ ಹಸ್ತಾಕ್ಷರವನ್ನು ಶೀಘ್ರದಲ್ಲಿಯೆ ಗುರುತಿಸಬಹುದೆಂಬ ಭರವಸೆ ಇದ್ದಿತು ಅಧಿಕಾರಿಗಳಿಗೆ.

ಸದ್ಯಕ್ಕೆ ಮಾತ್ರ ಅಧಿಕಾರಿಗಳು ಒಂದು ವ್ಯಕ್ತಿಯನ್ನೆ ಸಂಶಯದಿಂದ ನೋಡತೊಡಗಿದರು. ಆ ವ್ಯಕ್ತಿ ಭರಮಪ್ಪ. ಭರಮಪ್ಪನಿಗೂ ಈ ಮಾತಿನ ಸಂಶಯ ಬಾರದೆ ಉಳಿಯಲಿಲ್ಲ. 'ಬಾಕಿಲ ಮುರೀಲೇನ್ರಿ?' ಎಂಬ ವಿಚಾರ ಭರಮಪ್ಪನಿಗೆಯೆ ಮುಂಚೆ ಬಂದಿರಲಿಲ್ಲವೆ? ಯಾಕೆ? ಭವಾನಿಯ ನೀತಿ ನಡತೆಗಳನ್ನು ಅವನ ಜೀವದ ಗೆಳೆಯರಿಗಿಂತ ೫-೬ ದಿವಸಗಳ ಪರಿಚಯವಿದ್ದ ಭರಮಪ್ಪನಿಗೆ ಗೊತ್ತಿರುವುದು ಹೇಗೆ? ಮಿಕ್ಕವರಿಗೆ ಬಾರದ ವಿಚಾರ ಅವನಿಗೇಕೆ ಬಂದಿತು? ಅರ್ಥಾತ್, ತನ್ನ ಸಂಬಂಧವಿರಲಿ ಇಲ್ಲದಿರಲಿ ಭರಮಪ್ಪನಿಗೆ ಭವಾನಿ ಸತ್ತುದು ಮೊದಲೇ ಗೊತ್ತಿರಲು ಸಾಕು, ಎಂದು ಅಧಿಕಾರಿಗಳ ತರ್ಕ. ಇದಲ್ಲದೆ—ಭವಾನಿಯೊಬ್ಬನಿಗೆಯೆ ಯಾರಿಗೆ ತಿಳಿಯದಂತೆ ಮೇಲುಪ್ಪರಿಗೆಯ ಪಾವಟಿಗೆಗಳನ್ನು ಏರಿ ಹೋಗಲು ಶಕ್ಯವಿದ್ದಿತು, (ಯಾಕೆಂದರೆ ಅವನು ನಡುಕೋಣೆಯಲ್ಲಿ ಮಲಗಿದ್ದನು). ಭವಾನಿ ಏಳಲು ತಡವಾದುದಾಗಲಿ, ಮಿಕ್ಕವರು ಅವನ ಬಾಗಿಲನ್ನು ಬಡೆದು ಹಾಹಾಕಾರ ಎಬ್ಬಿಸಿದು

ದಾಗಲಿ ಭರಮನಿಗೆ ಇಷ್ಟೊತ್ತು ಲಕ್ಷ್ಯಕ್ಕೆ ಬಂದಿರಲಿಲ್ಲವೇಕೆ? ಜನ್ಮದರಿದ್ರನು, ಊರೂರು ಅಲೆವವನು ಇವನು; ಬಹಳಪಾಡಿ ಕಳವು ಮಾಡುವಾಗ ಭವಾನಿ ಎಚ್ಚತ್ತಿರಬಹುದೆಂದೂ ಮುಂದೆ ತನ್ನ ಕಳವು ಹೊರಬಿದ್ದೀತೆಂಬ ಹೆದರಿಕೆಯಿಂದ ಭವಾನಿಯನ್ನು ಹೊಡೆದು ಓಡಿರಬಹುದೆಂದೂ ಆದರೂ ಭವಾನಿ ಎದ್ದು ಮತ್ತೆ ಕಳ್ಳನು ಬಂದಾನೆಂಬ ಹೆದರಿಕೆಯಿಂದ ಬಾಗಿಲನ್ನು ಮುಚ್ಚಿಕೊಂಡನು, ಕೂಡಲೆ ಅಲ್ಲಿಯೇ ಬಿದ್ದು ಪ್ರಾಣ ಬಿಟ್ಟನು—ಎಂದು ನಡೆದಿರಬಹುದಾದ ಸಂಗತಿಯನ್ನು ಅಧಿಕಾರಿಗಳು ಚಿತ್ರಿಸಿಕೊಂಡರು. ತಾನು ಕೆಲಸ ಕೊಟ್ಟು ಸಹಾಯ ಮಾಡುತ್ತಿದ್ದ ಭರಮನೆ ಈ ಕಳವನ್ನು ಮಾಡುವನಲ್ಲ, ಎಂಬುದಕ್ಕೆ ಭವಾನಿಯ ಮುಖದ ಮೇಲೆ ಆಶ್ಚರ್ಯದ ಕಳೆ ಇದೆಯೆಂದೂ ಅವರು ಸಮಾಧಾನವನ್ನು ತಂದುಕೊಂಡರು. ಆದರೂ ಬೇರೆ ಕೆಲವು ಸಂಗತಿಗಳ ಹೊಂದಿಕೆಯಾಗುವಂತಿಲ್ಲ, ಎಂಬುದು ಅಧಿಕಾರಿಗಳಿಗೂ ಗೊತ್ತಿದ್ದಿತು. ಭವಾನಿಯ ಮೈಮೇಲಿನ ಉಗುರಿನಿಂದ ಸವರಿಕೊಂಡ ಚಿಹ್ನಗಳ ಪಾಡೇನು? ಭರಮನಂತಹ ಹುಂಬನು ಈ ರೀತಿ ಗಾಯಗೊಳಿಸುವುದು ಶಕ್ಯವಿಲ್ಲ, ಇದಲ್ಲದೆ ಆದಷ್ಟು ಬೇಗ ಕೋಣೆಯಿಂದ ಓಡಿಹೋಗುವುದೆ ಭರಮನಿಗೆ ಸಹಜವಾಗಿದ್ದಿತು. ಅದರಂತೆಯೆ ಭವಾನಿಯು ಮುಷ್ಟಿಯಲ್ಲಿ ಬಿಗಿದು ಹಿಡಿದ ಕಾಗದ-ತುಣುಕುಗಳ ಅರ್ಥವೇನು? ಯಾರಿಂದಲೊ ಇನ್ನೊಬ್ಬರಿಂದ ವಿಶ್ವಪ್ರಯತ್ನ ಮಾಡಿ ಅವನ್ನು ಉಳಿಸಿಕೊಳ್ಳಲು ಭವಾನಿಯು ಬಿಗಿದು ಹಿಡಿದಂತೆ ತೋರುತ್ತಿದ್ದಿತು. ಭರಮನು ಆ ಇನ್ನೊಬ್ಬನಾಗಿರುವುದು ಶಕ್ಯವೇ ಇರಲಿಲ್ಲ.

ಇಂತಹ ಸಂಶಯಗಳಿಗೆ ಅಧಿಕಾರಿಗಳು ತಾತ್ಕಾಲಿಕವಾಗಿ ಹೆಚ್ಚು ಮಹತ್ತ್ವವನ್ನು ಕೊಡಲಿಲ್ಲ. ಯಾಕೆಂದರೆ ಭರಮನನ್ನು ಬಿಟ್ಟರೆ ಇನ್ನು ಯಾರನ್ನು ಸಂಶಯದಲ್ಲಿಡುವುದು? ಮೋಹನನನ್ನೊ? ಒಂದು ದೃಷ್ಟಿಯಿಂದ ಮೋಹನನೂ ಸಂಶಯಕ್ಕೆ ಹೊರಗಾಗಲಾರ, ಎಂದು ಅಧಿಕಾರಿಗಳ ವಿಚಾರ. ಯಾಕೆಂದರೆ ಭವಾನಿಗೆ ಏನೊ ಆಗಿದೆ, ಎಂಬುದು ಮೋಹನನಿಗೆಯೆ ಮೊದಲು ತಿಳಿಯಿತು. ಇದಲ್ಲದೆ—ಮೊದಲು ಮೋಹನನೊಬ್ಬನೆ ಭವಾನಿಯ ಕೋಣೆಗೆ ಹೋಗಿದ್ದನು. ಆದರೆ ಸದ್ಯದ ಮಟ್ಟಿಗೆ ಮೋಹನನನ್ನು ಶಂಕಿಸಲು ಸಬಲವಾದ ಯಾವ ಕಾರಣಗಳೂ ಇರಲಿಲ್ಲ. ಇದೇ ಮಾತು ಮಿಕ್ಕ ಎಲ್ಲರಿಗೂ

ಅನ್ವಯಿಸುತ್ತಿದ್ದಿತು. ಇಂದುಮತಿಯನ್ನು ಕೂಡ ಶಂಕಿಸಬಹುದಾಗಿತ್ತು. ಒಂದು, ಆವಳ ಮದುವೆಯ ವಿಷಯ; ಭವಾನಿಯನ್ನು ಮದುವೆಯಾಗು ವಾಕೆ, ಎಂದು ಎಲ್ಲರೂ ಹೇಳುತ್ತಿದ್ದರೇನೊ ನಿಜ; ಆದರೆ ಆ ಮದುವೆ ಭವಾನಿಗೆ ಇಷ್ಟವಾಗಿದ್ದಿತು, ಭವಾನಿ ಅದಕಾಗಿ ಆತುರಸಿದ್ದನು,ಎಂಬುದಕ್ಕೆ ಯಾವ ಪ್ರಮಾಣವೂ ಇದ್ದಿರಲಿಲ್ಲ. ಇನ್ನೊಂದು, ಇಂದುಮತಿಯ ನಿಮಿತ್ತದಿಂದ ಭವಾನಿ ಈ ಆಹುತಿಗೀಡಾಗಿರಬಾರದೇಕೆ? ಮಿಕ್ಕವರಲ್ಲಿ ಯಾರಿಗಾದರೂ ಇಂದುಮತಿಯನ್ನು ವರಿಸುವ ಆಶೆ ಇದ್ದರೆ ಅದರಿಂದಾದ ಅಸೂಯೆ ಈ ಅನಾಹುತಕ್ಕೆ ಕಾರಣವಾಗಿರಬಹುದೆ? ಪತ್ರದ ತುಣುಕುಗಳಿಂದ ಬರಿಯ ಸಂದೇಹಕ್ಕೆ ಪುಟು ದೊರೆಯುತ್ತಿತ್ತಲ್ಲದೆ ಯಾವ ಮಾತೂ ನಿಶ್ಚಿತವಾಗಿ ತಿಳಿಯುವಂತಿರಲಿಲ್ಲ. ಅನಂತನು ಪುಕ್ಕನು. ಆದರೆ ಹೇಡಿಗಳೆ ಅತ್ಯಂತ ಕ್ರೂರ ತರದ ವಧೆಯನ್ನು ಮಾಡುವುದು ಈ ಅಧಿಕಾರಿಗಳು ತಮ್ಮ ಅನುಭವದಲ್ಲಿ ಅನೇಕ ಸಲ ಕಂಡಿದ್ದರು. ಇದಲ್ಲದೆ, ಅನಂತನಿಗೂ ಭರಮಸಂತೆ ಮೇಲುಪ್ಪರಿಗೆಗೆ ಹೋಗುವ ಅವಕಾಶವಿದ್ದಿತು. ಭವಾನಿಯನ್ನು ಎಚ್ಚರ ಮಾಡಲೆಂದು ಮೋಹನನು ಹೊರಟಾಗ ಅನಂತನು ವಿಲಕ್ಷಣವಾಗಿ ವರ್ತಿಸಿದ್ದನ್ನು ಇವರು ತಿಳಿದುಕೊಂಡಿದ್ದರು. ಇಷ್ಟಾದರೂ ಅನಂತನನ್ನು ಬಂಧಿಸುವಷ್ಟು ಪ್ರಮಾಣಗಳು ಅವರಿಗಿನ್ನೂ ಇರಲಿಲ್ಲ. ಹಾಗೆಯೆ ಬೋಧಿಯ ವಿಷಯ. ಈ ಗುಂಪಿನಲ್ಲಿ ಬೋಧಿಯ ಹೊಂದಿಕೆಯಾಗುವುದಿಲ್ಲ, ಎಂದು ಅಧಿಕಾರಿಗಳಿಗೆ ತಿಳಿದು ಬರಲು ತಡವಾಗಲಿಲ್ಲ. ಮೇಲೆ ಬೋಧಿಯ ಹುಚ್ಚು! ಆ ಗ್ರಂಥಗಳಾದರೂ ಎಂತಹವು! ಕೊಲೆ-ಕಳ್ಳತನ-ಪತ್ತೆದಾರಿಯ ಕತೆಗಳು! ವಿದ್ಯೆಯಿದ್ದೂ ಅರ್ಜನೆ ಇಲ್ಲದ್ದಕ್ಕೆ ಭವಾನಿಯಂತಹರಿಗಾಗಿ ಅಸಹನೆಯೂ ಅವನಿಗಿದ್ದಿತು. ಆದರೆ ಇದೆಲ್ಲ ಒಬ್ಬ ಮನುಷ್ಯನನ್ನು ಶಿಕ್ಷೆಗೆ ಗುರಿಮಾಡಲು ಸಾಕಷ್ಟು ಪ್ರಮಾಣವಾಗದು, ಎಂಬುದು ಅವರಿಗೆ ಗೊತ್ತಿದ್ದರಿಂದ ಬೋಧಿಯೂ ಸದ್ಯಕ್ಕೆ ಅಧಿಕಾರಿಗಳ ಜಾಲದ ಹೊರಗುಳಿದನು. ಈ ಮನೆಯಲ್ಲಿ ಭೂತವಿದೆ, ಎಂಬ ಹಾರಿಕೆಯ ಸುದ್ದಿ ಅವರಿಗೆ ಮೊದಲಿನಿಂದ ಗೊತ್ತಿದ್ದಿತು. ಆದರೆ ಬಂಧನ-ಶಿಕ್ಷೆ-ಸಾಕ್ಷ್ಯ ಮೊದಲಾದ ಯಾವುದಕ್ಕೂ ಭೂತವನ್ನು ಇದಿರು ನಿಲ್ಲಿಸುವುದು ಶಕ್ಯವಲ್ಲದ್ದರಿಂದ ಆ ವಿಷಯ ಅವರು ಏನನ್ನೂ ಮಾಡಹೋಗಲಿಲ್ಲ. ಅದಕಾಗಿ ಕೊನೆಗೆ—ಸದ್ಯಕ್ಕೆ ಸಿಕ್ಕನಷ್ಟೆ ಸಾಕು, ಎಂಬ ನ್ಯಾಯದಂತೆ—

ಭರಮುನನ್ನು ಬಂಧಿಸಿದ್ದರು. ' ಮೊಲ ಹಿಡೀಲಾಕ ಹೋರಿನಾಗ ಕೈಹಾಕಿ ಹಾಂವು ಹಿಡಿಧಾಂಗ ಹಿಡಿದಿರಿ ನನ್ನ ' ಎಂದು ಭರಮುನೂ ಚುಚ್ಚಿ ಮಾತ ನಾಡಿದ್ದನು. ಆದರೆ ಭರಮುನನ್ನು ಬಂಧಿಸಿದ್ದಕ್ಕೆ ಉಳಿದವರೆ ತಳಮಳಕ್ಕೆ ಒಳಗಾದರು ಹೇಗೆ, ಎಂಬುದನ್ನು ಈ ಮೊದಲೆ ತೋರಿಸಿಕೊಟ್ಟಿದೆ.

# ೫ ಅನಂತನ ಆತ್ಮನಿವೇದನೆ

ಮನೆಯಲ್ಲಿಯ ಭಯಾನಕ ಬಣಬಣದ ವಾತಾವರಣಕ್ಕೆ ಮೋಹನನು ಎಷ್ಟು ಬೇಸತ್ತಿದ್ದನೆಂಬುದನ್ನು ಹಿಂದೆಯೆ ಹೇಳಿದೆಯಷ್ಟೆ. ಕೊನೆಗೆ ಅವನು ಮನೆಯನ್ನು ವ್ಯವಸ್ಥೆಯಿಂದ ಹಸನಾಗಿಡುವದರಲ್ಲಿ ಕಾಲವನ್ನು ತೊಡಗಿಸಬೇಕೆಂದು ಆ ದಿನದ ಬೆಳಗಿನ ಚರ್ಚೆಯಲ್ಲಿ ನಿಶ್ಚಯಿಸಿ ಹೊರಟದ್ದನ್ನೂ ಹೇಳಿದೆ. ಇನ್ನೊಂದು ಮಾತನ್ನು ಈಗ ಹೇಳಬಹುದು. ಅದೆಂದರೆ, ಮೋಹನನಿಗೆ ಕೆಲಸದಲ್ಲಿ ತೊಡಗುವದಕ್ಕಿಂತ ಎಲ್ಲರನ್ನು ಬಿಟ್ಟು ತನ್ನಷ್ಟಕ್ಕೆ ತಾನು ವಿಚಾರ ಮಾಡುವುದು ಬೇಕಾಗಿತ್ತು. ಮನೆಯಲ್ಲಿ ನಡೆದ ಅನರ್ಥಕ್ಕೆ ೩-೪ ದಿನಗಳಾಗಿದ್ದರೂ ಅಧಿಕಾರಿಗಳು ಯಾವ ನಿರ್ಣಯಕ್ಕೂ ಬಂದಿರಲಿಲ್ಲ. ಭರಮನೆಂದರೆ ಕೇವಲ ಬೇಟೆಗಾಗಿ ಕಟ್ಟಿದ ಆಮಿಷ, ಎಂಬುದು ಮೋಹನನಿಗೆ ಸ್ಪಷ್ಟವಾಗಿದ್ದಿತು. ಭರಮನನ್ನು ಬಿಟ್ಟರೆ ಉಳಿದವರು ತಾವು ನಾಲ್ವರು ಜನರು, ಲೆಕ್ಕಕ್ಕೆ ಮನೆಯೊಳಗಿದ್ದ ಬೇಕಾದ 'ಭೂತ'. ಈ ಐವರಲ್ಲಿ ಒಬ್ಬರು ಅಪರಾಧಿಗಳಿರಲೇಬೇಕು. ಈ ವಿಚಾರದಿಂದ ಅವನಿಗೆ ಕಳವಳವಾಗಿದ್ದಿತು. ಇದರ ನಿರ್ಣಯವಾಗದೆ ತನಗೆ ಸಮಾಧಾನವಿಲ್ಲ, ಎಂದರಿತನು. ಅದಕಾಗಿಯೆ ತನ್ನಷ್ಟಕ್ಕೆ ತಾನು ಮನೆಯೊಳಗೆ ಸುಳಿದಾಡತೊಡಗಿದನು. ಹಾಗೆ ನೋಡಿದರೆ ಇತ್ತ ಬೋಧಿಗೂ ಅದೇ ವಿಚಾರವಿದ್ದಿತು. ತಮ್ಮೊಳಗೆ ಯಾರಾದರೊಬ್ಬರು ಅಪರಾಧಿಗಳಿರಲೆಬೇಕು, ಎಂಬಂತಹ ಪ್ರಸಂಗದಲ್ಲಿ ಮೋಹನನು ಇಷ್ಟೊಂದು ಚಟುವಟಿಕೆಯನ್ನು ತೋರಿಸಲು ಕಾರಣವೇನು—ಎಂಬ ವಿಚಾರದಿಂದ ಅವನೂ ವ್ಯಗ್ರನಾಗಿದ್ದನು. ಒಂದು ವೇಳೆ ಮೋಹನನು ಮನೆಗೆಲಸದ ನಿಮಿತ್ತದಿಂದ ಪೋಲೀಸರ ಕೆಲಸಕ್ಕೆ ಅಡ್ಡಬರುವಂತೆ ನಡೆದುಕೊಂಡರೆ? ತನಗಂತೂ ಅದರ ಗೊಡವೆಯೆ ಬೇಡ, ಎಂದು ಅವನು ಮನೆಯಿಂದ ಹೊರಬಿದ್ದು ಸುಳಿದಾಡತೊಡಗಿದ್ದನು. ಇಬ್ಬರೂ ಒಂದೇ ವಿಚಾರದಲ್ಲಿ ತೊಡಗಿರುವರೆಂಬ ಜ್ಞಾನ ಪರಸ್ಪರ ಇದ್ದಿರಲಿಲ್ಲ. ಆ ಮನೆಯ ವಾತಾವರಣದಲ್ಲಿ ಪರಸ್ಪರ ಸಂಶಯವೆ ಬೆಳೆಯುತ್ತಲಿದ್ದಿತು.

ಆದಕಾಗಿಯೆ ಮನೆಯೊಳಗೆ ಅತ್ತಿತ್ತ ತಿರುಗಾಡುವಾಗ ಮೋಹನನು ಮೇಲಿಂದ ಮೇಲೆ ತಡೆದು ಯಾರಾದರೂ ತನ್ನ ಹಿಂದಿನಿಂದ ಸುಳಿದಾಡುತ್ತಿರುವರೊ ಹೇಗೆ, ಎಂದು ನೋಡುತ್ತಿದ್ದ. ಆದರೆ ಮೋಹನನ ಸುದೈವದಿಂದ ಅಲ್ಲಿ ಯಾರೂ ಇರುವಂತಿರಲಿಲ್ಲ. ಬೋಧಿಯು ಮನೆಯ ಹೊರಗಿದ್ದನು. ಹೆದರಿದ ಅನಂತನು, ಹೆಂಗುಸಾದ ಇಂದುಮತಿಯು ಬೆಳಗಿನಿಂದ ಕುಳಿತ ಕೋಣೆಯಲ್ಲಿಯೆ ಹೆಚ್ಚು ಹೊತ್ತು ಮಾತನಾಡುತ್ತ ಕುಳಿತರು. ಅಂತೂ ಮೋಹನನ ಮನಸ್ಸಿಗೆ ಸಮಾಧಾನವಾಯಿತು. ಕೆಲಹೊತ್ತಿನಲ್ಲಿ ನಿಜವಾಗಿಯೆ ಕೆಲಸದಲ್ಲಿ ತೊಡಗಿದನು. ಮತ್ತೆ ಕೆಲವು ವೇಳೆ ಕಳೆದ ಮೇಲೆ ಅವನಿಗೆ ಧೈರ್ಯ ಬಂದಂತಾಗಿ ಇಂದುಮತಿ, ಅನಂತ, ಬೋಧಿ ಈ ಮೂವರ ಕೋಣೆಯಲ್ಲೂ ಸುಳಿದಾಡಿ ಕೈಯಾಡಿಸಿ ಬಂದನು. ಇಷ್ಟಾದರೂ ಚಟ್ಟನೆ ಇದಿರು ನೋಡುವ, ಆಗಿಂದಾಗ ಹಿಂತಿರುಗಿ ನೋಡುವ ಅವನ ಪ್ರವೃತ್ತಿ ಹೆಚ್ಚಾಗುತ್ತಲೆ ಇದ್ದಿತು. ಒಮ್ಮೆ ಹಿಂತಿರುಗಿ ನೋಡುವ ಸಂದರ್ಭದಲ್ಲಿ ಅವನು ತಡೆದು ವಿಚಾರ ಮಾಡಿದನು. ಏನನ್ನೊ ಹುಡುಕುವಂತೆ ತನ್ನ ಮನಸ್ಸು ಅಸ್ವಸ್ಥವಾದುದು ಯಾಕೆ ಎಂಬುದು ಅವನಿಗೆ ತಟ್ಟನೆ ಹೊಳೆಯಿತು. ಆ ಮುಖ! ಆ ರಾತ್ರಿ ತಾನು ಹೊರಕಿಟಕಿಯಿಂದ ತನ್ನ ಕೋಣೆಯಲ್ಲಿ ನೋಡಿದಾಗ ಕಂಡ ಮುಖ! ಎಲ್ಲಿಯೊ ನೋಡಿದ ಮುಖದಂತೆ ಕಂಡರೂ ಪರಿಚಯ ಸ್ಮರಿಸಲೊಲ್ಲದು. ಅಸ್ಪಷ್ಟವಾಗಿತ್ತು, ವಿಕಾರವಾಗಿತ್ತು, ಇಷ್ಟಾದರೂ ಪರಿಚಯದ ಮುಖದಂತಿತ್ತು! ಆ ಮುಖದ ಗುರುತನ್ನು ಹುಡುಕುವುದಕ್ಕೆ ತನ್ನ ಮನಸ್ಸು ಅಸ್ವಸ್ಥವಾಗಿದೆ, ಎಂಬುದು ಅವನಿಗೀಗ ತಿಳಿಯಿತು. ಕಣ್ಣು ಮುಚ್ಚಿ ನೆನೆದುಕೊಂಡನು. ಕೆಲಹೊತ್ತಿನ ಮೇಲೆ — ಯಾವ ವಿಚಾರ ಬಂದಿತೊ ಏನೊ— ಒಮ್ಮೆಲೆ ಗಟ್ಟಿಯಾಗಿ ನಕ್ಕನು. ಆದರೆ ಅದು ನಗೆಯ ವಿಚಾರವೆ ಆಗಿರಲಿಲ್ಲವೆಂಬಂತೆ ತೋರಿತು. ಯಾಕೆಂದರೆ ಅರೆನಿಮಿಷದಲ್ಲಿ ನಗೆ ಮಾಯವಾಗಿ ನಿಶ್ಚಯಾತ್ಮಕವಾದ ಒಂದು ಕಠೋರ ದೃಷ್ಟಿ ಅವನ ಕಣ್ಣುಗಳಲ್ಲಿ ಮಿಂಚತೊಡಗಿತು.

* * * * * *

ಮಧ್ಯಾಹ್ನದ ಊಟ ಮುಗಿಯುವವರೆಗೆ ಮೋಹನನು ಹೆಚ್ಚು ಮಾತನಾಡಲಿಲ್ಲ. ಬೋಧಿ ಮಾತ್ರ ಮೋಹನನ ಮೌನಮುದ್ರೆಯನ್ನು ನೋಡಿ

ವಿನೋದದಿಂದ ತನ್ನ ಬಾಯನ್ನು ಸಡಲಿಸಿದ್ದನು. ಪಾಪ! ಮನೆಗೆಲಸದಿಂದ ಮೋಹನನ ಮೃದುತರ ಬಾಹುಲತೆಗಳು ಕಂದಿರುವವೆ? ಕೆಲಸಕ್ಕೆ ತಕ್ಕ ಕೂಲಿ ಬೇಕೆಂಬ ಹಟವೆ? ಸಂತಸ ಅಡಿಗೆ ಅತ್ಯುತ್ಕೃಷ್ಟವಿದೆಯಲ್ಲವೆ? ಎಂದು ಮುಂತಾಗಿ ಬೋಧಿ ಒಂದೇ ಸವನೆ ಹರಟುತ್ತಲಿದ್ದನು. ಊಟ ಮುಗಿಯುವ ವರೆಗೆ ಮೋಹನನು ಈ ತರದ ವಿನೋದದಲ್ಲೂ ಸೇರಿರಲಿಲ್ಲ. ಊಟ ಮುಗಿದ ಕೆಲಹೊತ್ತಿನ ಮೇಲೆ ಬೋಧಿ ಎದ್ದು 'ಮನೆಯ ವ್ಯವಸ್ಥೆ ಮಾಡೋದರೊಳಗ ನಮ್ಮ ಹಾಸಿಗೆ ಹಾಸಿಡೋದು ಸೇರಿದೆಯೊ ಇಲ್ಲೊ? ನೋಡೋಣ' ಎಂದನು. ಆಗ ಎಲ್ಲರಿಗೂ ಆಶ್ಚರ್ಯವಾಗುವಂತಹ ದನಿಯಲ್ಲಿ ಮೋಹನನು ಮಾತನಾಡಿದನು, 'ಈ ದಿನ ಮಧ್ಯಾಹ್ನ ಯಾರೂ ನಿದ್ದೆ ಮಾಡುವಾತಿಲ್ಲ' ಎಂದು.

ಬೋಧಿಗೆ ಆಶ್ಚರ್ಯದೊಡನೆ ಅಪಮಾನವೆನಿಸಿದಂತಾಗಿ ಕೋಪ ಬಂದಿತು.

'ಯಾರೂ ನಿದ್ದೆ ಮಾಡುವಂತಿಲ್ಲ! ಅಂದ್ರೇನು—ಮನೆಯ ಯಜಮಾನಿಕೆ ನಿನಗೆ ಬಂದಿತೊ, ಏನು ಪೋಲೀಸ ಪದವಿಗೆ ಬದಲಿ ಆಯಿತೊ?' ಎಂದು ಅಣಕಿಸ ದನಿಯಲ್ಲಿ ಕೇಳಿದನು.

ಮರುಗಳಿಗೆಯಲ್ಲಿ ಮೋಹನನು ನಕ್ಕನು. 'ಬೋಧಿ, ಮಹಾ ಕ್ರೋಧಿ! ತಡೆದರೆ ಸಿಟ್ಟಿಗೆ ಬರುವಷ್ಟು ನಿದ್ದೆ ನಿನಗೆ ಬಂದಿದ್ದರೆ ನೀನು ಹೋಗಿ ಮಲಗಿಕೊ. ನಿನ್ನ ಹಿತದ ಸಲುವಾಗಿ ಹೇಳಿದೆ.'

'ನನ್ನ ಹಿತ! ಅಂದ್ರೇನು?'

'ಭವಾನಿಯನ್ನ ಕೊಂದವರು ಯಾರು, ಎಂಬೋವನ್ನ ಮೊದಲು ಹುಡುಕೋದು.'

'ಅದು ಪೋಲೀಸರ ಜವಾಬ್ದಾರಿ.'

'ಅಲ್ಲ, ಸದ್ಯಕ್ಕ ಅವರಿಗಿಂತ ನಮ್ಮದದು ಹೆಚ್ಚಿನ ಜವಾಬ್ದಾರಿ.'

'ಭರಮಪ್ಪನ್ನ ಹಿಡಿದ ಮೇಲೆ ತಿಳಿಯಲಿಲ್ಲೇನು?'

'ಭರಮಪ್ಪ ಅದನ್ನ ಮಾಡಿದವ ಅಲ್ಲ.'

'ಹಾಗಾದರೆ ದೆವ್ವ ಮಾಡಿರಬೇಕು.'

'ಹುಚ್ಚು!' ಎಂದು ಅಸಹ್ಯದ ದನಿಯಲ್ಲಿ ಮೋಹನನು ನುಡಿದನು.

ಬೋಧಿ ಮತ್ತೆ ಕುಳಿತುಕೊಂಡನು. 'ಮೋಹನಾ, ನಿನ್ನ ಮಾತಿನ ಅರ್ಥವೇನು ?'

ಮೋಹನನು ಅರೆನಿಮಿಷ ಸ್ತಬ್ಧನಾಗಿ ಒಮ್ಮೆಲೆ ನಿರ್ಣಯಕ್ಕೆ ಬಂದಂತೆ ಹೇಳತೊಡಗಿದನು: 'ಬೋಧಿ, ಒಂದು ಮಾತನ್ನು ನೀನು ಮರೆತಿರುವೆ. ಸದ್ಯಕ್ಕೆ ಭರಮನನ್ನು ಬಂಧಿಸಿದರೂ ಅಧಿಕಾರಿಗಳು ನಮ್ಮನ್ನು ಸಂಶಯದಿಂದ ಹೊರಗಾಗಿಸಿಲ್ಲ. ಇಷ್ಟೇಕೆ? ಅವರಿಗೆ ತಿಳುಹಿಸದೆ ನಾವು ಸ್ಥಳಾಂತರಿಸಬಾರದೆಂದು ವಿಧಿಸಿ ನಮ್ಮನ್ನು ಕೂಡ ಅವರು ಒಂದು ರೀತಿಯಿಂದ ಬಂಧನದಲ್ಲಿರಿಸಿದ್ದಾರೆ. ಭರಮಪ್ಪ ಮತ್ತು ಈ ನಾಲ್ಕು ಜನ ನಾವು. ಈ ಐವರಲ್ಲಿಯೆ ಯಾರಾದರೂ ಅಪರಾಧಿಗಳಿರಲೇಬೇಕು, ಎಂದು ಪೋಲೀಸರು ತಿಳಿದಿದ್ದರೆ ಆಶ್ಚರ್ಯವಲ್ಲ. ಭರಮಪ್ಪನು ಅಪರಾಧಿ ಅಲ್ಲ, ಎಂದರೆ ನಮ್ಮಲ್ಲಿ ಒಬ್ಬರು ಅಪರಾಧಿ, ಎಂದಂತಾಗುವುದು. ೩–೪ ದಿನಗಳಾದರೂ ಭರಮನ ಅಪರಾಧ ಗೊತ್ತಾಗಿಲ್ಲ; ಅದಕಾಗಿ ನಾವು ಅಪರಾಧಿ ಇರಬೇಕಾದ ಸಂಭವ ಹೆಚ್ಚುತ್ತಲಿದೆ. ಈಗ ನಮ್ಮಲ್ಲಿ ಪ್ರತಿಯೊಬ್ಬನೂ ಭವಾನಿಯ ಮರಣಕ್ಕೆ ತತ್ವದಿಂದ ಕಾರಣನಿದ್ದಂತಿದೆ....'

ಬೋಧಿ ತಿರಸ್ಕಾರದಿಂದ—'ನಾವೆಲ್ಲಾರೂ ನಡೆದು ಹೋಗಿ ಗಲ್ಲಿಗೆ ಕುತ್ತಿಗೆ ಕೊಡೋಣ ಅಂತಿಯೇನು ?'

ಮೋಹನನು ಈ ಅಡ್ಡಮಾತಿಗೆ ಕೆಣಕಲಿಲ್ಲ. 'ಆದ್ದರಿಂದ ಗಲ್ಲಿನಿಂದ ನಂನಮ್ಮ ಕುತ್ತಿಗೆಯನ್ನು ಉಳಿಸಿಕೊಳ್ಳೋಣ' ಎಂದು ಶಬ್ದಗಳನ್ನು ಬಿಡಿ ಬಿಡಿಸಿ ಹೇಳಿದನು.

ಇದುವರೆಗೆ ಸುಮ್ಮನಿದ್ದ ಇಂದುಮತಿ ಹೇಳಿದಳು: 'ಹೀಗೇ ಕೂಡೋದ್ಕಿಂತ ಬೇಗ ಇಲ್ಲಿಂದ ಹೊರಟುಹೋಗೋಹಾಗ ಏನಾದರೂ ಮಾಡ್ಬೇಕು ಅಂತ ನನಗೂ ಅನಿಸ್ತದ.'

'ನಾವು ನಿರ್ದೋಷಿ, ಅಂತ ಸಿದ್ಧಮಾಡಿ ತೋರಿಸೋಣ' ಎಂದನು ಮೋಹನ.

'ಆದರೆ ಸುಳ್ಳುಸುಳ್ಳೆ ಪೋಲೀಸರ ಕಡೆ ಹೋಗಿ ಏನು ಹೇಳಬೇಕು ?' ಎಂದು ಬೋಧಿ ಕೇಳಿದನು.

ಮೋಹನನು ಮತ್ತೊಮ್ಮೆ ನಕ್ಕನು.

'ಬೋಧಿ, ಒಂದು ನಿಮಿಷ ಪೋಲೀಸರನ್ನು ಮರೆತುಬಿಡು, ನೋಡೋಣ. ಪೋಲೀಸರ ಕಡೆ ಹೋಗೋದು ಅಂತ ಯಾರು ಹೇಳಿದರು ? ನಾನಂತೂ ಬಾಯಿಯಿಂದ ಪೋಲೀಸರ ಹೆಸರು ತಕ್ಕೊಂಡಿಲ್ಲ. ನೀವೆಲ್ಲರೂ ಕೇಳೋ ಹಾಗಿದ್ರೆ ನಾನೊಂದು ಯುಕ್ತಿ ಹೇಳ್ತೀನಿ. ಒಂದು ರೀತಿಯಿಂದ ಹೊತ್ತು ಕಳೆದ ಹಾಗೆ ಆಗೋದು. ಇಲ್ಲ, ಅದನ್ನೊಂದು ಆಟ ಅಂತ ತಿಳಿಯ ಬಹುದು. . . .'

'ಯಾವುದು ನಿನ್ನ ಯುಕ್ತಿ ?' ಎಂದು ಬೋಧಿಯು ಆತುರದ ದನಿ ಯಲ್ಲಿ ಕೇಳಿದನು.

'ನಾವು ಒಬ್ಬೊಬ್ಬರಾಗಿ ನಿರ್ದೋಷಿ ಎಂದು ಸಿದ್ಧಮಾಡಿ ತೋರಿಸ ಬೇಕು. ನನ್ನ ಮೇಲೆ ನಿಮ್ಮ ವಿಶ್ವಾಸ ಇದ್ದರೆ ನಾನು ಒಬ್ಬೊಬ್ಬರನ್ನೆ ಕೇಳಿ ಕೊಳ್ಳುವೆ. ಅವರು ತಮಗೆ ಗೊತ್ತಿದ್ದುದೆಲ್ಲವನ್ನೂ ಹೇಳಲಿ, ತಾವು ಯಾಕೆ ನಿರ್ದೋಷಿ ಎಂಬುದನ್ನೂ ತೋರಿಸಲಿ. ಒಬ್ಬರು ಹೇಳಿದ್ದನ್ನು ನಾನು ಇನ್ನೊಬ್ಬರಿಗೆ ಹೇಳುವುದಿಲ್ಲ, ಇಷ್ಟೇಕೆ ?— ಪೋಲೀಸರಿಗೆ ಕೂಡ ತಿಳಿ ಹಿಸುವದಿಲ್ಲವೆಂದು ಬೇಕಾದರೆ ಆಣೆ ಇಟ್ಟು ಹೇಳುವೆ. ಬೇಕಾದರೆ ನೀವು ಯಾರಾದರೂ ಆ ಸ್ಥಾನವನ್ನು ವಹಿಸಿ ವಿಚಾರಣೆಯನ್ನು ನಡಿಸಬಹುದು.

ಕೆಲ ಹೊತ್ತು ಯಾರೂ ಮಾತನಾಡಲಿಲ್ಲ. ಮೋಹನನಿಗೆ ಪೂರ್ತಿ ಯಾಗಿ ಗೊತ್ತಿದ್ದಿತು. ಎಲ್ಲರೂ ತನ್ನ ಸೂಚನೆಯನ್ನು ಒಪ್ಪಲೆಂದೆ ಅವನು ಬುದ್ಧಿಪೂರ್ವಕವಾಗಿ ಈ ರೀತಿ ಹೇಳಿದ್ದನು. ಮಿಕ್ಕ ಮುವ್ವರಿಗೂ ಮೋಹ ನನ ತಂತ್ರಗಾರಿಕೆ ತಿಳಿಯಿತು. ತಮ್ಮಲ್ಲಿ ಯಾರಾದರೂ ಒಲ್ಲೆಂದರೆ, ಈ ಮಾತಿಗೆ ಬದಲು ಆಡಿದರೆ ಅವರ ಮೇಲೆ ಸಂಶಯ ತಗಲುವುದು, ಎಂದು ಅವರೂ ಅರಿತರು. ಕೊನೆಗೆ ಯಾರೂ ಬಹಳೊತ್ತು ಮಾತನಾಡದಿದ್ದರೆ ಎಲ್ಲರೂ ಒಪ್ಪಿದರೆಂದು ತಿಳಿಯುವದಾಗಿ ಮೋಹನನು ಸೂಚಿಸಲು ಎಲ್ಲರೂ ನಕ್ಕರು. 'ಸದ್ಯಕ್ಕೆ ನಾವು ದೋಷಿಗಳು—ಅದಕಾಗಿ ಮಾತನಾಡಲಿಲ್ಲ' ಎಂದು ಬೋಧಿಯು ನುಡಿದನು.

* * * *

ಮೋಹನ, ಅನಂತ ಇಬ್ಬರೇ ಉಳಿದರು ಕೋಣೆಯಲ್ಲಿ. ಮೋಹನನು ಮೌನವನ್ನು ತಾಳಿದಂತೆ ಅನಂತನ ಧೈರ್ಯ ಹೆಚ್ಚತೊಡಗಿತು. ಕುಳಿತ

ಲ್ಲಿಯೆ ಅವನಿಗೆ ಬೆವರೊಡೆಯಿತು. ಮೋಹನನು ಇನ್ನೂ ಮಾತನಾಡಲೊಲ್ಲ! ಅನಂತನು ಬೆವರನ್ನೊರೆಸಿಕೊಳ್ಳುತ್ತ ಕುರ್ಚಿಯ ತುದಿಗೆ ಕುಳಿತು ಬಾಯ್ದೆರೆದನು. ಶಬ್ದಗಳೆ ಹೊರಡಲಿಲ್ಲ. ಇದನ್ನು ನೋಡಿ ತಡೆಯದೆ ಮೋಹನನು ಗಟ್ಟಿಯಾಗಿ ನಗಲು, ಅನಂತನು ಬೆದರಿದವನಂತೆ ತಟ್ಟನೆ ಕುರ್ಚಿಯಿಂದ ಸಿಡಿದೆದ್ದನು. ಮೋಹನನು ಅವನನ್ನು ಗಟ್ಟಿಯಾಗಿ ಹಿಡಿದು ಕುಳ್ಳಿರಿಸುತ್ತ ಮಾತನಾಡತೊಡಗಿದನು:

‘ನೀನು ಹೆದರುವ ಲಕ್ಷಣ ನೋಡಿದರೆ ನೀನೇ ಅಪರಾಧಿ ಅಂತ ಹೇಳಬಹುದು ಯಾರಾದರೂ.’

ಅನಂತನು ಸುತ್ತಲು ನೋಡುತ್ತ ಮೆತ್ತನ್ನ ದನಿಯಲ್ಲಿ ‘ಏನೋ ಅನರ್ಥ ಇಂತಹದು ಆಗೋದು ಅಂತ ನನಗ ಮೊದಲೆ ಅನಿಸಿತ್ತು’ ಎಂದನು

ಮೋಹನ—‘ಅನಿಸಿತ್ತು ಅಂದರೆ ನಿನಗೆ ಏನಾದರೂ ಗೊತ್ತಿದ್ದಿತೇನು?’

‘ನನಗ-ನನಗ—’..ಅನಂತನು ತಡೆದನು. ಒಂದೆರಡು ನಿಮಿಷಗಳ ತರುವಾಯ ‘ಮೋಹನಾ, ನೀನು ನನ್ನನ್ನು ಮಾತನಾಡಿಸಬೇಡ. ನನಗ ಏನೂ ಗೊತ್ತಿಲ್ಲ’ ಎಂದು ಎದ್ದನು.

ಮೋಹನನು ತಡೆದಿದ್ದಿಲ್ಲವೆಂದರೆ ಅವನು ಕೋಣೆಯಿಂದ ಹೊರಬೀಳುತ್ತಿದ್ದನು. ಆದರೆ ಮೋಹನನು ತಡೆದನು, ಕಸುವಿನಿಂದ ಕೈಹಿಡಿದೆಳೆದು ತಡೆದನು, ‘ಮೊದಲು ಇಲ್ಲಿ ಕುಕ್ಕರಿಸು’ ಎಂದು ಕುರ್ಚಿಯಲ್ಲಿ ನೂಕಿದನು ಅವನನ್ನು. ‘ಅನಂತಾ, ನಿನಗೆ ಏನೂ ಗೊತ್ತಿದ್ದಿಲ್ಲವಾದರೆ ನನ್ನದೇನೂ ಅಡ್ಡಿ ಇಲ್ಲ. ಆದರೆ ಒಂದು ಮಾತು ಹೇಳುವೆ. ನೀನು ಏನೂ ಗೊತ್ತಿಲ್ಲ ಎಂದು ಬಾಯಿ ಮುಚ್ಚಿದರೆ ಯಾರಿಗೂ ಹಿತವಿಲ್ಲ. ನಿನಗೂ ಇಲ್ಲ. ಇಷ್ಟೆ ಅಲ್ಲ, ಇಂದುಮತಿಯ ಮೇಲೆ ನಿನ್ನ ಮನಸ್ಸಿದ್ದುದ—’

ಅನಂತನು ಮತ್ತೆ ಪುಟಿದೆದ್ದನು. ‘ಸುಳ್ಳು! ಶುದ್ಧ ಸುಳ್ಳು! ಇಷ್ಟಾಗಿ ಅದರ ಸಂಬಂಧವೆ ಮಾತಿಗಿಲ್ಲ.’

ಮೋಹನನು ಕೈ ಚೆಲ್ಲಿದನು. ‘ನಿನಗಾಗಿ ಹೇಳುವೆ. ಸುಳ್ಳಿರಲಿ ಇಲ್ಲದಿರಲಿ, ನಾಳೆ ಪೋಲೀಸರು ಆ ವಿಷಯವನ್ನೆತ್ತಿದರೆ ನಿನಗೆ ಮುಂಚೆ ಎಚ್ಚರ ಇರಲಿ ಎಂದು ಹೇಳುವೆ.’

ಅನಂತನು ತಿರಸ್ಕಾರದಿಂದ—'ಪೋಲೀಸರಿಗೆ ಈ ವಿಷಯ ತಿಳಿಯು ವುದು ಹೇಗೆ? ಅದನ್ನು ಹೇಳುವುದು ಹೇಗೆ? ಅದನ್ನು ಹೇಳುವರು ಯಾರು?'

ಮೋಹನನು ಎದ್ದನು. 'ಹಾಗಾದರೆ ನನ್ನ ಮಾತೇ ಇಲ್ಲ. ಆದರೆ ಪೋಲೀಸರಿಗೆ ಯಾರು ಹೇಳುವರು, ಎಂದು ನಿನಗೆ ಸಂಶಯ ಬೇಡ. ಯಾಕೆಂ ದರೆ ನಾನೇ ಹೇಳುವವನಿದ್ದೇನೆ.'

'ಏನು?' ಅನಂತನು ಗದ್ದರಿಸುತ್ತ ಮೋಹನನನ್ನೆ ಎದುರಿಸಿದನು.

'ನಾನೆ ಹೇಳುವವನಿದ್ದೇನೆ ಎಂದೆ. ನನಗೆ ಹೇಳಲೇಬೇಕಾಗು ವುದು!

'ಈ ಸಂದರ್ಭದಲ್ಲಿ ಇಂದುಮತಿಯ ಹೆಸರನ್ನು ಎತ್ತಿದರೆ..'

'. ಹೆಸರನ್ನು ಎತ್ತಿದರೆ ಇಂದುಮತಿಯನ್ನು ಉಳಿಸಿದಂತಾಗುವುದು. ಅಲ್ಲೊ, ಮೂರ್ಖಾ'—ಮೋಹನನಿಗೆ ಈಗ ಸಿಟ್ಟು ತಡೆಯದಂತಾಯಿತ್ತು— 'ಮೂರ್ಖಾ, ಎಲ್ಲ ಸುದ್ದಿಯನ್ನು ಕಂಡುಹಿಡಿಯೋದು ಪೋಲೀಸರ ಕೆಲಸ. ಒಂದು ವೇಳೆ ನಾವು ಯಾರೂ ಹೇಳದೆ ಈ ವಿಷಯ ಅವರಿಗೆ ತಿಳಿದರೆ ನಮ್ಮೆ ಲ್ಲರ ಬಗ್ಗೆ—ವಿಶೇಷ ನಿನ್ನ ಮತ್ತು ಇಂದುಮತಿಯ ಬಗ್ಗೆ—ಸಂಶಯ ಹೆಚ್ಚಬಹುದಲ್ಲ? ಇದಲ್ಲದೆ—ಈ ಮನೆಯಲ್ಲಿ—ನಾವಿರುವಾಗ—ನಾವಿಷ್ಟೆ ಜನರು ಇರುವಾಗ ನಮ್ಮ ಮಿತ್ರನ ಕೊಲೆಯಾಗಿದೆ. ಯಾರು ಕೊಂದವರು? ನಮ್ಮಲ್ಲಿ ಒಬ್ಬ ಘಾತುಕ ಇದ್ದಾನೆ ಎನಬಹುದಲ್ಲ? ಅದನ್ನು ಬಯಲಿಗೆಳೆಯ ದಿದ್ದರೆ—ನಮಗೆ ಗೊತ್ತಿದೆ ಅಥವಾ ಗೊತ್ತಾದೀತು ಅನ್ನೊ ಹೆದರಿಕೆಯಿಂದ ಆತ ಮತ್ತೊಂದು ಕೊಲೆ ಮಾಡಲಿಕ್ಕಿಲ್ಲ, ಅಂತ ಯಾರು ಹೇಳಬಲ್ಲರು? ಕುಳಿ ತುಕೊ. ದುರಭಿಮಾನ ಸಾಕು, ಹೇಡಿತನ ಸಾಕು. ನಿನ್ನ ಸಂಬಂಧ ಇದ ರಲ್ಲಿ ಏನೂ ಇಲ್ಲ, ಅಂತ ನನಗೆ ಗೊತ್ತಿಲ್ಲ? ಆದರೆ ನಿನಗೆ ಗೊತ್ತಿದ್ದದ್ದನ್ನಷ್ಟು ಹೇಳಿದರೆ ಇನ್ನೊಬ್ಬರದು ಯಾರದು ಸಂಬಂಧ ಇದೆ, ಎಂಬುದು ತಿಳಿದು ಕೊಳ್ಳಲು ಸುಲಭ ಆಗೋದು. ನಾಚಿಕೆ ಬಿಟ್ಟುಬಿಡು, ಹೆದರಿಕೆ ಬಿಟ್ಟು ಬಿಡು—ನೀನು ಈ ಮನೆಗೆ ಬರುವಾಗಿನಿಂದ ಇಲ್ಲಿಯ ವರೆಗೆ ಕಂಡದ್ದನ್ನು ಮಾಡಿದ್ದನ್ನು ಬಾಯಿ ಬಿಚ್ಚಿ ಹೇಳು....ಇಲ್ಲದಿದ್ದರೆ ನಿನ್ನ ಮ್ಯಾಲೆ ಇಲ್ಲದ ಸಂಶಯ..'

ಅನಂತನು ನಡುವೆ ಬಾಯಿಹಾಕಿದನು. 'ನಾನು ನಿರಪರಾಧಿ ಎನ್ನೋ ಭರವಸೆ ಇದ್ದರೆ ಸಂಶಯ ಯಾಕೆ?'

'ಯಾಕೆಂದರೆ ಭರವಸೆ ಪುರಾವೆ ಅನಿಸೋದಿಲ್ಲ..ಹಂ. ಹೊತ್ತು ಗಳೆಯಬೇಡ..ಹೇಳೋದಿದ್ದರೆ ಹೇಳು, ಇಲ್ಲಾ ಅಂದರೆ ಇನ್ನೊಬ್ಬರನ್ನ ಕರೆಯಿಸತೇನಿ....ನಾ ಏನ ಮಾಡಬಲ್ಲೆ, ಅಂಬೋದನ್ನ ನನ್ನ ಮಟ್ಟಿಗೆ ಹೇಳೀನಿ.'

ಅನಂತನು ಮನಸ್ಸಿಲ್ಲದವನಂತೆ ಕುರ್ಚಿಯಲ್ಲಿ ಕುಳಿತುಕೊಂಡನು. ಹಣೆಯ ಬೆವರೊರೆಸುವ ಅವನ ಕೈ ನಡುಗುತ್ತಿತ್ತು. ಒಂದೆರಡು ಸಲ ನಾಲಿಗೆಯಿಂದ ಕೆಳದುಟಿಯನ್ನು ಸವರಿದನು. ಕೊನೆಗೆ ಉಸುರ್ಗರೆದು ಕೆಳಗೆ ಮುಖ ಮಾಡಿಕೊಂಡು, 'ಭವಾನಿಯ ಕೊಲೆಯಾದ ರಾತ್ರಿ ನಾನು ಅವನ ಕೋಣೆಯಲ್ಲಿದ್ದೆ' ಎಂದವನೆ ಮೋಹನನನ್ನು ದಿಟ್ಟಿಸಿದನು.

ಮೋಹನನಿಗೆ ಆ ಮಾತಿನಿಂದ ಆಶ್ಚರ್ಯವಾದಂತಾಗಲಿಲ್ಲ. ಅವನು ಗೊತ್ತಿದ್ದವನಂತೆ ತಲೆ ತೂಗುತ್ತ 'ಅದೆಲ್ಲ ನನಗೆ ಗೊತ್ತು' ಎಂದನು.

ಅನಂತನು ಮತ್ತೆ ಕುರ್ಚಿಯಿಂದ ಸಿಡಿದೆದ್ದು 'ಇಲ್ಲ, ಇಲ್ಲ, ನಿನಗೆ ಗೊತ್ತಿಲ್ಲ, ನೀನು ತಪ್ಪು ತಿಳಿದುಕೊಂಡಿರುವಿ, ನನ್ನ ಸಂಬಂಧ–' ಎಂದು ಚೀರುವಾಗ ಮೋಹನನು ಗಟ್ಟಿಯಾಗಿ ಅವನ ಬಾಯಿಗೆ ಕೈ ಬಿಗಿದು ಕುರ್ಚಿಯಲ್ಲಿ ಅವನನ್ನು ಕುಕ್ಕರಿಸಿ— 'ಗೊತ್ತಿದೆ ಅಂದ್ರೆ ನಾನು ಹೇಳುವುದನ್ನಾದರೂ ಕೇಳಿಕೊ. ಇಲ್ಲದ್ದನ್ನು ಚೀರಿ ಹೊರಗಿನವರಿಗೆ ಕೇಳಿಸಿ, ನಾನೇ ನಿನ್ನ ಕೊಲೆ ಮಾಡತೀನೇನೊ ಅಂತ ಅನಿಸೀತು ಅವರಿಗೆ! ನನಗ ಗೊತ್ತು ಅಂದರೆ ಅದನ್ನ ನಾ ತಿಳಿದುಕೊಂಡೆ ಎಂದರ್ಥ? ಹ್ಯಾಗಂತೀಯಾ? ಆ ದಿನ ಬೆಳಿಗ್ಗೆ ಭವಾನಿ ತನ್ನ ಕೋಣೆಯಿಂದ ಬರಲಿಲ್ಲ. ನಾವೆಲ್ಲರೂ ಇಲ್ಲಿ ಯೋಚಿಸತಾ ಇದ್ದಿವಿ—ನೆನಪಿದೆಯೆ? ಆಗ ನಾನು ಭವಾನಿ ಕೋಣೆಗೆ ಹೋಗಿ ನೋಡಿ ಬರತೀನಿ, ಎಂದರೆ ನೀನು ಹೆದರಿ ಚಟ್ಟನೆ ಚೀರಿದಿ ನೆನಪಿದೆಯೆ? ನೀನು ಚೀರಿದ ಹೆದರಿಕೆಯ ಲಕ್ಷಣ ಬೇರೆ ಇದ್ದಿತು, ಅಂತ ನನಗೆ ಸಂಶಯ ಬಂದಿತು. ಬಹಳ ಮಾಡಿ ಆ ಕೋಣೆಯೊಳಗೆ ನಡೆದ ಯಾವುದೊ ಒಂದು ಸಂಗತಿ ನಿನಗೆ ಗೊತ್ತಿದೆ, ಅಥವಾ ನೀನು ಅಲ್ಲಿ ಇದ್ದಿ ಅಂತ ತರ್ಕ ಹೂಡಿದೆ.'

'ನಿಜ. ಆದರೆ ನಾನು ಕೋರ್ಟಿಗೆ ಹೋಗಿ ಹೊರಗೆ ಬರೋವರೆಗೂ ಭವಾನಿ ಜೀವದಿಂದಿದ್ದ, ಅಂತ ಬೇಕಾದ್ರ ಆಣೆ ಇಟ್ಕೊಂಡು. . '

ಮೋಹನನು ತಲೆ ಅಲ್ಲಾಡಿಸಿದನು. 'ಆಣೆ ಬೇಡ, ಪ್ರಮಾಣ ಬೇಕು ' ಎಂದನು.

ಮೋಹನನ ಬುದ್ಧಿಮತ್ತೆಯ ಸುಳಿವು ಹತ್ತಿ ಅನಂತನು ಮತ್ತಿಷ್ಟು ದಿಗ್ಭ್ರಾಂತನಾದನು. ಅವನ ಬಾಯಿಯಿಂದ ಮಾತುಗಳೆ ಹೊರಡದಂತಾದುವು. ಕೊನೆಗೆ ಕೈಗಳಿಂದ ಗಟ್ಟಿಯಾಗಿ ಮುಖ ಮುಚ್ಚಿಕೊಂಡನು.

ಮೋಹನನು ಮೆಲ್ಲಗೆ ಅವನ ಭುಜ ತಟ್ಟಿ, ಸಮಾಧಾನದ ದನಿಯಲ್ಲಿ 'ಅನಂತಾ, ಇಷ್ಟೇಕೆ ಗೊಂದಲದಲ್ಲಿ ಬೀಳುವೆ? ಅಥವಾ—ನಾನು ಕೇಳಿದಂತೆ ಮೊದಲಿನಿಂದಲೆ ನಡೆದುದೆಲ್ಲ ಹೇಳು—ನಾನು ನಡುವೆ ಮಾತಾಡದೆ ಕೇಳಿಕೊಳ್ಳುವೆ' ಎಂದನು.

ಅಂತೂ ಕೊನೆಗೊಮ್ಮೆ ಅನಂತನಿಗೆ ಮೋಹನನಲ್ಲಿ ವಿಶ್ವಾಸ ಹುಟ್ಟಿದಂತಾಯಿತು. ಒಂದೆರಡು ನಿಮಿಷ ಏನನ್ನೊ ನೆನೆದುಕೊಳ್ಳುವಂತೆ ಕಣ್ಣನ್ನು ಮುಚ್ಚಿ ಆ ಮೇಲೆ ಶಾಂತ ದನಿಯಲ್ಲಿ ಮೋಹನನನ್ನು ದಿಟ್ಟಿಸುತ್ತಲೆ ತನ್ನ ಕತೆಯನ್ನು ಹೇಳಿದನು. ಆ ಕತೆಯನ್ನು ಏಕರೂಪವಾಗಿ, ಸುಸಂಬದ್ಧವಾಗಿ ಕೂಡಿಸಿಕೊಂಡು ಹೀಗೆ ಹೇಳಬಹುದು

ಇಂದುಮತಿಯ ಹೆಸರನ್ನು ಬಿಟ್ಟು ಅನಂತನು ಕತೆಯನ್ನು ಹೇಳುವುದೆ ಶಕ್ಯವಿರಲಿಲ್ಲ. ಯಾಕೆಂದರೆ ಇವರಿಬ್ಬರೂ ಚಿಕ್ಕಂದಿನಿಂದಲೆ ಗೆಳೆತನದಲ್ಲಿ ಬೆಳೆದವರು. ವಯಸ್ಸಾದಂತೆ ಅನೇಕ ಘಟನೆಗಳೂ ಇವರ ಗೆಳೆತನವನ್ನು ಹೆಚ್ಚು ನಿಕಟವಾಗಿಯೆ ಮಾಡಿದುವು. ಇಂದುಮತಿ ರೂಪವತಿ, ಬುದ್ಧಿವಂತೆ, ಆದರೆ ದುರ್ದೈವಿ. ಅವಳ ಜನ್ಮದಿಂದ ಅವಳ ಮನೆತನಕ್ಕೆ ಕ್ರಮೇಣ ಬಡತನ ಹೆಚ್ಚಾಯಿತು. ಹತ್ತು ವರುಷದಾಕೆಯಾಗುವಷ್ಟರಲ್ಲಿ ಆಕೆಯ ತಾಯಿತಂದೆಗಳೂ ತೀರಿಕೊಂಡರು. ಈ ಪರಿಸ್ಥಿತಿಯಲ್ಲಿ ಬೆಳೆಯುವ ಅನಂತನಿಗೆ ಗೆಳೆತನದೊಡನೆ ಒಂದು ಹಿರಿತನವೂ ಬಂದಂತಾಯಿತು. ಆದರೆ ಇಂದುಮತಿ? ಪಾಪ! ಆಕೆಯೂ ಅನಂತನನ್ನೆ ಮನಸಾ ಪ್ರೀತಿಸುತ್ತಿದ್ದಳು, ಕೇವಲ ಕೃತಜ್ಞತೆಯಿಂದಲ್ಲ. ಹೀಗಿರುವಾಗ ಉಚ್ಚ ಶಿಕ್ಷಣದ ವಯೋಮಾನದಲ್ಲಿ ಅನಂತನ ಗೆಳೆಯನಾದ ಭವಾನಿಯ ಪರಿಚಯವೂ ಆಕೆಗಾಯಿತು. ಭವಾನಿಗೆ

ವಿದ್ಯೆಗಾಗಿ ಪ್ರೇಮವಿರಲಿಲ್ಲ, ಇಂದುಮತಿಗೆ ವಿದ್ಯಾರ್ಜನೆಯ ಹುಚ್ಚು. ಅದ
ಕ್ಕಾಗಿ ಮೊದಲು ಅನಂತನಿಗೆ ಅವರ ಪರಿಚಯಕ್ಕಾಗಿ ಯಾವವಿಚಾರವೂ ಬಂದಿರ
ಲಿಲ್ಲ; ಸಂಶಯವೂ ಇಲ್ಲ, ಹೆದರಿಕೆಯೂ ಇಲ್ಲ. ಆದರೆ ಇಂದುಮತಿ ತನ್ನ ಒಡ
ತನಕ್ಕಾಗಿ ಬೇಸತ್ತಿರಬೇಕು, ರೂಪದಲ್ಲಿ ತನಗೆ ಸರಿದಕ್ಕದ ಹುಡುಗೆಯರು
ಬರಿಯ ಸಿರಿವಂತಿಕೆಯ ವೇಷಭೂಷಣ-ಆಡಂಬರಗಳಿಂದ ಮೆರೆಯುವುದನ್ನು
ಕಂಡು ಆಕೆಗೆ ಸಮಾಜ ಜುಗುಪ್ಸೆಯಾಗಿರಬೇಕು. ಅಂತೂ ಭವಾನಿಯ
ಉಡುಗೊರೆಗಳಿಗೆ, ಆಡಂಬರಕ್ಕೆ, ಸಿರಿವಂತಿಕೆಯ ಸೊಕ್ಕಿನಿಂದ ಬಂದ ಉದ್ಧತ
ವೃತ್ತಿಗೆ ಆಕೆ ಮನಸೋತಳು. ಆಗ ಅನಂತನಿಗೆ ಕಣ್ದೆರೆದಂತಾಯಿತು. ಇಂದು
ಮತಿ ತನ್ನ ಕೈ ಬಿಡುವಳೆಂಬ ಖೇದ ಅವನಿಗಿಲ್ಲ, ಆದರೆ ತನ್ನ ಗೆಳತಿ ಭವಾನಿ
ಯಂತಹ ಹೊಣೆಯಿಲ್ಲದ ತರುಣನ ಒಲೆಗೆ ಸಿಕ್ಕಿ ದಾರಿಗೇಡಾಗಬಹುದಲ್ಲ,
ಎಂದು.

ಈ ಮನಃಸ್ಥಿತಿಯಲ್ಲಿ ಅನಂತನು ಭವಾನಿಯನ್ನು ದ್ವೇಷಿಸತೊಡಗಿ
ದನು. ಇಂದುಮತಿಗೆ ಭವಾನಿಯ ಮೋಹ ಒಡೆದಂತಾಗಲು ಅನಂತನು
ತಾನಾಗಿಯೆ ಭವಾನಿಯ ಕಡೆ ಹೋಗಿ ಇಂದುಮತಿಯನ್ನು ಮದುವೆ
ಯಾಗುವಂತೆ ಅವನನ್ನು ಒತ್ತಾಯಪಡಿಸತೊಡಗಿದನು. ಮದುವೆಗಾಗಿ
ಭವಾನಿಗೆ ಆತುರವೆ ಇದ್ದಿಲ್ಲವೆಂಬುದನ್ನು ಕಂಡು ಅನಂತನ ಹೆದರಿಕೆ ಹೆಚ್ಚಾ
ಯಿತು..ಅಹುದು. ಇದೇ ಸಂದರ್ಭದಲ್ಲಿ ಅವನು ಇಂದುಮತಿಗೆ ಕಾಗದ
ಗಳನ್ನು ಬರೆದದ್ದು. 'ಅವನಾಡುವ ಮಾತು, ಆ ರೀತಿ ಇವನ್ನು ನೋಡಿದರೆ
ನನಗಂತೂ ಅವನನ್ನು ಕೊಲ್ಲಬೇಕೆನಿಸುವುದು' ಎಂಬ ಅಭಿಪ್ರಾಯವನ್ನು
ಆ ಕಾಗದಗಳಲ್ಲಿ ಅನೇಕ ಸಲ ವ್ಯಕ್ತಮಾಡಿದ್ದನು..ಆ ಕಾಗದಗಳಿವೆಯೆ?..
ಅನಂತನಿಗೆ ಆಗ ಅವುಗಳ ಬಗ್ಗೆ ಇಂತಹ ವಿಚಾರವಿರಲಿಲ್ಲ.

ಅನಂತ-ಭವಾನಿಯರ ಚರ್ಚೆಗಳು ದಿನದಿನಕ್ಕೆ ಆವೇಶಭರಿತವಾಗ
ತೊಡಗಿದುವು. ಅನಂತನಿಗೆ ಪೂರ್ತಿಯಾಗಿ ನೆನಪಿನಲ್ಲಿದೆ. ಒಂದು ದಿನ ಸಂಜೆ,
ಈ ಮನೆಯನ್ನು ಕೊಂಡುಕೊಳ್ಳುವ ಮುಂಚೆ, ಅನಂತನೂ ಭವಾನಿಯೂ
ಈ ಮನೆಯ ಬಯಲಿನಲ್ಲಿಯೆ ವಾದಿಸುತ್ತಿದ್ದರು. ರಾತ್ರಿಯಾಯಿತು.
ಭರಮಪ್ಪನು (ಅಂದು ಅವನ ಪರಿಚಯವಿದ್ದಿರಲಿಲ್ಲ) ಅಲ್ಲಿ ಮಲಗಿದ್ದನ್ನು
ಕಂಡು ಇಬ್ಬರೂ ಮೆಲುದನಿಯಲ್ಲಿ ಮಾತನಾಡುತ್ತಿದ್ದರು. ಅಂದೇ ಅನಂತನು

ಭವಾನಿಯನ್ನು ಕೊಲ್ಲಬಹುದಾಗಿತ್ತು. ಆದರೆ ಭವಾನಿ ಓಡಿದನು; ಕತ್ತಲಲ್ಲಿ ಹಿಂದೆ ಓಡುವ ಅನಂತನಿಗೆ ಅವನ ಸುಳಿವು ತಪ್ಪಿತು.

ಅನಂತನು ಪುಕ್ಕ. ನಿಜ. ಚಿಕ್ಕಂದಿನಿಂದಲೂ ಪುಕ್ಕತನದಲ್ಲಿಯೆ ಬೆಳೆದವನು. ಒಂದು ದಿನ ಪುಕ್ಕತನಕ್ಕಾಗಿ ಇಂದುಮತಿ ತನ್ನನ್ನು ಹಂಗಿಸಿದಳು. ಭವಾನಿ ತನ್ನನ್ನು ತಪ್ಪಿಸಿ ಓಡುವಷ್ಟು ಕೈಲಾಗನವನಲ್ಲ ಎಂದೂ ಹೆದರಿದ ಅನಂತನೆ ಓಡಿರಬಹುದೆಂದೂ ನಗೆಮಾಡಿದಳು. ಪುಕ್ಕತನವೊಂದು ಅನಂತನಿಗೆ ಮೀರಿದ ಮಾತಾಗಿತ್ತು. ಅವನ ಹೆದರಿಕೆ ಎರಡೇ ಎರಡು ಸಂಗತಿಗಳಿಗಾಗಿ; ಒಂದು, ಭೂತ—, ಇನ್ನೊಂದು, ಪ್ರೇತ. ದೆವ್ವಿನ ಕತೆಯನ್ನೂ ಹೆಣದ ಮುಖವನ್ನೂ ಅವನು ಎಂದೂ ನೋಡುತ್ತಿರಲಿಲ್ಲ. ಆದರೆ ಇಂದುಮತಿ ಹಂಗಿಸುವುದನ್ನು ಕಂಡು, ತನ್ನ ಹೆದರಿಕೆಯನ್ನು ಕಳೆದುಕೊಳ್ಳಲು ಅವನು ಬುದ್ಧಿಪೂರ್ವಕವಾದ ಪ್ರಯತ್ನಗಳನ್ನು ನಡೆಯಿಸಿದನು. ಹೆಚ್ಚಾಗಿ ದೆವ್ವಿನ ಕತೆಗಳನ್ನೂ ಕೊಲೆಯ ಕತೆಗಳನ್ನೂ ಓದತೊಡಗಿದನು. ಕೊನೆಗೆ ಅದೇ ವಿಚಾರದಿಂದಲೆ ಅವನು ಮಿಕ್ಕವರೊಡನೆ 'ದೆವ್ವಿನ ಮನೆ' ಎಂದು ಹೆಸರುಗೆಟ್ಟ ಈ ಮನೆಗೂ ಬರಲು ಸಿದ್ಧನಾದನು.

ಈ ಮನೆಯಲ್ಲಿ ಕೊಲೆಯಾಗಲಿ ಘಾತವಾಗಲಿ ಆಗುವುದೆಂದು ಅವನಿಗೆ ಮೊದಲಿನಿಂದಲೆ ಎನಿಸಿತ್ತು. ಆದರೆ ಅವನು ತಿಳಿದ ಮಟ್ಟಿಗೆ ಭವಾನಿಯು ಈ ಮನೆಯ ಹೆಸರನ್ನು ಮುಂದೆ ಮಾಡಿ ಇಂದುಮತಿಯ ಕೊಲೆಯನ್ನು ಮಾಡುವನೆಂಬ ಹೆದರಿಕೆ ಅವನಿಗಿದ್ದಿತು. ಯಾಕೆ? ಯಾಕೆ?. . . .ಯಾಕೆಂದರೇನು? ಇಂದುಮತಿಯನ್ನು ಕೂಡಲೆ ಮದುವೆಯಾಗಬೇಕು, ಇಲ್ಲವೆ ಅವಳ ಕೊಲೆ ಮಾಡಿ ಸಮಾಜದಲ್ಲಿ ಬರಬಹುದಾದ ಅಪಕೀರ್ತಿಯನ್ನು ತಪ್ಪಿಸಬೇಕು; ಇದರ ಹೊರತು ಗತ್ಯಂತರವಿಲ್ಲದಂತಹ ಪರಿಸ್ಥಿತಿ ಪ್ರಾಪ್ತವಾಗಿತ್ತು ಅವರ ಪ್ರೇಮದ ಫಲವಾಗಿ! ಅದಕಾಗಿ ಇಂದುಮತಿಯ ರಕ್ಷಣೆಯ ನಿಶ್ಚಯದಿಂದ ಅನಂತನು ಈ ಮನೆಗೆ ಬರುವ ಧೈರ್ಯ ಮಾಡಿದ್ದನು.

ಮನೆಗೆ ಬಂದ ಮೇಲೆ ಕಂಡ ಒಂದೆರಡು ಅನುಭವಗಳಿಂದ ಮಾತ್ರ ಅನಂತನ ಅಧೈರ್ಯ ಹೆಚ್ಚಾಯಿತು. ಯಾಕೆಂದರೆ ದೆವ್ವಿಗಾಗಿ ಅನಂತನಲ್ಲಿದ್ದ ಪುಕ್ಕತನ ತಲೆಯೆತ್ತುವ ಸಂಗತಿಗಳು ನಡೆದುವು. ಮೊದಮೊದಲು ಮನೆಯನ್ನೂ ಇಂದುಮತಿಯನ್ನೂ ಬಿಟ್ಟು ಹೋಗಬಾರದೆಂದು ಅನಂತನು

ಪುಕ್ಕನಂತೆ ನಟಿಸಿದನು. ಆದರೆ ಒಂದು ದಿನ ಕರಗನದಂತೆ ಎಲ್ಲಿಂದಲೊ ಸದ್ದಾಗುವುದಕ್ಕೆ ಅನಂತನ ಪುಕ್ಕತನ ಚಿಗುರಿತು. ಆ ಮೇಲೆ ಆ ಹಾಳು ಅನುಭವ! ಬೋಧಿಯ ಕೋಣೆಯಲ್ಲಿ ನೋಡಿದಾಗ ಕಂಡ ಆ ಅಸ್ಪಷ್ಟವಾದ, ವಿಕಾರವಾದ ಮುಖ! ನಿಜವಾಗಿಯೂ ಅನಂತನು ಅಂತಹ ದೃಶ್ಯವನ್ನು ಕಂಡದ್ದು.

ಇಷ್ಟಾದರೂ ಇಂದುಮತಿಯನ್ನು ರಕ್ಷಿಸುವುದಕ್ಕಾಗಿ ಪುಕ್ಕನು ಪುಂಡನಾದನು. ಆ ಮೇಲೆ ಒಂದು ರಾತ್ರಿ ಮೋಹನ-ಬೋಧಿ-ಭವಾನಿಯರು ಸುತ್ತಾಡಿ ಕಾವಲು ಮಾಡಿದ್ದಾಯಿತು. ಆದರೆ ಮುಂದೆ ಈ ಕಾವಲಿನ ಅವಶ್ಯವಿಲ್ಲ, ಯಾರೂ ಹೊರಗೆ ಸುತ್ತಾಡಬೇಕಾಗಿಲ್ಲ, ಎಂದು ಭವಾನಿಯೆ ಸೂಚಿಸಲು ಅನಂತನಿಗೆ ಹೆದರಿಕೆಯಾಯಿತು. ಭವಾನಿ ಹೀಗೆ ಯಾಕೆ ಸೂಚಿಸುತ್ತಿರಬಹುದು? ಯಾರೂ ಹೊರಗೆ ಸುತ್ತಾಡಬಾರದೆಂಬಲ್ಲಿ ಅವನದೇನಾದರೂ ದುಷ್ಟ ಉದ್ದೇಶವಿದ್ದಿರಬಹುದೆ? ಹೀಗೆ ಯೋಚಿಸುತ್ತ ಅನಂತನಿಗೆ ನಿದ್ರೆ ಬರಲಿಲ್ಲ. ಆದರೆ ಆ ರಾತ್ರಿ ಭವಾನಿಯ ಸೂಚನೆಯನ್ನು ಯಾರೂ ಲಕ್ಷಿಸಿರಲಿಕ್ಕಿಲ್ಲ, ಎಂಬ ಧೈರ್ಯವೂ ಅವನಿಗಿದ್ದಿತು. ಇಷ್ಟರಲ್ಲಿ ಇಂದುಮತಿಯ ಕೋಣೆಯಲ್ಲಿ ಸದ್ದಾದಂತಾಯಿತು. ಒಂದೇಟಿಗೆ ಅವನು ಓಡಿದನು. ಅದೇ ಭವಾನಿಯು ಬಂದು ತನ್ನನ್ನು ಹಂಗಿಸಿ ಹಿಂಸಿಸಿ ಹೋದನೆಂದು ಇಂದುಮತಿ ಹೇಳುವಾಗ ಅವನು ಸಿಟ್ಟು ತಡೆಯದೆ ಕುಣಿಯಲು ಆ ಸದ್ದಿಗೆ ಹೊರಗೆ ಮಲಗಿದ ಭರಮನು ಎಚ್ಚೆತ್ತನು. ಕೂಡಲೆ ಇಂದುಮತಿಯೂ ಅನಂತನೂ ಒಂದು ಹಂಚಿಕೆಯನ್ನು ಹೂಡಿದರು. ಅನಂತನು ಅವಳ ಕೋಣೆಯಲ್ಲಿಯೆ ಅಡಗಿದನು. ಅವಳು ಏನೂ ಅರಿಯದಂತೆ ನಟಿಸಿದಳು. ಇಷ್ಟರಲ್ಲಿ ಅನಂತನ ಕೋಣೆಯ ಬಾಗಿಲು ತೆರೆದುದೂ ಅವನು ಅಲ್ಲಿ ಇಲ್ಲದುದೂ ಮಿಕ್ಕವರ ಲಕ್ಷ್ಯಕ್ಕೆ ಬಂದಿತು. ಇಂದುಮತಿಯ ಕೋಣೆಯೊಂದನ್ನು ಬಿಟ್ಟು ಎಲ್ಲ ಕಡೆ ಶೋಧಿಸಿದರು. ಕೊನೆಗೆ ಅವರು ಮನೆಯ ಮುಂಬದಿಯಲ್ಲಿ ನೇರಿದಾಗ ಅನಂತನು ಮೆಲ್ಲನೆ ಜಾರಿ ಹಿಂಬಾಗಿಲಿಗೆ ಹೋಗಿ ಅದನ್ನು ಒಡೆದು ಸದ್ದು ಮಾಡಿ ಎಚ್ಚರದಪ್ಪಿದಂತೆ ಬಿದ್ದುಕೊಂಡನಂತೆ!

ಅಥವಾ—ಅದೇನೊ ಅನಂತನಿಗೆ ಈಗ ಪೂರ್ತಿಯಾಗಿ ಸ್ಮರಣೆಯಲ್ಲಿರಲಿಲ್ಲ. ಇಂದುಮತಿ ಚೀರಿದಳಲ್ಲವೆ ಆ ರಾತ್ರಿ? ಹಾಂ—ನಿಜ. ತಾನು ಹೇಳುವ

ಸಂಗತಿಗಳ ಕ್ರಮ ತಪ್ಪಾಗಿದೆಯೆ? ಇರಬಹುದು. ಅಲ್ಲಲ್ಲ—ಸ್ಮರಣೆಗೆ ಒಂದಿತು. ಇಂದುಮತಿ ಚೀರಿದಳು. ಯಾಕೆ ಚೀರಿದಳೆಂಬುದು ಅವನಿಗೆ ಇನ್ನೂ ತಿಳಿದಿರಲಿಲ್ಲ. ತಾನು ಇಂದುಮತಿಯ ಕೋಣೆಯನ್ನು ಹೊಕ್ಕುದು ಯಾಕೆ? ಓಹೊ—ಅನಂತನಿಗೆ ಎಲ್ಲವೂ ಸ್ಮರಣೆಗೆ ಒಂದಿತು. ಭವಾನಿಯು ಜೀವದಿಂದಿದ್ದ ಕೊನೆಯ ರಾತ್ರಿಯದು. ಸುತ್ರಾಂಡಿ ಕಾವಲು ಬೇಡ, ಎಂಬ ಭವಾನಿಯ ಮಾತಿಗಾಗಿ ತನ್ನ ಸಂಶಯ ಹೆಚ್ಚಿತಲ್ಲವೆ? ಆದಕಾಗಿ ಅನಂತನು ರಾತ್ರಿಯಲ್ಲಿ ಸದ್ದಿಲ್ಲದೆ ಭವಾನಿಯ ಕೋಣೆಗೆ ಏರಿಹೋದನು. ಭವಾನಿಯು ಸಿಟ್ಟಿನ ಆವೇಶದಲ್ಲಿದ್ದಂತಿದ್ದನು. ಅನಂತನು ಮದುವೆಯ ಪ್ರಸ್ತಾಪವನ್ನೆತ್ತಿದನು. ಭವಾನಿಯು ತಿರಸ್ಕಾರ ತೋರಿದನು. ಅನಂತನಿಗೆ ಕೋಪ ಒಂದಿತು. ಭವಾನಿಗೂ ಕೋಪ. ಇಷ್ಟರಲ್ಲಿ ಭವಾನಿಯು ಕೆಲವು ಕಾಗದಗಳನ್ನು ತೋರಿಸಿದನು. ಅವೆಲ್ಲ ತನ್ನ ಹಸ್ತಾಕ್ಷರ ಎಂದು ತೋರಿದರೂ ತಾನು ಬರೆದುದಲ್ಲ, ಎಂದು ಅನಂತನು ನಿರ್ಧಾರವಾಗಿ ಹೇಳಿದನು. 'ಇಂದುಮತಿ ತನ್ನನ್ನು ಪ್ರೀತಿಸುತ್ತಾಳೆ. ಅವಳನ್ನು ವಂಚಿಸಿದರೆ ನಿನ್ನನ್ನು ಕೊಲ್ಲುವೆ' ಎಂಬ ಅಭಿಪ್ರಾಯದ ಒಂದು ಕಾಗದವಿದ್ದಿತು. ಸರಿಯಾದ ಶಬ್ದಗಳು ಈಗ ಅನಂತನಿಗೆ ಗೊತ್ತಿರಲಿಲ್ಲ. ಆದರೆ ಇಂದುಮತಿಯ ಪ್ರೇಮ ತನ್ನಲ್ಲಿ, ಎಂಬ ಮಾತನ್ನೆ ಅನಂತನು ಇತ್ತೀಚೆಗೆ ಬಿಟ್ಟುಕೊಟ್ಟದ್ದರಿಂದ ಆ ಕಾಗದವನ್ನು ಅನಂತನು ಬರೆಯುವುದು ಶಕ್ಯವಿರಲಿಲ್ಲ. ಆದರೆ ಹಸ್ತಾಕ್ಷರ ಅನಂತನದೆ, ಎಂಬ ಹಟದಿಂದ ಭವಾನಿಯು ಅನಂತನನ್ನು ನಂಬಲಿಲ್ಲ. ಅಂತೂ ಒಬ್ಬರೊಬ್ಬರನ್ನು ಚುಚ್ಚಿ ಮಾತನಾಡತೊಡಗಿದರು. ಅನಂತನು ಆ ಕಾಗದಗಳನ್ನು ನೋಡಬಯಸಿದನು. ಭವಾನಿಯು ಗಟ್ಟಿಯಾಗಿ ಅವನ್ನು ಹಿಡಿದುಕೊಂಡನು. ಕೂಡಲೆ ಕೈ-ಕೈಗೆ ಪ್ರಾರಂಭವಾಯಿತು. ಕಾಗದವನ್ನು ಕಸಿದುಕೊಳ್ಳುವುದು, ಕಾಗದವನ್ನು ಜಪ್ಪಿಸಿಕೊಳ್ಳುವುದು ಈ ಸಂದರ್ಭದಿಂದ ಇಬ್ಬರೂ ಕುಸ್ತಿಗೆ ತೊಡಗಿದರು. ಆಗ ಅನಂತನು ಕಚ್ಚಿದನು, ಚಿವುರಿಕೊಂಡನು—ಕಸುವಿಲ್ಲದವನು ಮಾಡಬೇಕಾದ ಎಲ್ಲ ಯುಕ್ತಿಗಳನ್ನೂ ಮಾಡಿದನು. ಆದರೆ ಭವಾನಿಯು ಕಾಗದಗಳ ಹಿಡಿತವನ್ನು ಸಡಿಲಿಸಲಿಲ್ಲ. ಈ ಗಲಾಟೆಯಲ್ಲಿ ಹರಿದು ಚೂರಾಗುತ್ತಲಿದ್ದ ಕಾಗದಗಳು ಕೋಣೆ ತುಂಬ ಹರಹಿದುವು. ಕೊನೆಗೆ ಬಾಗಿಲ ವರೆಗೆ ಹೊಯ್ದಾಡುತ್ತ ಬಂದಾಗ ಭವಾನಿಯು ಒಮ್ಮೆಲೆ

ಅನಂತನನ್ನು ಹೊರನೂಕಿ ಬಾಗಿಲನ್ನು ಮುಚ್ಚಿಕೊಂಡನು. ಅನಂತನಾದರೂ ಓಡಿಪವನೆ ಕೆಳಗಿಳಿದು ಇಂದುಮತಿಯ ಕೋಣೆಯನ್ನು ಹೊಕ್ಕನು.

ಆ ಮೇಲೆ ಅನಂತನು ಭವಾನಿಯನ್ನು ಜೀವದಿಂದ ನೋಡಲಿಲ್ಲ.

*　　　*　　　*　　　*　　　*

ಹೇಳಿಕೆಯನ್ನು ಮುಗಿಸಿದಾಗ ಅನಂತನ ಮುಖವು ಬೆವರಿನಲ್ಲಿ ತೇಲುತ್ತಿದ್ದರೂ ಈಗ ಆ ಮುಖದಲ್ಲಿ ಹೆದರಿಕೆಯದಾಗಲಿ ದಣಿವಿನದಾಗಲಿ ಕಳೆ ಇದ್ದಿರಲಿಲ್ಲ ಮುಖವನ್ನೊರೆಸಿಕೊಂಡನು. ಕೆಲಹೊತ್ತು ಇಬ್ಬರೂ ಮಾತನಾಡಲಿಲ್ಲ. ಅನಂತನಿಗೆ ತನ್ನ ಎದೆಯ ಸೆಳೆತಗಳು ಸ್ಪಷ್ಟವಾಗಿ ಕೇಳುತ್ತಿದ್ದುವು. ಮೋಹನನು ಹಾಗೆಯೆ ಸುಮ್ಮನಿದ್ದುದನ್ನು ಕಂಡು ಅನಂತನು ಹಟಗ ದನಿಯಲ್ಲಿ, 'ನನ್ನಾಣೆ. ನನ್ನ ಆತ್ಮದ ಸಾಕ್ಷಿಯಾಗಿ ಹೇಳುವೆ. ಮುಂದೆ ಒಂದೂ ನನಗೆ ಗೊತ್ತಿಲ್ಲ' ಎಂದನು.

ಮೋಹನನು ಮಾತನಾಡಿದನು. 'ಅನಂತಾ, ಏನೂ ಗೊತ್ತಿಲ್ಲ ಎಂದಿದ್ದೆಯಲ್ಲ! ಈಗ ನಿನ್ನ ಹೇಳಿಕೆಯಿಂದ ನಿಜವಾದ ಅಪರಾಧಿಯನ್ನು ಗೊತ್ತು ಪಡಿಸಲು ಎಷ್ಟು ಸುಲಭವಾಗುವುದೆಂದು ತಿಳಿದಿರುವೆ? ಆಗಲಿ—ಒಂದು ಮಾತನ್ನು ಕೇಳುವೆ. ಗೊತ್ತಿದ್ದರೆ, ಗೊತ್ತಿದ್ದಷ್ಟು ಮಾತ್ರ ನೀನು ಹೇಳಬಹುದು. ನೀನು ಭವಾನಿಯ ಕೋಣೆಯಿಂದ ಹೊರಬಿದ್ದೆ, ಎಂದೆಯಲ್ಲ? ಆಗ ಭವಾನಿ ಜೀವದಿಂದಿದ್ದನೆಂಬುದು ಹೇಗೆ?'

'ಹೇಗೆ? ನಾನು ಹೊರಬೀಳಲಿಲ್ಲ. . ನನ್ನನ್ನು ಅವನೇ ನೂಕಿದನು, ಎಂದು ಹೇಳಿದೆನಲ್ಲ. . ಇದಲ್ಲದೆ ನಾನು ಹೊರಗೆ ಮುಗ್ಗರಿಸಿದ್ದೊಂದೆ ತಡ— ಅವನು ಒಳಗಿನಿಂದ ಬಾಗಿಲನ್ನು ಮುಚ್ಚಿಕೊಂಡನು.'

'ಅವನೆ ಮುಚ್ಚಿಕೊಂಡನೆ?' ಮೋಹನನು ಆತುರದ ದನಿಯಲ್ಲಿ ಕೇಳಿದನು. ಅನಂತನು ತಲೆತೂಗಿದನು. ಅವನಿಗೀಗ ಉಸಿರು ಸಾಲದಂತಾಗಿತ್ತೊ ಏನೊ! ಎದ್ದನು. ಮೋಹನನು ಅವನನ್ನು ತಡೆಯಲಿಲ್ಲ. 'ಇಂದುಮತಿಗೆ ಬರಹೇಳುವೆಯಾ?' ಎಂದನು. ಅನಂತನು ಆವೇಶದಿಂದ ತಿರುಗಿ ನಿಂತನು ಆ ಮಾತನ್ನು ಕೇಳಿ.

'ಮೋಹನಾ, ಇಂದುಮತಿಗೆ ಏನು ಕೇಳುವೆ?'

'ಅನಂತಾ, ಹೆದರಬೇಡ. ನೀನು ಹೇಳಿದ್ದನ್ನು ಅವಳಿಗೆ ತಿಳುಹಿಸದೆ,

ನೀನು ಹೇಳಿದ್ದನ್ನು ಅವಳಿಂದ ಮತ್ತೆ ತಿಳಿದುಕೊಳ್ಳಲು ಯತ್ನಿಸದೆ ಅವಳನ್ನು ಮಾತನಾಡಿಸುವೆ. ಆಯಿತಲ್ಲವೆ?'

ಅನಂತನು ಕೋಣೆಯಿಂದ ಹೊರಬಿದ್ದನು.

ಮೋಹನನು ತನ್ನಷ್ಟಕ್ಕೆ 'ಬಾಗಿಲನ್ನು ಭವಾನಿ ತಾನಾಗಿಯೆ ಮುಚ್ಚಿಕೊಂಡರೆ—ಆ ಮೇಲೆ ಯಾರಾದರೂ ಒಳಹೊಕ್ಕರೆ? ಮುಂದಿನ ಘಟನೆ ನಡೆದುದಾದರೂ—' ಹೊರಗೆ ಇಂದುಮತಿ ಬರುವ ಸದ್ದನ್ನು ಕೇಳಿ ತಡೆದನು. ಮುಗುಳ್ನಗೆಯು ಮುಖದಿಂದ ಇದಿರು ನೋಡುತ್ತ ಕುಳಿತನು.

—

## ೬ ಇಂದುಮತಿಯ ಇತಿಹಾಸ

ಇಂದುಮತಿಗೆ ಎಷ್ಟು ಗೊತ್ತಿರಬಹುದು? ನಡೆದ ಘಟನೆಯಲ್ಲಿ ಆಕೆಯ ಸಂಬಂಧ ಎಷ್ಟರ ಮಟ್ಟಿಗಿರಬಹುದು? ತಾವು ಯಾವ ಪ್ರಶ್ನೆಗಳನ್ನು ಆಕೆಗೆ ಕೇಳಬಹುದು? ಈ ವಿಚಾರಗಳು ಮೋಹನನಿಗೆ ಸ್ಪಷ್ಟವಾಗಿರಲಿಲ್ಲ. ಆದರೂ ಇಂದುಮತಿ ಬಂದು ಕುಳಿತೊಡನೆ ಮೋಹನನು ಹಸನ್ಮುಖಿ ನಾಗಿಯೆ 'ಅನಂತ ಏನು ಹೇಳಿದ?' ಎಂದು ಕೇಳಿದನು. ಇಂದುಮತಿಯ ಮುಖದಲ್ಲಿ ಒಂದು ತರದ ಬೇಜಾರದ ಕಳೆ ಇದ್ದಿತು. ಆ ಕಳೆಯಿಂದಲೆ ಆಕೆ 'ಹೊತ್ತಲ್ಲದ ಹೊತ್ತಿನೊಳಗ ಈ ನಾಟಕ ಯಾಕೆ ಹೂಡಬೇಕಾಗಿತ್ತೊ!' ಎಂದನು.

'ಯಾವ ನಾಟಕ?'

'ಒಬ್ಬೊಬ್ಬರನ್ನು ಕರಿಸಿ ಮಾತಾಡಿಸೋದು.'

'ಇನ್ನೊಬ್ಬರೆದುರು ಹೇಳದಂತಹ ಮಾತು ಇದ್ದರೆ—'

ಇಂದುಮತಿ ರೇಗಿದಳು. 'ಅನಂತ ನಿನಗ ಏನೇನು ಹೇಳಿದ?'

'ಏನೇನೊ ಬಡಬಡಿಸುತ್ತಿದ್ದ. ನನಗೂ ತೂಕಡಿಕೆ. ಇದ್ದ ಮಾತು ಹೇಳೋದಂದರೆ ನನಗ ಒಂದೂ ನೆನಪಿಲ್ಲ.'

ಹೂಂ—ಎಂದು ವ್ಯಂಗ್ಯವಾಗಿ ಇಂದುಮತಿ ದನಿಯುನ್ನೆಳೆದಳು. 'ಹೇಳಿದ್ದು ನೆನಪಿನೊಳಗ ಉಳಿಯದಿದ್ದರೆ ಸುಮ್ಮ ಸುಮ್ಮನೆ ಮಾತನಾಡಿಸಿ ನಮಗ ಯಾಕೆ ತೊಂದರೆ ಕೊಡುವೆ?' ಎಂದು ಕೇಳಿದಳು.

'ಈಗ ಮಾತನಾಡೋದು ಯಾರಿಗೂ ತೊಂದರೆ ಅಲ್ಲ. ಇಂದುಮತಿ, ಈಗ ನಾವು ಮಾತನಾಡದಿದ್ದರೇನೆ ತೊಂದರೆ. ಯಾರ್ಯಾರು ಮಾತನಾಡ ಲಿಕ್ಕೆ ಒಲ್ಲೆ ಅಂತಾರೆ ಅವರಿಗೆ ಹೆಚ್ಚು ತೊಂದರೆ.'

'ಇದು ನೋಡೆ! ನನಗೇನು ಹೆದರಿಕೆ ಹಾಕಬೇಕಂತೀಯಾ? ನಾಯೇನು ಮಾತಾಡೋದಿಲ್ಲ ಅಂದೆನೆ?'

' ಇಂದುಮತಿ, ನಿನ್ನ ಸಲುವಾಗಿ ನನಗೆ ಸಂಪೂರ್ಣ ಭರವಸೆ. ಆದ ಕಾಗಿಯೆ—ಅಪರಾಧಿಯನ್ನು ಹುಡುಕೋದರಲ್ಲಿ ನಿನ್ನ ಸಹಾಯ ಬೇಕು ಅಂತಾ ಕೇಳತಾ ಇದ್ದೀನಿ. ಇಲ್ಲಿ ನೋಡು, ಇಂದುಮತಿ, ಭವಾನಿಯ ಸಾವು—ಅಂತ–ಸಹಜವಾದುದು ಅಲ್ಲ, ಅಂತ ಸ್ಪಷ್ಟ ಇದೆ. ಹಾಗಿದ್ದರ ಅದಕ್ಕ ಯಾರು ಕಾರಣವಾಗಿರಬಹುದು ? ಹೊರಗಿನವರು ಯಾರೂ ಇದ್ದಿಲ್ಲ ಅಂದರೆ–ನಮ್ಮೊಳಗೆ ಒಬ್ಬರು ಇದ್ದಿರಬೇಕು. ಆದರೆ ನಾವು ಯಾರಾದರೂ ಅಂತಹ ಕೆಲಸ ಮಾಡಲಿಕ್ಕೆ ನಿಮಿತ್ತ ಏನು ? ಭವಾನಿ ಯಾರ್‍ಯಾರ ಕೂಡ ಹ್ಯಾಗೆ ನಡೆದುಕೊಂಡಿದ್ದ ಅಂಬೋದು ತಿಳಿದರೆ–'

' ಆ ಮಾತಿನದು ಏನೂ ಸಂಬಂಧ ಇಲ್ಲ ಅನಿಸತದೆ ' ಎಂದು ಇಂದು ಮತಿ ನಡುವೆಯೆ ಮಾತನಾಡಿ ಮೋಹನನನ್ನೆ ತಡೆದಳು.

' ಸಂಬಂಧ ಇಲ್ಲ ! ' ಎಂದು ಮೋಹನನು ಆಶ್ಚರ್ಯದಿಂದ ಕೇಳಿದನು. ' ಇಂದುಮತಿ, ನನ್ನ ದೃಷ್ಟಿಯಿಂದ ಆ ಮಾತಿನ ಮಹತ್ತ್ವ ದೊಡ್ಡದಿದೆ. ಭವಾನಿಯಿಂದ ಯಾರಿಗಾದರೂ ಕೆಡಕಾಗಿದ್ದರೆ—'

' ನನಗಂತೂ ಆಗಿಲ್ಲ ' ಎಂದು ಇಂದುಮತಿ ನಿರ್ಧಾರದಿಂದ ನುಡಿ ದಳು.

ಮೋಹನನು ನೊಂದುಕೊಂಡಂತೆ ನಟಿಸಿದನು.

' ಇದೇನು, ಇಂದುಮತಿ, ನಿನ್ನ ವಿಷಯ ಮಾತನಾಡಿದೆನೆ ನಾ ! ಈ ಪ್ರಸಂಗದೊಳಗೆ ನೀನು ಯಾವಾಗಲೂ ಸಂಶಯದ ಹೊರಗೆ. ಆದರೆ ಭವಾನಿಯ ಸ್ವಭಾವ, ಸುಖ–ದುಃಖ ನಿನಗ ಹೆಚ್ಚಾಗಿ ಗೊತ್ತು. ಅದಕೆ ಯಾರಾದರೂ ಭವಾನಿಯನ್ನು ದ್ವೇಷಿಸುವಷ್ಟು ಭವಾನಿಯು ನಿರ್ದಾಕ್ಷಿಣ್ಯ ವಾಗಿ ನಡೆದುಕೊಂಡದ್ದು ನಿನಗೆ ನೆನಪಿದ್ದರೆ— '

' ಮೋಹನಾ, ನೀ ಹೀಂಗ ಮಾತಾಡಿದರೆ ನನಗ ಯಾವುದೂ ನೆನಪಿಲ್ಲ. ನಿನಗ ಏನ ಕೇಳಬೇಕಾಗಿದೆ ಸ್ಪಷ್ಟ ಕೇಳು. ನಾನು ಅಪರಾಧಿ ಅಂತ— '

' ಛೆ ! ಆ ಸಂಶಯ ಕನಸುಮನಸಿನಲ್ಲೂ ಇಲ್ಲ ! '

' ಹಾಗಾದರ ನನ್ನ ಕೇಳಿ ಪ್ರಯೋಜನ ಏನು ? '

' ನನ್ನ ಸಂಶಯ ಇರದಿದ್ದರೂ ಪೋಲೀಸರ ಸಂಶಯ ಇರಬಹುದಲ್ಲ ? ಹಾಂಗ ನೋಡಿದರ ನಮ್ಮೆಲ್ಲರ ಮೇಲೆ ಸಂಶಯ ಇದೆ, ಎನಬಹುದು. ಆದರ

ಪೋಲೀಸರಿಂದ ಯಾವದನ್ನೂ ಬಚ್ಚಿಡಬಾರದು ಅನ್ನೋ ಉದ್ದೇಶದಿಂದ ಎಲ್ಲ ಸಂಗತೀನ್ನ ಕೂಡಿಹಾಕತಾ ಇದ್ದೀನಿ ನಾನು. ಇದಲ್ಲದೆ ಕೆಲವು ವೇಳೆ ತೋರಿಕೆಯಿಂದ ತಪ್ಪುಕಲ್ಪನೆ ಆಗೋ ಸಂಭವ ಹೆಚ್ಚು. ಈಗ ನೋಡು. ಅನಂತನ ಹಸ್ತಾಕ್ಷರದ ಕೆಲವು ಕಾಗದ; ಅದರಲ್ಲಿ ಭವಾನಿಗೆ ಕೊಟ್ಟ ಹೆದರಿಕೆ. ಇಷ್ಟಕ್ಕೆ ಪೋಲೀಸರು ಪೂರ್ತಿಯಾಗಿ ಅನಂತನ ಮೇಲೆ ಸಂಶಯ ಇಡಬಹುದಲ್ಲ ?'

ಇಂದುಮತಿಯ ಮುಖ ತಟ್ಟನೆ ಕಳೆಗುಂದಿತು. ಅವಳ ಉಸಿರು ತಡೆಯುದಂತಾಯಿತು. ಕುಳಿತಲ್ಲಿಯೆ ಎರಡೂ ಕೈಗಳನ್ನು ಒಂದಕ್ಕೊಂದರ ಆಧಾರ ಬೇಕೆನುವಂತೆ—ಗಟ್ಟಿಯಾಗಿ ತಿಕ್ಕಿದಳು.

'ಅನಂತ ?' ಆಕಬಾರದ್ದು ತಪ್ಪಿ ಹೊರಬಿದ್ದಂತೆ ಆ ಶಬ್ದವನ್ನು ಉಸಿರಿದಳು. 'ಮೋಹನಾ, ಅನಂತನ ಮೇಲೆ ನಿನ್ನ ಸಂಶಯ ಇದೆಯೆ ?' ಎಂದು ಮೆಲುದನಿಯಲ್ಲಿ ಕೇಳಿದಳು.

'ಇಲ್ಲ—ನಿನ್ನದಿದೆಯೆ ?' ಎಂದು ಮೋಹನನು ಮರುಸವಾಲು ಮಾಡಿದನು.

'ಇ–ದೆ.'

ಮೋಹನನು ಆ ಕ್ಷಣದ ಅನುಭವವನ್ನು ಎಷ್ಟೊ ವರ್ಷಗಳ ವರೆಗೆ ಮರೆತಿರಲಿಲ್ಲ. ಒಂದು ನಿಮಿಷ ಇಂದುಮತಿ ಕುರ್ಚಿಯಿಂದ ಮೇಲೇರುತ್ತ ಮಾಳಿಗೆಯಲ್ಲಿ ಮಾಯವಾದಂತಾಯಿತು; ತಾನು ಕುಳಿತ ಕುರ್ಚಿ ಕೆಳ ಮೇಲಾದಂತಾಯಿತು; ಕೋಣೆಗೆ ಗೋಡೆಗಳೆ ಇಲ್ಲವೆಂದೆನಿಸಿತು; ಗಟ್ಟಿಯಾಗಿ ಕಣ್ಣುಮುಚ್ಚಿದನು. ಇಂದುಮತಿಯ 'ಇದೆ' ಎಂಬ ಒಂದು ಶಬ್ದದಿಂದ ಮೋಹನನಿಗೆ ಬರಿಯ ಮೂರ್ಛೆ ತಾಳಿದಂತಲ್ಲ, ಕ್ಷಣಾರ್ಧದಲ್ಲಿ ಎಲ್ಲ ನರಕಗಳನ್ನು ಸುತ್ತಾಡಿ, ಯಾತನೆಗಳನ್ನು ಭೋಗಿಸಿ ದಿಕ್ಕುತಪ್ಪಿದಂತಾಯಿತು, ದಣಿವಿನಿಂದ ದೇಹದ ಎಚ್ಚರ ಕಳೆದಂತಾಯಿತು. ಅನಂತನು ಭವಾನಿಯ ಕೊಲೆಮಾಡಿರಬಹುದೆಂದು ಇಂದುಮತಿಗೆ ಸಂಶಯ! ಛೆ! ತಾನೆಂತಹ ಹುಚ್ಚ!

'ಇಂದುಮತಿ, ನನ್ನನ್ನು ಕೆಣಕಲು, ನಗೆಯಾಡಲು ಹೀಗೆ ಹೇಳುವೆ' ಎಂದನು ಮೋಹನ.

ಇಂದುಮತಿ ಹೆದರಿದವಳಂತೆ ಸುತ್ತುಮುತ್ತಲು ನೋಡಿದಳು. ಹತ್ತಿರ ಸರಿದು ಮೆಲ್ಲಗೆ ಹೇಳಿದಳು. 'ನನ್ನ ಸಂಶಯು ಸುಳ್ಳಿದ್ದರೆ ನನಗೆ ಸಂತೋಷ ಏದೆ. ಆದರೆ....'

'ನಿನ್ನ ಸಂಶಯು ಸುಳ್ಳು ಎಂದು ನಾ ಭರವಸೆ ಕೊಡುವೆ. ನೀ ವಿಶ್ವಾಸದಿಂದ ನನಗೆಲ್ಲವನ್ನೂ ಹೇಳಿದರೆ ಅದನ್ನು ಸಿದ್ಧ ಕೂಡ ಮಾಡಬಲ್ಲೆ.'

'ಮೋಹನಾ, ಗೊತ್ತಿದ್ದೆಲ್ಲ ಹೇಳುವೆ. ನನ್ನ ಸಂಶಯು ಸುಳ್ಳಾಗಲಿ' ಎಂದು ಕಣ್ಣೀರು ತುಂಬಿ ಇಂದುಮತಿ ತಡೆದಳು.

ಕ್ರಮೇಣ ಮೋಹನನು ಅವಳನ್ನು ಸಂತಯಿಸಿ, ಆಕೆಯು ಮುಖದಿಂದ ಬೇರೆ ಕೆಲವು ಸಂಗತಿಗಳನ್ನು ತಿಳಿದುಕೊಂಡನು. ಮೋಹನನೆ ಅವಳ ಹೇಳಿಕೆ ಯುನ್ನು ಹೀಗೆ ಬರೆದಿಟ್ಟುಕೊಂಡಿದ್ದಾನೆ.

'ನಾನು (ಇಂದುಮತಿ) ಈ ವಿಷಯುವಾಗಿ ಏನೂ ಮಾತಾಡಬಾರದು ಎಂದಿದ್ದೆ. ಒಂದು ವೇಳೆ ಈಗಲಾದರೂ ಪೋಲೀಸರು ಕೇಳಿದರೆ ಇಲ್ಲಿ ಹೇಳು ವುದನ್ನು ಅವರೆದುರು ಒಪ್ಪುವೆನೆ ಇಲ್ಲನೆ ಸಂಶಯುವೆ ಇದೆ. ಹಾಗೆ ಕೇಳಿದರೆ ಅಂದು ಬೆಳಿಗ್ಗೆ ಈ ಮನೆಯುಲ್ಲಿ ನಡೆದ ಅನಾಹುತದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಇಷ್ಟೆ ಅಲ್ಲ—ಹೀಗೆ ಆದೀತೆಂದು ನನಗೆ ಅನಿಸಿರಲಿಲ್ಲ. ಯಾಕೆದರೆ ಮುಂಚಿನ ರಾತ್ರಿ ಭವಾನಿ ನನ್ನ ಕೋಣೆಗೆ ಬಂದಿದ್ದನು. ಗೆಳೆಯುರಲ್ಲಿ ಮುಚ್ಚಿ ಡುವುದೇನಿದೆ? ಭವಾನಿಯು ವಿಷಯುವಾಗಿ ನಾನು ಎಂದಿನಿಂದಲೊ ಹುಚ್ಚ ಳಾಗಿದ್ದೆ. ಮಾನ-ಮುರ್ಯಾದೆ-ನೀತಿ-ಭೀತಿಗಳೆಲ್ಲ ಭವಾನಿಗಾಗಿ ಬಿಟ್ಟು ಕೊಟ್ಟಿದ್ದೆ, ಎಂದ ಮೇಲೆ ಹೆಚ್ಚಿಗೆ ಹೇಳಬೇಕೆ?

'ಆದರೆ ನನ್ನ ಪ್ರೇಮಕ್ಕೆ ತಕ್ಕ ಪ್ರೇಮ ಅವನಲ್ಲಿರಲಿಲ್ಲ, ಎಂಬುದು ನನಗೆ ತುಸು ದಿನಗಳಲ್ಲಿಯೆ ಕಂಡು ಒಂದಿತು. ಇಷ್ಟೇಕೆ—ಭವಾನಿಯು ಹೃದಯುದಲ್ಲಿ ಪ್ರೇಮದ ಸುಳಿವೇ ಇದ್ದಿಲ್ಲವೆಂದೆ ತಿಳಿದುಬಂದಿತು. ತನ್ನ ಹೊರತು ಇನ್ನೊಂದನ್ನು ಎಂದಿಗೂ ಪ್ರೀತಿಸದ ಸ್ವಭಾವ ಅವನದಾಗಿದ್ದಿತು. ನಾನು ತನಗಾಗಿ ಇಷ್ಟು ಹುಚ್ಚಳಾಗಿದ್ದೇನೆಂದು ಅವನು ತನ್ನನ್ನೆ ಹೆಚ್ಚು ಅಭಿಮಾನದಿಂದ ಪ್ರೀತಿಸುತ್ತಿದ್ದ ಅಂತೂ ಅವನ ಅಹಂಕಾರಾಗ್ನಿಗೆ ನಾನು ಉರುವಲಿನಂತಿದ್ದೆನೆಂದರೆ ತಪ್ಪಾಗದು. ಈ ಸ್ಥಿತಿಯುಲ್ಲಿ ದಿನದಿನಕ್ಕೆ ನನಗೂ ಅವನಿಗಾಗಿ ದ್ವೇಷ ಬೆಳೆದರೆ ಸಹಜವೆ ಅಲ್ಲವೆ? ತಾನು ಇನ್ನೊಬ್ಬನಿಗೆ ಬೇಕಾ

ದುದು ತನಗಾಗಿ ಅಲ್ಲ, ಆ ಇನ್ನೊಬ್ಬನ ಆತ್ಮದುರಭಿಮಾನದ ತೃಪ್ತಿಗಾಗಿ ಎಂಬ ವಿಚಾರವು ಯಾವ ಹೆಂಗಸನ್ನಾದರೂ ದ್ವೇಷಕ್ಕೆ ನೂಕಬಹುದು. ನನ್ನ ಸ್ಥಿತಿಯಲ್ಲಿ ಇನ್ನೊಬ್ಬಾಕೆ ಇದ್ದರೆ ಏನು ಮಾಡಬಹುದಾಗಿತ್ತೋ! ಆದರೆ ನನಗೆ ಒಂದು ಅಸಹ್ಯ ಅನುಭವವಾಗುತ್ತಿದ್ದಿತು. ಭವಾನಿ ಇದಿರಿನಲ್ಲಿ ಇದ್ದರೆ ಎಲ್ಲ ದ್ವೇಷ ಕರಗಿ ನಾನು ಹುಚ್ಚಳಾಗುತ್ತಿದ್ದೆ. ನನ್ನೆದುರಿನಲ್ಲಿ ಅವನಿದ್ದಾಗ ಅವನ ಜಂಬದ ರೀತಿಯಿಂದ ನನಗೆ ಆನಂದವೆ ಆಗುತ್ತಿತ್ತು. ಅವನು ಕಣ್ಮರೆಯಾದಾಕ್ಷಣ ಮಾತ್ರ ದ್ವೇಷ ಇಮ್ಮಡಿಯಾಗುತ್ತಿತ್ತು.

‘ಅವನು ನನ್ನನ್ನು ಎಂದಿಗೂ ಮದುವೆಯಾಗುತ್ತಿರಲಿಲ್ಲ. ಈ ಸಂಗತಿ ನನಗೆ ಮೊದಲು ಹೊಳೆದಾಗ ಆತ್ಮಹತ್ಯೆಯ ವಿಚಾರ ನನ್ನಲ್ಲಿ ಸುಳಿಯಿತು. ಆದಕಾಗಿ ಅವನು ನನ್ನ ಅಪಹಾಸ ಮಾಡಿದಾಗ ಅತ್ಯಂತ ಮನಸ್ಸಂತಾಪವಾಗಿ ಮೊದಲು ಅವನ ಕೊನೆ, ಆ ಮೇಲೆ ನನ್ನ ಅಂತ ಮಾಡಬೇಕೆಂಬ ನಿರ್ಧಾರವೂ ಮನಸಮಾಡಿತು. ನನ್ನ ದುಃಖ ಹಗುರಾಗಲೆಂದು ಮನದ ವಿಚಾರಗಳನ್ನೆಲ್ಲ ಬರೆದಿಡತೊಡಗಿದೆ. ಒಂದು ದಿನ ಆ ಕಾಗದಗಳು ಅವನ ಕಣ್ಣಿಗೆ ಬಿದ್ದುವು. ಏನು ಮಾಡಿದರೂ ನನಗೆ ಕೊಡಲೊಲ್ಲ. ‘ಓಹೋ! ನನ್ನನ್ನು ಕೊಂದರೂ ನಿನಗೆ ಸಮಾಧಾನವಿಲ್ಲ, ಎಂದು ಬರೆದಿರುವೆಯಲ್ಲವೆ? ಒಳಿತೇ ಆಯಿತು! ಇಂದಿಲ್ಲ ನಾಳೆ ನಾನು ಸತ್ತರೆ ಈ ಕಾಗದಗಳು ನಿನಗೆ ಸಹಗಮನವನ್ನು ಮಾಡಿಸಲು ಅನುಕೂಲವಾಗುವುವು! ಎಂತಹ ಗಾಢ ಪ್ರೇಮ!’ ಎಂದು ಕ್ರೂರವಾಗಿ ನನ್ನನ್ನು ಹಂಗಿಸತೊಡಗಿದನು.

‘ಅಂದು ಬೆಳಿಗ್ಗೆ ಅನಾಹುತವಾದಾಕ್ಷಣ ನನಗೆ ಅವನ ಆ ಮಾತು ನೆನಪಿಗೆ ಒಂದು ಹೆದರಿಕೆಯಾಯಿತು. ನನ್ನ ಕಾಗದಗಳು ಇನ್ನೊಬ್ಬರ ಕೈಗೆ ಬಿದ್ದರೆ ಅವರು ತಪ್ಪು ಅರ್ಥವನ್ನು ಮಾಡಿಕೊಳ್ಳಬಹುದಲ್ಲ—ಎಂದು ಹೆದರಿದೆ. ನಾನು ಅಂತಹ ಸಾಹಸವನ್ನು ಮಾಡಿರಲಿಕ್ಕಿಲ್ಲ, ಎಂದು ಅವರು ನಂಬುವುದು ಹೇಗೆ? ಈಗ ನಿನಗಾದರೂ ನನ್ನ ಬಗ್ಗೆ ಸಂಶಯ ಬರುವುದಾದರೆ ನನಗೆ ಆಶ್ಚರ್ಯವಿಲ್ಲ. ಆದರೂ ನಾನು ಅಂತಹ ಕಠೋರ ಸಾಹಸವನ್ನು ಮಾಡಿಲ್ಲ, ಎಂಬುದನ್ನು ನನ್ನ— ನನ್ನ ರಕ್ತದಲ್ಲಿ ಸಮರಸವಾಗಿ ಹರಿದಾಡುತ್ತಿರುವ ಅವನ ಮಗುವಿನ ಸಾಕ್ಷಿಯಾಗಿ ಹೇಳುವೆ. ಅಹುದು—ಈಗ ನಾನು ಆ

ಸ್ಥಿತಿಯಲ್ಲಿರುವೆ. ಭವಾನಿಯ ರಹಸ್ಯವನ್ನು ನನ್ನಲ್ಲಿ ಸಾಗಿಸಿಕೊಂಡಿರುವೆ. ಇದೇ ನನಗೆ ಸಾಕಷ್ಟು ಶಿಕ್ಷೆಯಾಗಿದೆ.

'ಆದರೇನು? ನಾನು ಮಾಡಿಲ್ಲ, ಎಂಬುದಕ್ಕೆ ನನ್ನ ತೊಡಕು ಬಿಡುವಂತಿಲ್ಲ. ಅಂತಹ ಕ್ರೂರ ಕೆಲಸವನ್ನು ಮಾಡಲು ನನ್ನ ಹೊರತು ಮತ್ತಾರಿಗೆ ಸಾಕಷ್ಟು ಕಾರಣಗಳಿವೆ? ಇಷ್ಟರಲ್ಲಿ ಪೋಲೀಸರು ಭರಮಪ್ಪನನ್ನು ಬಂಧಿಸಿದರು. ತಟ್ಟನೆ ನನ್ನ ಹೃದಯದ ಭಾರ ಹಗುರಾದಂತಾಯಿತು. ಆದರೆ ಭರಮನು ಮಾಡಿರಬಹುದೆ? ಅವನಿಗೆ ಅಂತಹ ಕಾರಣವೇನಿದ್ದಿತು? ಒಂದು ದೃಷ್ಟಿಯಿಂದ ಅವನಿಗೆ ಹೆಚ್ಚು ಅನುಕೂಲವಿದ್ದಿತು. ನಾವೆಲ್ಲರೂ ನಂನಮ್ಮ ಕೋಣೆಯಲ್ಲಿಯೆ ಇರುವಾಗ, ನೀನು ಮತ್ತು ಬೋಧಿಯು ನಿಮ್ಮ ಕೋಣೆಗಳ ಹೊರಗೆ ಕಾವಲಿನಲ್ಲಿ ತೊಡಗಿದಾಗ, ಭರಮನಿಗೆ ಮಾತ್ರ ಮೇಲುಪ್ಪರಿಗೆಯ ಪಾವಟಿಗೆಗಳು ಸಮೀಪವಿದ್ದು ಸದ್ದಿಲ್ಲದೆ ಹೋಗಲು ಅನುಕೂಲವೂ ಆಗಿದ್ದಿತು. ಹೆಚ್ಚು ವಿಚಾರ ಮಾಡಿದಂತೆ ಭರಮನೆ ದೋಷಿಯಾಗಿದ್ದಾನೆಂಬ ಕಲ್ಪನೆ ಮೂರ್ತಗೊಂಡಿತು.

'ನನ್ನ ಮಾತಿನಿಂದ ನಿಮಗೆ ಆಶ್ಚರ್ಯವಾಗಬಹುದು. ಆದರೆ ಭರಮನ ವಿಷಯದಲ್ಲಿ ನನಗಾದ ಮೊದಲ ಅನುಭವವನ್ನು ಹೇಳಿದರೆ ಆಶ್ಚರ್ಯವಾಗಲಿಕ್ಕಿಲ್ಲ. ನಾನೂ ಅವನೂ (ಎಂದರೆ ಭವಾನಿ) ಈ ಮನೆಯನ್ನು ಮೊದಲು ನೋಡಬಂದಾಗ ಭರಮನು ದಿನಾಲು ರಾತ್ರಿ ಹೊರಕಟ್ಟೆಯಲ್ಲಿ ಮಲಗುತ್ತಿದ್ದನೆಂಬುದು ತಿಳಿದು ಬಂತು. ಅವನು ಯಾರು? ಎಲ್ಲಿಂದಲೊ ಮನೆಮಾರನ್ನು ಬಿಟ್ಟು ಬಂದವ. ಬಡತನದ ಹೊಡೆತಕ್ಕೆ ಸಿಕ್ಕು ಧನಿಕರನ್ನು ದ್ವೇಷಿಸುವವ. ದಿನಾಲು ಹಗಲೆಲ್ಲ ಹೊಟ್ಟೆಯ ಉದ್ಯೋಗಕ್ಕಾಗಿ ಊರೊಳಗೆ ಅಲೆದಾಡಿ ರಾತ್ರಿ ಇಲ್ಲಿ ಬಂದು ಮಲಗುವವ. ಇದು ಇನ್ನೊಬ್ಬರ ಮನೆ, ಎಂಬುದರ ಪರಿವೆ ಅವನಿಗಿಲ್ಲ. ಯಾರಾದರೂ ಅವನು ಇಲ್ಲಿ ಮಲಗಕೂಡದೆಂದಿದ್ದರೆ ಭರಮನು ಏನು ಮಾಡುತ್ತಿದ್ದನೊ ಹೇಳಲಾಸಲ್ಲ. ಆದರೂ ಮನೆಗೆ ಹಕ್ಕುದಾರರಿಲ್ಲದ ವರೆಗೆ ಅವನಿಗೆ ಯಾವ ತೊಂದರೆಯೂ ಇರಲಿಲ್ಲ. ಹೀಗಿರುವಾಗ ಭವಾನಿ ಈ ಮನೆಯನ್ನು ಕೊಂಡುಕೊಂಡುದು. ಆಗ ಸಹಜವಾಗಿಯೆ ಭರಮನ ಮನಸ್ಸಿನಲ್ಲಿ ಹತಾಶೆಯಿಂದ ಕಿಡಿಗೊಂಡ ದ್ವೇಷ ಹುಟ್ಟಿರಲು ಸಾಕು. ಇಂದಿಲ್ಲ ನಾಳೆ ಈ ಮನೆಯಿಂದ ಹೊರದೂಡಿದರೆ ಮತ್ತೆ ತಾನು

ಗತಿಗೇಡು! ಯಾಕೆ? ಭವಾನಿಯಂತಹ ಸಿರಿವಂತನು ಮನೆಯನ್ನು ಕೊಂಡ ನೆಂದು. ಹೋದಲ್ಲೆಲ್ಲ ದುಡ್ಡಿದ್ದವರಿಗಾಗಿ ತಾನು ಗತಿಗೇಡಾಗಬೇಕಲ್ಲ, ಎಂಬ ಹೊಟ್ಟೆಯುರಿಯಿಂದ ಭರಮನು ಈ ಕ್ರೂರಕೃತ್ಯವನ್ನು ಯಾಕೆ ಮಾಡಿರ ಬಾರದು?

'ಇದಲ್ಲದೆ ಇನ್ನೂ ಒಂದು ಸಂಗತಿ ಅವನನ್ನು ಪ್ರೇರಿಸಬಹು ದಾಗಿತ್ತು. ಪರವೂರಿನವನಾದ ಅವನಿಗೆ ಈ ಮನೆಯ ಬಗ್ಗೆ ಹಬ್ಬಿದ ಕೆಟ್ಟ ಹೆಸರು ಗೊತ್ತಿದ್ದಿತೋ ಇಲ್ಲವೊ? ಆದರೆ ಅವನು ನಮ್ಮನ್ನು ಕಂಡ ಮೊದಲ ದಿನ ನಾವು ಅವನಿಗೆ ಅದೆಲ್ಲವನ್ನೂ ಹೇಳಿಕೊಟ್ಟೆವು. ಅಂತೂ ಮನೆಯೊಳಗೆ ಭೂತ ಇದೆ, ಎಂಬ ಸಂಗತಿ ಅವನಿಗೆ ಅನುಕೂಲವಾಗಿರಲು ಸಾಕು. ನಾವು ಹೇಳಿದ ರೀತಿಯಿಂದ ಭೂತದ ವಿಷಯ ಊರಲ್ಲಿ ಎಲ್ಲರಿಗೂ ಗೊತ್ತಿದೆ, ಎಂಬುದೂ ಅವನಿಗೆ ಸ್ಪಷ್ಟವಾಗಿರಬೇಕು. ಇಂತಹ ಪರಿಸ್ಥಿತಿಯಲ್ಲಿ ತಾನು ಮಾಡಿದ್ದು ತನ್ನ ಮೇಲೆ ಬರಲಿಕ್ಕಿಲ್ಲವೆಂಬ ಧೈರ್ಯ ಅವನಿಗಾಗಿರಬಹುದಲ್ಲ? ನಾವೆಲ್ಲರೂ ಇಲ್ಲಿ ಬಂದ ಮೇಲೆ ದಿನದಿನಕ್ಕೆ ಭೂತದ ವಾತಾವರಣವೆ ಹಬ್ಬಿ ದ್ದನ್ನು ಅವನು ಕಣ್ಣಾರೆ ನೋಡಿದವನು. ಅದನ್ನು ನೋಡಿ ಅವನು ತನ್ನ ಸಮಯವನ್ನು ಸಾಧಿಸಿಕೊಂಡಿರಬಾರದೇಕೆ?

'ಮನಸಿನಲ್ಲಿ ಒಮ್ಮೆ ಒಂದು ನಿರ್ಧಾರವಾಯಿತೆಂದರೆ ಮನಸ್ಸು ಅದ ಕ್ಕಾಗಿ ಬೇಕಾದ ಕಾರಣಗಳನ್ನು ಹುಡುಕಿ ಕಾಣಿಸಬಹುದು. ನನಗೂ ಹಾಗೆಯೆ ಆಯಿತು. ಭರಮನ ವಿಷಯವಾಗಿ ಸಂಶಯ ಬಂದಂತೆ ಭರಮನೆ ಮಾಡಿರಬೇಕೆಂಬ ವಿಶ್ವಾಸ ಹುಟ್ಟಿತು. ಆ ವಿಶ್ವಾಸದ ತರುವಾಯ ಭರಮನೆ ಈ ಕ್ರೂರಕೃತ್ಯಕ್ಕೆ ಶಕ್ತಿಯುಳ್ಳವನು, ಎಂಬುದರ ಕಾರಣವೊಂದು ಹೊಳೆ ಯಿತು. ಮೊದಲ ಸಲ ಅವನನ್ನು ಕಂಡಾಗ ದೆವ್ವನಲ್ಲಿ ನಿನಗೆ ವಿಶ್ವಾಸ ವಿಲ್ಲವೆ, ಎಂದು ನಾವಿಬ್ಬರೂ ಅನೇಕ ವಿಧವಾಗಿ ಕೇಳಿದ್ದೆವು. ಅವನಿಗೆ ವಿಶ್ವಾಸ ವಿದ್ದಿರಲಿಲ್ಲ. ಇಷ್ಟೆ ಅಲ್ಲ—ಆ ಮಾತಿನಿಂದ ಕೆಣಕದಷ್ಟು ಅವನ ಹೃದಯ ಕಠೋರವಾಗಿದ್ದಿತು, ಅವನು ಕಲ್ಪನಾಶಕ್ತಿ ಹೀನನಾಗಿದ್ದನು. ಇರುವುದು- ಸಾಯುವುದು, ಭೂತ-ಜೀವಂತ ಈ ವ್ಯತ್ಯಾಸ ಕೂಡ ಅವನಿಗೆ ಮಹತ್ವ ದ್ದಲ್ಲ, ಎನ್ನುವಂತೆ ಅವನು ಮಾತನಾಡಿದ್ದನು. ಇದೆಲ್ಲ ಸ್ಮರಣೆಗೆ ಒಂದು

ಮೊದಮೊದಲು ಅವನೇ ದೋಷಿಯಾದುದು ಖಂಡಿತ, ಎಂದು ತಿಳಿದು ಕೊಂಡೆ.

'ಮೊದಮೊದಲು—ಎನ್ನಲು ಒಂದು ಕಾರಣ ಇದೆ. ಯಾಕೆಂದರೆ ಬೇಗಿನಿಂದ ದಿಗ್‌ಭ್ರಾಂತಳಾಗಿದ್ದ ನನ್ನ ಸ್ಮರಣಶಕ್ತಿಗೆ ಒಮ್ಮೆ ಚಾಲನೆ ಸಿಕ್ಕೊಡನೆ ಬೇರೆ ಕೆಲವು ಸಂಗತಿಗಳೂ ಸ್ಮರಣೆಗೆ ಬಂದತೊಡಗಿದವು. ಕೆಲ ಹೊತ್ತು ಆ ಸಂಗತಿಗಳ ಸ್ಪಷ್ಟ ರೂಪ ನನಗೆ ಹೊಳೆದಿರಲಿಲ್ಲ. ಪ್ರಯತ್ನ ಮಾಡಿದೆ. ಪ್ರಯತ್ನ ಮಾಡಿದಂತೆ ಒಂದೇ ಒಂದು ರೂಪ ನನ್ನ ಕಣ್ಣು ಕಟ್ಟಿತು. ನನ್ನ ಎದೆ ಜಗ್ ಎಂದಿತು. ಯಾಕೆಂದರೆ ನನ್ನ ಕಣ್ಣುಕಟ್ಟಿದ ರೂಪ ಅನಂತನದು.

'ನನ್ನ ಸ್ಮರಣೆ ಆಗ ಜಾಗೃತವಾಗಿದ್ದಿಲ್ಲವೆಂದರೆ ಏನಾಗುತ್ತಿದ್ದಿತೋ ಏನೊ! ಆದರೆ ಅನಂತನ ರೂಪ ಸಿಚ್ಛಳವಾಗಿ ನನ್ನ ಕಣ್ಣೆದುರು ನಿಂತಿತು. ನನಗೆ ನೆನಪಾದುದು ಅಂದಿನ ಬೆಳಗಿನ ದೃಶ್ಯ, ನಾವೆಲ್ಲರೂ ಹುಚ್ಚುಕಳೆಯಿಂದ ಇಲ್ಲಿ ಕುಳಿತುಕೊಂಡಿರುವ, ಭವಾನಿ ಇನ್ನೂ ಎದ್ದಿಲ್ಲವಲ್ಲ, ಎಂದು ಎಲ್ಲರ ಹೃದಯಗಳು ಹೆದರಿಕೆ-ಕುತೂಹಲಗಳಿಂದ ಸ್ತಬ್ಧವಾದ ದೃಶ್ಯ. ಅದನ್ನು ನಾನೆಂದಿಗೂ ಮರೆಯುವಂತಿಲ್ಲ. ಒಮ್ಮೆಲೆ ನೀನು ಮಾತನಾಡಿದೆ. ಮೇಲೆ ಹೋಗಿ ನೋಡಿಕೊಂಡು ಬರುವೆ ಎಂದೆ. ಆಗ ನಮ್ಮೆಲ್ಲರ ಹೃದಯ ನಡಗುವಂತೆ ಬೇಡ–ಬೇಡ ಎಂದು ಎಚ್ಚರದಪ್ಪುವಂತೆ ಅನಂತನು ಚೀರಿದ ದೃಶ್ಯ.

'ಅನಂತನ ಆಗಿನ ಮೂರ್ತಿ ಕಣ್ಣು ಕಟ್ಟಿದಂತೆ ಭರಮನ ಭಂಗ ಮೂರ್ತಿ ಮಾಯವಾಗತೊಡಗಿತು. ಅನಂತನು ಹಾಗೆ ಚೀರಿದ್ದೇಕೆ? ಆ ಮೇಲೆ—ಭವಾನಿಯ ಆ ಸ್ಥಿತಿಯನ್ನುನೋಡಿದಾಗೂ ಅನಂತನು ಮೂರ್ಛೆ ಹೋದದ್ದು ಸ್ಮರಣೆಗೆ ಬಂದಿತು. ಆದರೆ ಮೊದಲು ಸಲ ಅವನು ಚೀರಿದಾಗ ಅಂತಹ ಕಾರಣವೇನಿದ್ದಿತು? ಭವಾನಿಗೆ ಹೀಗಾಗಿರಬಹುದೆಂಬ ಕಲ್ಪನೆ ಯಾರಿಗೂಇದ್ದಿರಲಿಲ್ಲ, ಇರುವದೂ ಶಕ್ಯವಾಗಿರಲಿಲ್ಲ. ಹೀಗಿರುವಾಗ-ಅನಂತನ ಅಂತಹ ಹೆದರಿಕೆಗೆ ಕಾರಣವೇನು? ಅಥವಾ ಅವನಿಗೆ ಗೊತ್ತಿದ್ದಿತೆ? ಗೊತ್ತಿರುವುದಾದರೂ ಹೇಗೆ? ಅರ್ಥಾತ್—ಮುಂದೆ ನಾವು ಕಂಡ ಅನಾಹುತವನ್ನು ಅವನೇ ಮಾಡಿರಬಹುದೆ? ತಾನು ಮಾಡಿದ್ದು ತನಗೆ ಗೊತ್ತು, ಅದಕಾಗಿ ಹೆದರಿಕೆ, ಈಗ ಎಲ್ಲರಿಗೂ ತಿಳಿಯುವುದಲ್ಲ, ಎಂಬ ಹೆಚ್ಚಿನ ಹೆದರಿಕೆ. ಇಲ್ಲ

ವಾದರೆ ಬೇಡ-ಬೇಡ ಎಂಬ ಶಬ್ದಗಳೆ ಅವನ ಬಾಯಿಯಿಂದ ಹೊರಚಿಮ್ಮುವ ಕಾರಣವೇನು? ನೀನು ಮೇಲೆ ಹೋಗಿ ನೋಡಿ ಬರುವುದನ್ನು ತಡೆಯಬೇಕೆಂಬ ಕಲ್ಪನೆಯೆ ಅವನಿಗೆ ತಟ್ಟನೆ ತೋಚಿತು ಯಾಕೆ?

'ಈ ಮನೆಗೆ ಬಂದಂದಿನಿಂದ ಬೆಳೆದ ವಾತಾವರಣದಲ್ಲಿ ಇಂತಹ ಕೆಟ್ಟ ವಿಚಾರಗಳೇ ನನಗೆ ಹೊಳೆದರೆ ತಪ್ಪೇನು? ಇದಲ್ಲದೆ ಆಗಿನ ಸಂಶಯದ, ಹೆದರಿಕೆಯ ಮನಃಸ್ಥಿತಿಯಲ್ಲಿ ಆ ವಿಚಾರಗಳಿಗೆ ಪುಟವನ್ನು ಕೊಡುವ ಸಂಗತಿಗಳೆ ಹೆಚ್ಚಾಗಿ ಸ್ಮರಣೆಗೆ ಬಂದರೂ ತಪ್ಪೇನು? ನನಗಂತೂ ಹಾಗೆಯೆ ಆಯಿತು. ಅನಂತನ ವಿಷಯದಲ್ಲಿ ಸಂಶಯ ಮೂಡಿದೊಡನೆ ಆ ಸಂಶಯವನ್ನು ದೃಢಪಡಿಸುವಂತಹ ಅನೇಕ ಸಂದರ್ಭಗಳು ಸೂಚಿಸಿದುವು. ಮೊದಲು ಒಂದನ್ನು ಹೇಳುವೆ. ಯಾಕೆಂದರೆ, ಅದು ಮಹತ್ವದ್ದಿದೆ; ಇದಲ್ಲದೆ ಅದನ್ನು ಇಲ್ಲಿಯ ವರೆಗೆ ನಾನು ಬಚ್ಚಿಟ್ಟಿರುವೆ. ಹಾಗೆ ಮಾಡಲು ಅನಂತನೆ ಕಾರಣನೂ ಆಗಿದ್ದಾನೆ. ಆ ಸಂದರ್ಭವೆಂದರೆ ಅಂದಿನ ರಾತ್ರಿ ಅನಂತನು ನನ್ನ ಕೋಣೆಯಲ್ಲಿ ಬಂದ ರೀತಿ. ಅವನ ಕೂದಲು ಅಸ್ತವ್ಯಸ್ತವಾಗಿದ್ದುವು. ಮುಖದಲ್ಲಿ ವಿಲಕ್ಷಣವಾಗಿ ಹೌಹಾರಿದಂತಹ ಕಳೆ ಇದ್ದಿತು. ಆದರೂ ಕಣ್ಣುಗಳಲ್ಲಿ ಒಂದು ಆವೇಶವಿದ್ದಿತು. ಅವನ ಕೈಕಾಲ್ಗಳು ನಡಗುತ್ತಿದ್ದುವು. ಈ ಸ್ಥಿತಿಯಲ್ಲಿ ಅವನು ಧಾವಿಸಿ ನನ್ನ ಕೋಣೆಯೊಳಗೆ ಬಂದನು. ಅವನನ್ನು ಕಂಡಾಕ್ಷಣ ನಾನು ಚೀರಿದೆ ಅಷ್ಟರಲ್ಲಿ ಅವನು ಸುಮ್ಮನಿರಲು ನನಗೆ ಸನ್ನೆ ಮಾಡಿದನು. ನಾನು ಹೆದರಿದ್ದೆ. ಮುಂದೆ ಅವನು ಹೇಳಿದಂತೆ ಮಾಡಿದೆ. ಅವನು ಹೇಳಿರಬಹುದಲ್ಲ ನಿನಗೆ? ಅಂತೂ ಅವನನ್ನು ನನ್ನ ಕೋಣೆಯಲ್ಲಿ ಅಡಗಿಸಿಡಲು ನಾನೂ ಸಂಚುಗಾರ್ತಿಯಾದೆ. ನಾನು ಚೀರಿದ್ದಕ್ಕೆ ಬೇರೆ ಕಾರಣವಿದ್ದಿತು. ಅವನ ಸ್ವರೂಪಕ್ಕಾಗಿ ನಾನು ಹೆದರಿರಲಿಲ್ಲ. ಆದರೆ ಅವನ ಮುಖ ಲಕ್ಷಣವನ್ನು ನೋಡಿದರೆ ಏನೊ ಒಂದು ಕ್ರೂರ ಕೃತ್ಯವನ್ನು ಮಾಡಿರಬಹುದೆ ಎನಿಸುವಂತಿದ್ದಿತು.

'ಈ ಸಂದರ್ಭ ನೆನಪಾದೊಡನೆ ಮಿಕ್ಕ ಅನೇಕ ಸಂಗತಿಗಳು ಒಂದನ್ನೊಂದು ಹೊಂದಿಕೊಳ್ಳುತ್ತ ಅನಂತನನ್ನು ಆರೋಪಿಸುವ ಸಾಕ್ಷಿಗಳಂತೆ ಎದ್ದುನಿಂತವು. ನಾನೂ ಅನಂತನೂ ಚಿಕ್ಕಂದಿನಿಂದ ಜೊತೆಗಾರರು. ಆದರೆ ಗೆಳೆತನದ ಹೊರತಾಗಿ ಬೇರೊಂದು ಭಾವನೆ ನಮ್ಮ ಸಂಬಂಧದಲ್ಲಿ ಮೊದ

ಮೊದಲು ಇದ್ದಿರಲಿಲ್ಲ. ಮುಂದೆ ಅನಂತನ ಮನಸ್ಥಿತಿ ಬದಲಾಯಿಸಿತೆಂದು ನನಗೆ ಕಂಡುಬಂತು. ನನ್ನ ನಿಮಿತ್ತವಾಗಿ ಅವನಿಗೆ ಮೊದಲು ಬೇಕಾದ ಗೆಳೆಯರು ಬೇಡೆನಿಸತೊಡಗಿದರು. ಭವಾನಿಯ ಸಲುವಾಗಿಯಂತೂ ಅವನಲ್ಲಿ ತಡೆಯದಷ್ಟು ಅಸಹನೆ ಇದ್ದಿತು. ಮುಂದೆ ಅಸೂಯೆ ಎದ್ದಿತು. ಕೊನೆಗೆ ದ್ವೇಷ ಮನೆಮಾಡಿತು. ಇದ್ದ ಇಲ್ಲದ ನೆವಗಳಿಂದ ಅವನು ನೆರಳಿನಂತೆ ನನ್ನನ್ನು ಹಿಂಬಾಲಿಸತೊಡಗಿದನು. ಭವಾನಿಯಿಂದ ನನಗೆ ಕಷ್ಟದ ಪ್ರಸಂಗಗಳು ಬರುತ್ತಿದ್ದುದು ಅನಂತನಿಗೆ ತಿಳಿಯದೆ ಹೋಗಲಿಲ್ಲ. ಕೊನೆಗೆ ಅವನು ಸ್ಪಷ್ಟವಾಗಿಯೆ ಹೇಳಿದನು, ಭವಾನಿಯ ಸಹವಾಸವನ್ನು ನಾನು ಬಿಟ್ಟುಕೊಡಬೇಕೆಂದು. ಅದಕ್ಕೆ ನಾನು ಒಪ್ಪದಂತೆ ಕಾಣಲು ಅವನು ಭವಾನಿಯೊಡನೆಯೆ ಸ್ಪಷ್ಟವಾಗಿ ಜಗಳವನ್ನು ಹೂಡಿರಬೇಕೆನಿಸುತ್ತದೆ. ಯಾಕೆಂದರೆ—ಎಷ್ಟೋ ಸಲ ಅವರಿಬ್ಬರೂ ಕೂಡಿ ತಿರುಗಾಡಲು ಹೋಗಿ ಮರಳಿ ಬಂದಾಗ ಇಬ್ಬರ ಮುಖದಲ್ಲೂ ಒಂದು ತರದ ಮೌನ, ತಡೆದುಕೊಂಡ ಆವೇಶ, ಪರಸ್ಪರ ದ್ವೇಷ ಕಂಡುಬರುತ್ತಿದ್ದವು. ಇದಲ್ಲದೆ ಅನಂತನು ಯಾವಾಗಲೂ ಏನೊ ಒಂದು ನಿಶ್ಚಯವನ್ನು ಮಾಡಿಕೊಂಡಂತೆ ಭವಾನಿಯ ಸುತ್ತಾಡುತ್ತಿದ್ದನು.

'ನನಗೆ ಇನ್ನೂ ಕೆಲವು ಸಂಗತಿಗಳು ಗೊತ್ತಿವೆ. ಮನಸಿನೊಳಗಿನ ಸಂಶಯ ಕಳೆಯಬೇಕೆಂದೇ ನಾನು ನಿನಗೆ ಹೇಳುತ್ತಲಿದ್ದೇನೆ. ಯಾರ ಮೇಲೂ ಆರೋಪ ಹೊರಿಸುವ ಉದ್ದೇಶ ನನಗಿಲ್ಲ. ನನ್ನ ಬಾಲ್ಯಮಿತ್ರನಾದ ಅನಂತನ ವಿಷಯದಲ್ಲಂತೂ— ನಿಜವಿದ್ದರೂ ಕೂಡ ನಾನು ಹಾಗೆ ವರ್ತಿಸಲಿಕ್ಕಿಲ್ಲ. ನಿನಗೆ ಮೊದಲೇ ಹೇಳಿದಂತೆ ನನ್ನ ಹೇಳಿಕೆಯಿಂದ ಅನಂತನು ಕಷ್ಟಕ್ಕೆ ಸಿಕ್ಕುವದಾದರೆ ನಾನು ಹೇಳಿಲ್ಲ, ಕೇಳಿದ್ದೆಲ್ಲ ಸುಳ್ಳು, ಎಂದು ಸಾಧಿಸುವೆ. ಆದರೆ ನನ್ನಷ್ಟಕ್ಕೆ ನನ್ನ ಈ ಸಂಶಯವೃತ್ತಿ ತಡೆಯದಂತಾಗಿದೆ. ಅದರಲ್ಲೂ ಅನಂತನ ಮೇಲೆ ಸಂಶಯವೆಂದರೆ ನನಗೆ ನನ್ನ ಜೀವನವೆ ಅಸಹ್ಯವೆನಿಸುವಂತಾಗಿದೆ. ಆದರೆ ಮಾಡಲೇನು? ನಡೆದ ಸಂಗತಿಗಳ ಅರ್ಥವೆ ನನ್ನ ಮಟ್ಟಿಗೆ ಹಾಗಾಗಿದೆ. ಆಡಿತೋರಿಸಿದ್ದಷ್ಟಕ್ಕೆ ಕೂಡ ನನಗೆ ಸಮಾಧಾನವೆನಿಸುತ್ತದೆ.

'ನನ್ನದೊಂದು ಅನುಭವವನ್ನು ಈ ವಿಷಯದಲ್ಲಿ ಉದಾಹರಣೆಗಾಗಿ ಹೇಳುವೆ. ಅನಂತನಲ್ಲಿ ಭವಾನಿಗಾಗಿ ದ್ವೇಷ ಎಷ್ಟು ಕುದಿಯುತ್ತಿದ್ದರೂ

ನನಗೆ ಹೆದರಿಕೆ ಇದ್ದಿಲ್ಲ. ಯಾಕೆಂದರೆ ಅವನ ಸ್ವಭಾವವನ್ನು ನಾನು ಚೆನ್ನಾಗಿ ಒಲ್ಲೆ. ಚಿಕ್ಕವನಿದ್ದಾಗಿನಿಂದ ಪುಕ್ಕನು ಅವನು. ಅದರಲ್ಲಂತೂ ದೆವ್ವಿನ ಮಾತಿಗೆ ಹೆದರಿ ಹರದಾರಿ ಓಡುವವ. ಇಂತವನು ಕ್ರೂರ ನಿಶ್ಚಯವನ್ನು ಮಾಡುವದಶಕ್ಯ, ಎಂದು ನನಗೆ ಭರವಸೆ ಇದ್ದಿತು. ಆದರೆ ಮೊದ ಮೊದಲು ಮಾತ್ರ. ಯಾಕೆಂದರೆ ಕ್ರಮೇಣ ಕಣ್ಣೆದುರಿನ ಅನುಭವದಿಂದ ಆ ಭರವಸೆ ತತ್ತರಿಸತೊಡಗಿತು. ಇಂತಹ ಪುಕ್ಕ ಅನಂತ, ಆದರೂ ಅವಶ್ಯವಿಲ್ಲದಿದ್ದರೂ ಕೂಡ ನಮ್ಮೆಲ್ಲರ ಜೊತೆಗೆ ಈ ಮನೆಗೆ ಬಂದನಲ್ಲ! ಯಾವುದಾದರೊಂದು ಮನಸ್ಸನ್ನು ಗಟ್ಟಿಗೊಳಿಸುವ ವಿಚಾರವಿಲ್ಲದೆ ಅವನು ತನ್ನ ಹೆದರಿಕೆಯನ್ನು ಮೀರಬಹುದೆ—ಎಂದು ಸಂದೇಹ ಬಂದಿತು ನನಗೆ. ಭವಾನಿಯೊಡನೆ— ಇಲ್ಲಿ ಒರುವಾಗ— ಅವನು ನಡೆದುಕೊಂಡ ರೀತಿಯನ್ನು ನೋಡಿ ಆ ಸಂದೇಹವು ಸ್ಪಷ್ಟವಾಗತೊಡಗಿತು. ಆದರೂ ನನ್ನನ್ನು ಅಳಿಸುವದಕ್ಕೊ ಭವಾನಿಯನ್ನು ಅಳಿಸುವದಕ್ಕೊ — ಎಂಬುದರ ನಿರ್ಣಯವಿಲ್ಲದೆ ನನಗೆ ಆಗಾಗ ಸಮಾಧಾನವಾಗುತ್ತಿತ್ತು.

‘ ಮುಂದೆ ಒಂದು ದಿನ ಅವನಿಗೆ ಹೊಸತೊಂದು ವ್ಯಾಸಂಗ ಹತ್ತಿಕೊಂಡುದನ್ನು ಕಂಡೆ. ಆ ವ್ಯಾಸಂಗವೆಂದರೆ ಅವನು ಓದುತ್ತಿದ್ದ ಇಂಗ್ಲಿಶ ಪುಸ್ತಕಗಳ ಮಾದರಿ. ಇತ್ತಿತ್ತಲಾಗಿ Crime stories ಸಾಹಸದ ಕತೆಗಳು— ಹೆಚ್ಚು ಅನುಕೂಲವಾಗುವಂತೆ ಪ್ರಕಟವಾಗುತ್ತಲಿವೆ. ಅನಂತನ ಕಡೆ ೩೦—೪೦ ಅಂತಹ ಕತೆಯ ಗ್ರಂಥಗಳನ್ನು ನೋಡಿದೆ. ಓದಿದರೆ ಹೆದರಿಕೆ ಹುಟ್ಟುವಂತಹ, ಒಬ್ಬೊಂಟಿಗನಿದ್ದಾಗ ಮೈ ಜಿವಿಡಿಸುವಂತಹ, ರಾತ್ರಿ ಭೀತಿಯಿಂದ ಹುಚ್ಚು ಹಿಡಿಸುವಂತಹ ಗ್ರಂಥಗಳವು. ಅವನ್ನು ಅನಂತ ಓದುತ್ತಿರುವ! ಈ ಮನೆಗೆ ಒರುವುದೆ ಅವನದೊಂದು ಸಾಹಸ, ಜೊತೆಗೆ ಅಂತಹ ಗ್ರಂಥಗಳ ವಾಚನ. ಇದರ ರಹಸ್ಯವೇನಿರಬಹುದೆಂಬ ವಿಚಾರದಿಂದ ನನ್ನಷ್ಟಕ್ಕೆ ನಾನು ನಡುಗಿದೆ. ಒಮ್ಮೆ ಅವನನ್ನೇ ಸ್ಪಷ್ಟವಾಗಿ ಮಾತಾಡ ನೋಣ ಎನಿಸಿತು. ಮತ್ತೊಮ್ಮೆ ಅವನ ಉತ್ತರದಿಂದ ನನ್ನ ಸಂಶಯ ದೃಢವಾದೀತಲ್ಲ, ಎಂದು ಹೆದರಿದೆ. ಕೊನೆಗೂ ನನಗೆ ಕೇಳುವ ಧೈರ್ಯವಾಗಲಿಲ್ಲ.

‘ ಇವೆಲ್ಲಕ್ಕಿಂತ ಮಹತ್ವದ್ದಾದ ಮಾತೊಂದಿದೆ. ಅದರಲ್ಲ ನನಗೆ ನಿಜ

ವಾಗಿಯೂ ವಿಶ್ವಾಸವಿಲ್ಲ. ಆದರೂ ಈ ಸಂದರ್ಭದಲ್ಲಿ ಅದನ್ನು ಹೇಳದೆ ನನ್ನ ಮನಃಸ್ಥಿತಿಯ ಕಲ್ಪನೆ ನಿನಗೆ ಚೆನ್ನಾಗಿ ಬರಲಿಕ್ಕಿಲ್ಲ. ಅನಂತನು ನನ್ನೊಡನೆ ಆ ಮಾತನ್ನು ಹೇಳಿದ್ದನು; ಭವಾನಿಗೂ ಹಾಗೆ ಹೇಳಿದ್ದನೊ ಇಲ್ಲವೊ ನನಗೆ ಗೊತ್ತಿಲ್ಲ; ಹೇಳಿರಬಹುದು, ಎಂದು ನನ್ನ ಹೆದರಿಕೆ. ಆ ಮಾತೆಂದರೆ ಭವಾನಿಯು ನನ್ನನ್ನು ಮದುವೆಯಾಗಲು ಒಪ್ಪದಿದ್ದರೆ ಅನಂತನು ಅವನನ್ನು ಕೊಲ್ಲಲು ಕೂಡ ಹಿಂದುಮುಂದು ನೋಡಲಿಕ್ಕಿಲ್ಲ, ಎಂದು. ಈ ಮಾತನ್ನು ಈ ಮನೆಗೆ ಬಂದ ಮೇಲೆ ಹೆಚ್ಚು ಹಟದಿಂದ ಹೇಳುತ್ತಿದ್ದನು.

'ಆ ಅನಾಹುತವಾದ ರಾತ್ರಿ ಭವಾನಿಯು ನನ್ನನ್ನು ಎಂದಿಗೂ ಮದುವೆಯಾಗಲಿಕ್ಕಿಲ್ಲ, ಎಂದು ನಿರ್ಧಾರವಾಗಿ ಹೇಳಿದನು! ಆ ಮಾತಿನಿಂದ ನಾನು ದಿಕ್ಕೆಟ್ಟವಳಂತೆ ವಿಚಾರಶೂನ್ಯಳಾಗಿ, ಖಿನ್ನಳಾಗಿ ಕುಳಿತುಕೊಂಡಿದ್ದೆ. ಅಷ್ಟರಲ್ಲಿ ಅನಂತನು ಆ ಅಸ್ತವ್ಯಸ್ತ ಸ್ವರೂಪದಲ್ಲಿ ನನ್ನ ಕೋಣೆಯೊಳಗೆ ಧಾವಿಸಿದನು!

'ಇದಕ್ಕೂ ಹೆಚ್ಚು ಇನ್ನೇನು ಹೇಳಲಿ?'

* * * *

ಇಂದುಮತಿಯು ತನ್ನ ಕತೆಯನ್ನು ಮುಗಿಸುವ ಹೊತ್ತಿಗೆ ಹಗಲು ಹರಿದಿತ್ತು. ಒಬ್ಬರೊಬ್ಬರ ಮುಖವು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಅವಳ ಮಾತು ಮುಗಿದರೂ ಮೋಹನನು ಲಕ್ಷ್ಯಗೊಟ್ಟು ಕೇಳುವವನಂತೆ ಸ್ತಬ್ಧನಾಗಿಯೆ ಕುಳಿತಿದ್ದನು. ಕೋಣೆಯಲ್ಲಿ ಕವಿದ ನಿಃಶಬ್ದತೆಯಿಂದ ಹೆದರಿದವನಂತೆ ಮೋಹನನು ಚಕಿತನಾಗಿ ಎದ್ದನು, ತಟ್ಟನೆ ದೀಪವನ್ನು ಇರಿಸಿದನು. ಒಂದು ಅವಳನ್ನು ಎದುರಿಸಿ ಕುಳಿತುಕೊಳ್ಳುತ್ತ ಮುಗುಳ್ನಗೆಯನ್ನು ತೋರಿದನು.

'ನೀನು ಗಂಡಸಾಗಿದ್ದರೆ ಪ್ರಖ್ಯಾತ ಪೋಲೀಸ ಅಧಿಕಾರಿಯಾಗುತ್ತಿದ್ದೆ' ಎಂದನು.

'ಆದರೆ ಈಗ ಮಾತ್ರ ಆರೋಪಿಯಾಗಿರುವೆನಲ್ಲ' ಎಂದು ಉಸುರ್ಗರೆಯುತ್ತ ನುಡಿದಳು ಇಂದುಮತಿ.

ಮೋಹನನು ಎದ್ದನು.

'ಇಂದುಮತಿ, ನನ್ನನ್ನು ಕ್ಷಮಿಸು. ನಿನಗೆ ಬಹಳೆ ಶ್ರಮವಾಗಿರಬೇಕು. ನೀನು ದಣಿದದ್ದು ಸ್ಪಷ್ಟವಾಗಿ ಕಾಣುತ್ತಿದೆ. ಈ ರಾತ್ರಿ ನಾವು ಊಟವನ್ನು ತರಿಸೋಣ. ನಿನಗೆ ಅಡುಗೆಯ ಶ್ರಮ ಬೇಡ. ಸುದೈವದಿಂದ ಇಬ್ಬರು ಪೋಲೀಸರು ಕಾವಲಿದ್ದಾರೆ. ಒಬ್ಬನಿಗೆ ಊಟ ತಂದುಕೊಡುವಂತೆ ಬೇಡೋಣ.'

'ನನಗೆ ಶ್ರಮವಾಗಿದೆ. ಆದರೂ ಸಂತೋಷವಿದೆ. ಅನಂತನನ್ನು ಉಳಿಸುವೆ, ಎಂದು ನೀನು ಹೇಳಿರುವೆ.'

'ಅನಂತನನ್ನು ಉಳಿಸುವವನು ನಾನಲ್ಲ. ಅವನು ಉಳಿದರೆ ನಿನ್ನ ಬುದ್ಧಿವಂತ್ತೆಗಾಗಿಯೆ ಉಳಿಯುವ. ಹೆದರಬೇಡ. ಇನ್ನು ಬೋಧಿಯೊಬ್ಬ ನನ್ನು ಮಾತನಾಡಿಸಿದ ಮೇಲೆ ಮುಗಿಯಿತು.'

'ಆ ಮೇಲೆ?'

ಮೋಹನನು ನಕ್ಕನು. ಆ ಮೇಲೆ ನೀವು ಮೂವರೂ ಪಂಚರು. ನಾನು ಆರೋಪಿ. ನನ್ನ ಕತೆಯನ್ನೂ ಹೇಳಬೇಕಲ್ಲ. ಆಯಿತು—ಇನ್ನು ತಡವಾದರೆ ಬೋಧಿ ಸಿಟ್ಟಿಗೆದ್ದು ಈ ಮನೆಯಲ್ಲಿ ಇನ್ನೊಂದು ಕೊಲೆಯಾಗ ಬಹುದು. ಆದ್ದರಿಂದ—ನಾನು ಅವನ ಭಾಷಣಸುಧಾಸಾರವನ್ನು ಚಾತಕ ಪಕ್ಷಿಯಂತೆ ಉತ್ಕಂಠನಾಗಿ ಎದುರಿಸುತ್ತಿದ್ದೇನೆ, ಎಂದು ತಿಳುಹಿಸುವೆಯಾ?'

ಇಂದುಮತಿ ಮಾತಿಲ್ಲದೆ ಹೊರಟಳು.

ಅವಳ ಬೆನ್ನು ತಿರುಗಿದಾಕ್ಷಣ ಮೋಹನನು ಎರಡೂ ಕೈಗಳಿಂದ ತಲೆ ಹಿಡಿದುಕೊಂಡು ಉಸ್ಸೆಂದು ಕುರ್ಚಿಯಲ್ಲಿ ಕುಕ್ಕರಿಸಿದನು.

## ೭ ಬೋಧಿಯ ಬುದ್ಧಿಮತ್ತೆ

ಮೋಹನನಿಗೆ ದಿಗಿಲು ಬಿದ್ದಂತಾಯಿತು. ಅನಂತ! ಅನಂತನ ಸ್ವಭಾವವನ್ನರಿತವರು ಕನಸುಮನಸುಗಳಲ್ಲೂ ಈ ಮಾತನ್ನು ನಂಬರು. ಆದರೆ ಇದುವರೆಗಿನ ಸಂಗತಿಗಳನ್ನೆಲ್ಲ ಹೊಂದಿಸಿ ನೋಡಿದರೆ ಅನಂತನು ನಿರ್ದೋಷಿ ಎಂದು ನಿರ್ಣಯವನ್ನು ಸಿದ್ಧಮಾಡಿ ತೋರಿಸುವುದು ಎಂತಹ ಬುದ್ಧಿಗೂ ಮೀರಿದ ಆಟ ಎನಿಸಬಹುದಾಗಿದೆ. ಅಥವಾ ಇಂದುಮತಿಯ ಹೇಳಿಕೆಯಲ್ಲಿ ಏನಾದರೊಂದು ಉದ್ದೇಶವಿದೆಯೆ? ಹೆಂಗಸು ಇಂತಹ ಕ್ರೂರಕೃತ್ಯವನ್ನು ಮಾಡುವುದು ಹೇಗೆ, ಎಂಬ ವಿಚಾರ ಮೋಹನನಿಗಿರಲಿಲ್ಲ. ಹಾಗೆ ನೋಡಿದರೆ ಸ್ವಾಭಿಮಾನದ ಕಲ್ಪನೆ ಹೆಂಗಸಿಗೆ ಸಂಕುಚಿತವಿದ್ದು, ತಾನು ನಿರ್ಗತಿಕಳಾದ ಕಾರಣಕ್ಕಾಗಿಯೆ ಹೆಂಗಸು ಬೇಕಾದ ಸಾಹಸಕ್ಕೆ ಸಿದ್ಧಳಾಗಬಹುದು, ಎಂಬುದನ್ನು ಮೋಹನನು ಅರಿತಿದ್ದನು. ಅನಂತನ ಹೇಳಿಕೆಯಲ್ಲಿ ಇಂದುಮತಿಗಾಗಿ ಸಂಶಯ ತರುವಂತಹ ಒಂದು ಮಾತೂ ಇರಲಿಲ್ಲ. ಆದೇ ಇಂದುಮತಿ ಮುಂಚಿನಿಂದಲೆ ಅನಂತನ ಮೇಲೆ ತನ್ನ ಸಂಶಯವಿದೆ, ಎಂದೆ ಪ್ರಾರಂಭಿಸಿದಳು! ಹೀಗೆ ಇರಬಹುದೆ? ಇಲ್ಲವಾದರೆ ಇಂದುಮತಿಯ ಉದ್ದೇಶವೇನು? ಭವಾನಿಗೆ ತಾನು ಮನಸೋತಿದ್ದು, ಇಂದಿಲ್ಲ ನಾಳೆ ಭವಾನಿಯು ತನ್ನನ್ನು ಮದುವೆಯಾಗಬಹುದಿತ್ತು, ಆದರೆ ಅನಂತನ ಉಪದ್ವ್ಯಾಪಕ್ಕಾಗಿಯೆ ಭವಾನಿ ಕೆಣಕಿದಂತಾಗಿ ಕಠೋರನಾದನು, ಎಂಬ ಕಲ್ಪನೆಯಿಂದ ಇಂದುಮತಿ ಅನಂತನಿಗಾಗಿ ದ್ವೇಷವನ್ನು ತಳೆದಿರಬಹುದೆ? ಕೊಲೆ, ಎಂಬುದು ಸಣ್ಣ ಕೆಲಸವಲ್ಲ, ಸುಲಭ ಕೆಲಸವಲ್ಲ; ಸದ್ಯದ ಪ್ರಸಂಗದಲ್ಲಂತೂ ಉಳಿದ ತಾವು ನಾಲ್ವರೂ ಸುಸಂಸ್ಕೃತರು, ಇಂತಹ ಕೆಲಸಕ್ಕೆ ಪ್ರತಿಫಲವೇನು, ಎಂಬುದನ್ನು ಅರಿತವರು. ಇಂತಹರಲ್ಲಿ ಒಬ್ಬರು ಕೊಲೆ ಮಾಡಿದರೆಂದರೆ? ನಂಬಲಸಾಧ್ಯ. ಕೊಲೆ ಇದಲ್ಲ, ಎಂಬುದು ಅಸಂಭವನೀಯ.

ಎಲ್ಲರ ವಿಚಾರವಸ್ತುವನ್ನು ಬದಲಾಯಿಸಿ ಕೇವಲ ಹೊತ್ತುಗಳೆಯಲೆಂದು ಮೋಹನನು ಈ ಆಟವನ್ನು ಮೊದಲು ಹೂಡಿದ್ದನು. ಆದರೆ ಅನಂತ

ಇಂದುಮತಿಯ ಮಾತುಗಳನ್ನು ಕೇಳಿದ ಮೇಲೆ ಅವನ ಮನಸ್ಸಿಗೆ ಈ ಸಂಗತಿ ಹಿಡಿಯಿತು, ಬುದ್ಧಿ ಕೆಣಕಿದಂತಾಯಿತು. ಇದು ಕೊಲೆಯೆ ಆಗಿದ್ದರೆ ತೀರ ಬುದ್ಧಿವಂತಿಕೆಯಿಂದ ಮಾಡಿದ್ದೇ ಆಗಿರಬೇಕು, ಎಂದು ಎನಿಸಿತು. ಸಿಟ್ಟಿನ ಭರದಲ್ಲಿ, ತಾತ್ಕಾಲಿಕ ಆವೇಶದಲ್ಲಿ ಮಾಡಿದ್ದಾದರೆ ಆ ತೊಡಕನ್ನು ಬಿಡಿಸಲು ಸುಲಭವಾಗಬಹುದಾಗಿತ್ತು; ಆದರೆ ಇಲ್ಲಿ ಯಾರೊ ಬುದ್ಧಿಯನ್ನು ಉಪಯೋಗಿಸಿದ್ದಾರೆ, ಅದಕ್ಕಾಗಿಯೆ ಯಾವ ದೃಷ್ಟಿಯಿಂದ ನೋಡಿದರೂ ಈ ತೊಡಕು ಸಮಾಧಾನಕಾರಕವಾಗಿ ಬಿಡಲೊಲ್ಲದು. ಈ ನೀಚತನದಲ್ಲಿ ಇಷ್ಟೊಂದು ಬುದ್ಧಿಯನ್ನು ಉಪಯೋಗಿಸಿದ್ದರೆ ಅಂತಹ ಬುದ್ಧಿವಂತಿಕೆಯಿಂದಲೆ ಇದನ್ನು ಬಯಲಿಗೆಳೆಯಲೇಬೇಕು, ಎಂದು ಅವನು ನಿರ್ಧರಿಸಿದನು. ತಲೆ ಎತ್ತಿ ಕುಳಿತನು. ಬಾಗಿಲು ತೆರೆಯಿತು, ಬೋಧಿಯು ಬಂದನು; ಬಿರುಗಾಳಿಯಂತೆ ಬಂದನು. ಬಾಯಿಯಿಂದ ಆಣೆಕಲ್ಲಿನಂತೆ ಮಾತುಗಳು ಸಿಡಿದುವು.

ಮೋಹನನಿಗೆ ಅವನ ಮಾತುಗಳ ಕಡೆ ಲಕ್ಷ್ಯವಿದ್ದಿರಲಿಲ್ಲ. ಬೋಧಿಯು ಬಂದ ರಭಸ, ಅವನ ಮುಖದಲ್ಲಿಯ ಕಳೆ, ಅವನ ಸುಸಂಸ್ಕೃತ ಅವಾಚ್ಯ ಶಬ್ದಗಳು—ಇದನ್ನೆಲ್ಲ ನೋಡಿ ಮೋಹನನಿಗೆ ಬಹು ಮೋಜು ಎನಿಸಿತು. ಇದುವರೆಗೆ ಒಂದು ತರದಿಂದ ಉಸಿರುಗಟ್ಟಿದಂತೆ ವಾತಾವರಣವಿದ್ದಿತು. ಬೋಧಿಯ ಹುಡುಗತನದಿಂದ ಆ ವಾತಾವರಣ ಬಯಲಾದಂತಾಗಿ ಮೋಹನನಿಗೆ ಮೊದಲು ಸಮಾಧಾನವಾಯಿತು, ಆ ಮೇಲೆ ನಗೆ ಬಂದಿತು. ಈ ನಗೆಯಿಂದ ಬೋಧಿಯ ಸಿಡಿಲು-ಮಿಂಚಿನ ಅಬ್ಬರ ಹೆಚ್ಚಾಯಿತೆಂದು ಬೇರೆ ಹೇಳಬೇಕಾಗಿಲ್ಲ.

'ನಿನಗೆ ನೌಕರಿ ಸಿಕ್ಕದೆ ಇದ್ದದ್ದು ಏನೂ ಆಶ್ಚರ್ಯ ಅಲ್ಲ' ಎಂದು ಮೋಹನನು ಅವನನ್ನು ಕುತೂಹಲದಿಂದ ದಿಟ್ಟಿಸುತ್ತ ಹೇಳಿದನು. ಬೋಧಿಯು ಮಾತನಾಡಬೇಕೆನ್ನುವಷ್ಟರಲ್ಲಿ ಮೋಹನನು ಅವನನ್ನು ತಡೆದು ಮತ್ತೆ ಹೇಳಿದನು. 'ಯಾಕೆ ಸಿಕ್ಕಲಿಲ್ಲ ಅನ್ನೋದರ ಕಾರಣ ಹೇಳ್ತೇನಿ ಕೇಳು. ಈಗ ನೀನು ಮಾತಾಡಿದಿಯಲ್ಲ, ಇದೊಂದೇ ಭಾಷೆ ನಿನಗೆ ಬರೋಹಾಗೆ ಕಾಣ್ತದೆ. ಈ ಭಾಷೆಯೊಳಗ ಅರ್ಜಿ ಬರೆದರೆ—'

'ಈಗ ಏನು ನೌಕರಿ ಸಲುವಾಗಿ ನೀ ನನ್ನ interview (ಇಂಟರ್ವ್ಯೂ) ತಕ್ಕೊಳ್ಳುವವನೊ—'

'ಅಲ್ಲ. ಪುರಸಭೆಯ ಸಂಬಂಧಿತ ಆರೋಪಿಯ ಹೇಳಿಕೆ ತಕ್ಕೊಳ್ಳಬೇಕಾಗಿದೆ' ಎಂದು ಗಾಂಭೀರ್ಯವನ್ನು ನಟಿಸುತ್ತ ಮೋಹನನು ಮಾತನಾಡ ತೊಡಗಿದನು. 'ಬೋಧರಾಯ ಉರ್ಫ ಬೋಧಿ—ತಂದೆಯ ಹೆಸರು ಬೇಡ, ಯಾಕಂದ್ರೆ ಇದರಲ್ಲಿ ಅವರದೇನೂ ಸಂಬಂಧ ಇಲ್ಲ—ಅಡ್ಡಹೆಸರು ಅನ್ ಎಂಪ್ಲಾಯಿಡ—ನೀನು ಬುದ್ಧಿಪೂರ್ವಕವಾಗಿ ಒಂದು ಬೇಗಿನಲ್ಲಿ ಮೃತ ಭವಾನಿಗೆ ಜೀವಕ್ಕೆ ಧಕ್ಕೆ ತರುವಂತಹ ಅಗರ ಜೀವ ಹೋಗುವುದೆಂದು ಗೊತ್ತು ಇರುವಂತಹ ದುಃಖಾಪತ ಮಾಡಿ—'

'ಮಾತಾಡತೀಯೊ ಏನು ಬಡಬಡಸತೀಯೊ?' ಎಂದು ಅಬ್ಬರಿಸುತ್ತ ಬೋಧಿ ಕುರ್ಚಿಯಲ್ಲಿ ಕುಳಿತನು.

ಮೋಹನ, 'ಮಾತಾಡತೀನಲ್ಲ?'

'ಹಾಗಾದರೆ ತಿಳಿಯುವಂಥಾ ಭಾಷೆಯೊಳಗ ಮಾತಾಡಲ್ಲ?'

'ಹಿಂದುಸ್ತಾನಕ್ಕೆ ಏಕರೂಪತೆಯನ್ನು ತಂದುಕೊಡುವ ಇಂಡಿಯನ್ ಪಿನಲ್ ಕೋಡಿನ ರಾಷ್ಟ್ರಭಾಷೆಯ ಶೈಲಿಯಲ್ಲಿ ನಾನು ಮಾತನಾಡುತ್ತಿರುವೆ.'

ಮೋಹನನ ಹುಚ್ಚಾಟಕ್ಕೆ ಬೋಧಿಗೂ ನಗೆ ಬಂದಿತು. ಮುಖದ ಕಳೆಯಿಂದ ಮನಸ್ಸಿಲ್ಲವೆಂದು ತೋರಿಸಲು ಯತ್ನಿಸುವಾಗಲೆ ಬೋಧಿಯ ಬಾಯಿ ನಗೆಯಿಂದ ಖೊಕ್ಕರಿಸಿತು.

'ಇನ್ನು ವಿಷಯಕ್ಕೆ ತೆರಳಲು ಅಡ್ಡಿ ಇಲ್ಲ' ಎಂದನು ಮೋಹನ. 'ಇದು ವರೆಗೆ ನೀನು ಸಿಟ್ಟಿನ ಭರದಲ್ಲಿದ್ದಿ. ಅದೇ ಸಿಟ್ಟಿನಲ್ಲಿ ಬೇಜಾರಾಗಿ 'ನಾನೇ ಕೊಲೆಯನ್ನು ಮಾಡಿದವ' ಎನಬಹುದಾಗಿತ್ತು ನೀನು. ಅದಕಾಗಿ ತಡೆದೆ.'

ಬೋಧಿಯು ಕುರ್ಚಿಯಲ್ಲಿ ಮಿಸುಕಾಡತೊಡಗಿದನು. ಅವನ ಮುಖದಲ್ಲೀಗ ನಿಜವಾಗಿಯೆ ಬೇಜಾರದ ಕಳೆ ಮೂಡಿತು.

'ಮೋಹನಾ, ಯಾರು ಕೊಲೆ ಮಾಡಿದರೂ ಅಷ್ಟೆ. ಯಾಕೆಂದರೆ, ಭವಾನಿಯದು ಸಹಜ ಮರಣ ಅಲ್ಲ; ಅಪಮರಣ ಎಂದು ಹಟ ಯಾಕೆ?'

'ಡಾಕ್ಟರರ ಅಭಿಪ್ರಾಯಕ್ಕಾಗಿ, ಪೋಲೀಸರ ತೃಪ್ತಿಗಾಗಿ.'

'ಭವಾನಿ ಆತ್ಮಹತ್ಯೆಯನ್ನು ಮಾಡಿಕೊಂಡಿಲ್ಲ, ಎಂಬುದು ಹೇಗೆ?'

'ವಾಚಕರು ಮೇಲಿನ ನಮ್ಮ ಉತ್ತರವನ್ನೆ ನೋಡಬೇಕು.'

'ಮೋಹನಾ, ಹುಡುಗಾಟ ಸಾಕು. ನಾನು ನಿಜವಾಗಿ ಹೇಳತೀನಿ. ಇದು ಕೊಲೆ ಇರಲಿ, ಇಲ್ಲದಿರಲಿ—ನನಗೂ ನಿನಗೂ ಇದರ ಗೊಡವೆ ಯಾಕೆ?'

'ಅಂದರೆ?'

'ಈ ವಿಷಯಕ್ಕೆ ಸಂಬಂಧಿಸಿದ್ದ ಬೇರೆ ಜನ ಇದೆ ಅಲ್ಲ?'

'ಏನಂದೆ?'

'ಭವಾನಿಯ ಮರಣದಿಂದ ಸುಖಪಡುವವರು ಇರುವಾಗ—'

'ಬೋಧಿ!' ಮೋಹನನು ಸಿಟ್ಟಿನಿಂದಲೆ ನುಡಿದನು. 'ಇದು ನಿನ್ನ ವಿನೋದ ಆಗಿದ್ದರೆ ಕೂಡಲೆ ತಡೆ ಅದನ್ನು. ವಿನೋದ ಅಲ್ಲದಿದ್ದರೆ, ಹೆಚ್ಚು ಎಚ್ಚರದಿಂದ ಮಾತಾಡು. ನಮ್ಮಷ್ಟಕ್ಕೆಯೆ ನಾವು ಮಾತಾಡಬೇಕು ಹೊರತು—ಇನ್ನೊಬ್ಬರ ಮೇಲೆ ಆರೋಪ ಹೊರಿಸೋದು ನಮ್ಮ ಕೆಲಸ ಅಲ್ಲ.'

'ನಾನು ಹೇಳೋದು ಆರೋಪ ಅಲ್ಲ, ಮೋಹನರಾಯರೆ! ಆದದ್ದು —ಕಣ್ಣಿನಿಂದ ಕಂಡದ್ದು!'

'ಬೋಧಿ, ಅಷ್ಟು ನಿನ್ನ ಹಟ ಇದ್ದರೆ ಮುಂಚೆ ನೀನು ಹೇಳೋದನ್ನ ಹೇಳು. ಆ ಮೇಲೆ ಮಾತ್ರ ನೀನೇ ಯಾಕೆ ದೋಷಿ ಅಲ್ಲ, ಅಂಬೋದನ್ನ—

'ಮೋಹನಾ, ಹುಚ್ಚ ನೀನು! ಅಥವಾ ಗೊತ್ತಿದ್ದೂ ಒಪ್ಪಿಕೊಳ್ಳುವ ಧೈರ್ಯ ಇಲ್ಲ ನಿನಗೆ. ನಾನು ಯಾಕೆ ದೋಷಿ ಅಲ್ಲ, ಅಂಬೋದನ್ನ ಬೇಕಾದರೆ ಹೇಳತೀನಿ ನಿನಗೆ. ಆದರೆ ಮುಂಚೆ ನಾ ಹೇಳೋದನ್ನ ಕೇಳು, ಆಮೇಲೆ ಹೆಚ್ಚಿನದನ್ನ ಹೇಳೋ ಅಗತ್ಯವೆ ಕಂಡು ಬರೋದಿಲ್ಲ.'

'ಆಗಲಿ. ನಿನ್ನದು ಅಷ್ಟೊಂದು ಧೈರ್ಯ ಇದ್ದರೆ ನೀನು ಸುತ್ತು ಸುತ್ತಾಡಿ ಹೇಳೋದೇ ಬೇಡ. ಯಾರು ಆರೋಪಿ ಅನ್ನುವೆ ಆ ಒಂದು ಹೆಸರನ್ನ ಹೇಳಿಬಿಡು.'

'ಒಂದು ಹೆಸರು!' ಎಂದು ಬೋಧಿ ಕೆಣಕುವ ದನಿಯಲ್ಲಿ ಕೇಳಿದನು.

'ಅಹುದು, ಒಂದು ಹೆಸರು. ಇಲ್ಲವಾದರೆ ನೀನು ಸುಮ್ಮಸುಮ್ಮನೆ ಸಂದಿಗ್ಧ ಆರೋಪ ಹೊರಿಸುವುದು ಬೇಡ.'

'ಓಹೋ! ಹಾಗೆ ಕೇಳುವೆಯಾ? ಹೆಸರು ಹೇಳಲಿಕ್ಕೆ ನಾನು ಹೆದರುವೆ ಅಂತ ತಿಳಿದೀಯಾ. ಆ ವಿಚಾರ ನಾನು ಹೇಳುವುದಿಲ್ಲ. ಭವಾನಿಯ ಕೊಲೆಗೆ ಕಾರಣವಾದದ್ದು ಒಂದು ಹೆಸರಲ್ಲ, ಎರಡು ಹೆಸರು—'

'ಏನಂದೆ?' ಮೋಹನನು ಹೆದರಿಸುವವನಂತೆ ಮುಖವನ್ನು ಮುಂದೆ ಚಾಚಿದನು.

ಬೋಧಿ ಗಟ್ಟಿಗನು. ಒಂದುಸಿರನ್ನು ಊದಲಿಲ್ಲ, ಕಣ್ಣೆವೆಯನ್ನು ಕದಲಿಸಲಿಲ್ಲ. ಮೋಹನನನ್ನೇ ತಿರುಗಿ ದಿಟ್ಟಿಸುತ್ತ ಅಸಂದಿಗ್ಧ ದನಿಯಲ್ಲಿ ಹೇಳತೊಡಗಿದನು. 'ಅಹುದು, ಒಂದು ಹೆಸರಲ್ಲ; ಎರಡು ಹೆಸರು. ಭವಾನಿಯ ಕೊಲೆಯನ್ನು ಮಾಡಿದವರು ಒಬ್ಬರಲ್ಲ, ಇಬ್ಬರು. ಸದ್ಯಕ್ಕೆ ಈ ಕೋಣೆಯಲ್ಲಿ ಇಲ್ಲದ ಇಬ್ಬರು——'

'ಅವರು ಇಲ್ಲಿ ಇಲ್ಲವೆಂದೆ ನಿನಗೆ ಹೇಳಲು ಅಷ್ಟು ಧೈರ್ಯವಲ್ಲವೆ?'

ಮೋಹನನ ತಿರಸ್ಕಾರಕ್ಕೆ ಬೋಧಿ ಹಿಂಜರಿಯಲಿಲ್ಲ. 'ಅವರೂ ಬರಲಿ, ಮಿಕ್ಕವರೂ ಬರಲಿ, ಕೋರ್ಟನ್ನೆ ಇಲ್ಲಿ ಹೂಡಲಿ. ಯಾವುದಕ್ಕೂ ಹೆದರದೆ ನಾನು ಸಾರಿ, ಕೂಗಿ ಹೇಳುವೆ—ಭವಾನಿಯನ್ನು ಕೊಂದವರು ಅನಂತ ಮತ್ತು ಇಂದುಮತಿ ಎಂದು!'

ಮೋಹನನು ಒಂದೆರಡು ನಿಮಿಷ ಅವಾಕ್ಕಾದನು. ಕೇವಲ ಅವರಿಬ್ಬರ ಮೇಲೆ ಸಂಶಯಪಟ್ಟಿದ್ದರೆ ಮೋಹನನಿಗೆ ಏನೂ ಎನಿಸುತ್ತಿರಲಿಲ್ಲ. ಯಾಕೆಂದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ತಾವೆಲ್ಲರೂ ಸಂಶಯಕ್ಕೆ ಗುರಿಯಾಗಬೇಕಾಗುವುದು, ಎಂಬುದನ್ನು ಅವನು ಚೆನ್ನಾಗಿ ಅರಿತಿದ್ದನು. ಆದರೆ ಬೋಧಿಯು ಅಂತಹ ವಿಚಾರದಿಂದ ಹೇಳಿರಲಿಲ್ಲವೆಂಬುದು ಮೋಹನನಿಗೆ ಸ್ಪಷ್ಟವಾಯಿತು. ಅದಕ್ಕಾಗಿ ಅವನು ಚಕಿತನಾದನು. ಬೋಧಿಯ ದನಿಯಲ್ಲಿ ನಿಶ್ಚಯಾತ್ಮಕತೆ ಇದ್ದಿತು. ಅವನ ಮುಖದಲ್ಲಿ ಕಳೆಯಿದ್ದಿತು. ಅವನು ತಾನು ಹೇಳುವುದು ಸುಳ್ಳಲ್ಲ, ಸಂಶಯವಲ್ಲ, ಸಂಭವಿಸಿದ ಸಂಗತಿ ಎನುವಂತೆ ಬೋಧಿಯ ಸ್ವರವಿದ್ದಿತು. ಮರುಗಳಿಗೆಯಲ್ಲಿ ಮೋಹನನಿಗೆ ಅಧೈರ್ಯ ಉಂಟಾಯಿತು, ಬೋಧಿಯ ಸಾಕ್ಷ್ಯ ನಿಜವಿರಬಹುದೆ, ಎಂದು. ಒಂದು

ಗಳಿಗೆ ಮಾತ್ರ. ಕೂಡಲೆ ಮೋಹನನು ಚೇತರಿಸಿಕೊಂಡನು. ಬೋಧಿಯ ಸ್ವಭಾವ ಗೊತ್ತಿಲ್ಲವೆ ತನಗೆ ? ವಿದ್ಯಾರ್ಥಿಯಾದಾಗಿನಿಂದ ಬೋಧಿಗೆ ತನ್ನ ಬುದ್ಧಿಗಾಗಿ ಹೆಮ್ಮೆ ಇದ್ದಿತು. ತನಗೆ ತಿಳಿಯದ್ದು ಯಾವದೂ ಇಲ್ಲ. ತನಗೆ ತಿಳಿಯದಿದ್ದರೆ ಆ ಸಂಗತಿ ಮತ್ತಾರಿಗೂ ತಿಳಿಯುವುದೆ ಶಕ್ಯವಿಲ್ಲ, ಎಂಬ ಹೆಮ್ಮೆ ಬೋಧಿಗೆ. ಆ ಹೆಮ್ಮೆಗೆ ಕಾರಣವಿದ್ದಿಲ್ಲ ಎಂತಲ್ಲ. ಅಭ್ಯಾಸದಲ್ಲಾಗಲಿ ಪರೀಕ್ಷೆಯಲ್ಲಾಗಲಿ ಬೋಧಿಯ ನಂಬರು ಯಾವಾಗಲೂ ಮೇಲೆ. ನಿಜವಿದ್ದರೂ ಬೋಧಿ ಸರ್ವಜ್ಞನೆಂದು ಜಗತ್ತು ಒಪ್ಪುವುದು ಹೇಗೆ ? ಹಾಗೆ ಕೇಳಿದರೆ ಅಂತಹ ಬುದ್ಧಿ ಇದ್ದಾಗಲೂ ಬೋಧಿ ತನ್ನ ಸಮಾಜಕ್ಕೆ ಉಪಯುಕ್ತನಾಗಿರಲಿಲ್ಲ, ಅವನಿಗೆ ಯಾವ ನೌಕರಿಯೂ ಸಿಕ್ಕಿರಲಿಲ್ಲ. ಇದಕಾಗಿ ಬೋಧಿಯ ಅಸಹನೆ—ಅಸಂತೋಷಗಳು ಇನ್ನಿಷ್ಟು ಹೆಚ್ಚಿದ್ದುವು. ಇಂತಹ ಬೋಧಿಯ ಮಾತಿಗಾಗಿ, ಬೋಧಿ ಇಂತಹನೆಂದು ತನಗೆ ಗೊತ್ತಿರುವಾಗ ನಂಬಿ ಪೆಚ್ಚಾಗುವುದೇಕೆ—ಎಂಬ ವಿಚಾರದಿಂದ ಮೋಹನನು ಚೇತರಿಸಿದ್ದು.

'ಬೋಧಿ, ನೀನು ಇನ್ನೂ ನಾಯಿಯ ಬಾಲ! ಗೊತ್ತಿಲ್ಲದಿದ್ದರೂ ಗೊತ್ತಿದೆ ಎಂದು ಸಾಧಿಸುವ ನಿನ್ನ ಹಟ....' 'ಮೋಹನಾ, ಬುದ್ಧಿ ಇಲ್ಲದ ಜೀವನಾ, ನನ್ನ ಮಾತನ್ನಾದರೂ ಮೊದಲು ಪೂರ್ತಿಯಾಗಿ ಕೇಳಿಕೊ. ಇನ್ನೊಬ್ಬರಿಗೆ ಏನೂ ಗೊತ್ತಿಲ್ಲ, ಎಂಬ ಹುಡುಗಬುದ್ಧಿಯು ನಿನಗೆ ಮಾತಿನ ಅವಸರ ಬಹಳ; ಅದಕಾಗಿ ವಿಚಾರಕ್ಕೆ ಅವಕಾಶ ಕಡಿಮೆ. ನನಗೆ ಯಾವುದು ಗೊತ್ತಿಲ್ಲ ? ಇಷ್ಟು ನಿನ್ನ ಹಟ ಇದ್ದರೆ ಎಲ್ಲವನ್ನೂ ಬಿಚ್ಚಿಯೆ ಹೇಳುವೆ, ಮೊದಲಿನಿಂದಲೂ ಹೇಳುವೆ. ನಿನಗೆ ಗೊತ್ತಿರಲಾಗದ ಒಂದು ಮುಖ್ಯ ಮಾತಿನಿಂದಲೆ ಪ್ರಾರಂಭಿಸುವೆ. ನೋಡಿಕೊ ನಿನಗೆ ಗೊತ್ತಿದೆ ಏನು ? ತಡೆ. ಯಾವ ಸಂಗತಿ ಎನ್ನುವೆ ? ನಿನಗೆ ಎಂದಿನಿಂದಲೊ ಗೊತ್ತಿದೆ. ಅನಂತ ಮತ್ತು ಇಂದುಮತಿ ಇಬ್ಬರೂ ಸಂಚುಗಾರರು— ತಡೆ — ಇಬ್ಬರೂ ಪ್ರೇಮದ ಸಂಚುಗಾರರು. ಇತ್ತಿತ್ತಲಾಗಿ ಅಲ್ಲ, ಎಂದಿನಿಂದಲೂ. ಭವಾನಿ ಇಂದುಮತಿಯರ ಸಂಬಂಧವಿದ್ದಾಗ ಕೂಡ ಇವರು ಪ್ರಣಯಿಗಳು. ನಿನಗೆ ಗೊತ್ತಿದೆಯೆ ? ಗೊತ್ತಿದ್ದಿತೆ ?'

ತನ್ನ ಪ್ರಶ್ನೆಗೆ ಮೋಹನನು ಉತ್ತರ ಕೊಡಬಲ್ಲನೆಂಬ ವಿಚಾರ ಬೋಧಿಗಿರಲಿಲ್ಲ. ಮೋಹನನಾದರೂ ಬೋಧಿಗೆ ಸಂಶಯ ಬಾರದಂತೆ ತಟಸ್ಥನಂ

ತೆಯೆ ಕೇಳತೊಡಗಿದನು. ಒಂದೇ ಒಂದು ಮಾತನ್ನು ಕೇಳಬೇಕೆಂಬ
ಕುತೂಹಲ ಮೋಹನನಿಗಿದ್ದಿತು. ಆದರೆ ಈ ರಭಸಕ್ಕೆ ತಡೆ ಹಾಕಿದರೆ
ಬೋಧಿಯು ಹೇಳುವುದನ್ನು ಮರೆಯಬಹುದೆಂಬ ವಿಚಾರದಿಂದ ಮೋಹ
ನನು ತನ್ನ ಕುತೂಹಲವನ್ನೆ ತಡೆದನು. ಮೋಹನನು ಸುಮ್ಮನಿದ್ದುದನ್ನು
ಕಂಡು ಬೋಧಿಗೆ ತಾನು ಗೆದ್ದೆನೆಂಬಂತಹ ಹೆಮ್ಮೆಯು ಕಳೆಮಾಡಿತು.
' ನಿನಗೆ ಗೊತ್ತಿದ್ದಿಲ್ಲವೆ? ಅಂ? ' ಎಂದು ಮತ್ತೊಮ್ಮೆ ಕೇಳಿದನು. ಮೋಹ
ನನು ಈಗಲೂ ಸ್ತಬ್ಧ, ನಿಶ್ಶಬ್ದ. ಬೋಧಿಯ ಮುಖ ಅರಳಿತು. ಮುಖದಲ್ಲಿ
ಮುಗುಳ್ನಗೆ ಅರಳಿತು. ಒಂದು ಕಡೆ ಭವಾನಿಯೊಡನೆ ಸಂಬಂಧವನ್ನಿಟ್ಟ
ಇಂದುಮತಿ ಇನ್ನೊಂದು ಕಡೆ ಅನಂತನನ್ನೂ ಪ್ರೀತಿಸುತ್ತಿದ್ದಳು. ಅದಕಾ
ಗಿಯೆ ಇವರಿಬ್ಬರೂ ಸಂಜುಗಾರರು....ತಡೆ..ನಾನು ಬರಿಯ ಕಲ್ಪನೆಯ
ಮಾತನ್ನು ಹೇಳುವೆನೆಂದು ತಿಳಿಯಬೇಡ. ಕಣ್ಣಾರೆ ಕಂಡುದನ್ನು ಸರಿ
ಯಾಗಿ ತಿಳಿದುಕೊಳ್ಳುವಾಗ ಮಾತ್ರ ಕಲ್ಪನೆಯನ್ನು ಉಪಯೋಗಿಸಬಹುದು.
ಆದರೆ ಆಗ ಅದು ಕಲ್ಪನೆ ಎನಿಸುವುದಿಲ್ಲ, ತರ್ಕ ಎನಿಸುವುದು. ಇಬ್ಬರನ್ನೂ
ಇಂದುಮತಿ ಪ್ರಿತಿಸುವುದು ಹೇಗೆ. ಹಾಗಿದ್ದರೆ ಇಬ್ಬರಲ್ಲಿ ಒಬ್ಬನ ಕೊಲೆ
ಮಾಡಲು ಅವಳು ಸಹಾಯಕಳಾದುದು ಹೇಗೆ, ಎಂದು ಕೇಳಬಹುದು.
ಅದಕ್ಕೆ ಉತ್ತರ, ಅವರವರ ಸ್ವಭಾವ, ಅವರವರು ಬೆಳೆದ ರೀತಿ. ಗತಿ ಇಲ್ಲದೆ
ಬೆಳೆದ ಇಂದುಮತಿಗೆ ಯಾವಾಗಲೂ ದುಡ್ಡಿಗಾಗಿ ಅಸೂಯೆ ಇದ್ದಿತು. ಅಸ
ಹನೆ ಇದ್ದಿತು, ಅದರಂತೆ ಅಭಿಲಾಷೆಯೂ ಇದ್ದಿತು. ಸುಶಿಕ್ಷಿತಳಾದಂತೆ
ಅವಳ ಈ ಭಾವನೆಗಳಿಗೆ ಪುಟವು ದೊರೆಯಿತು. ಈ ಭಾವನೆಗಳಿಗಾಗಿ ಅವಳು
ಭವಾನಿಯ ಮೋಹದಲ್ಲ ಸಿಕಿ ಬಿದ್ದಳು. ಆದರೆ ಭವಾನಿಯ ಸ್ವಭಾವವನ್ನು
ಅರಿತಂತೆ ಅವಳ ಮೋಹದ ಮುಸುಕು ಸರಿಯಿತು. ಮುಸುಕು ಸರಿದ ಆ
ಮೋಹ ಭವಾನಿಗಾಗಿ ಅಲ್ಲ, ಅವನ ದುಡ್ಡಿಗಾಗಿ ಎಂಬುದು ಸ್ಪಷ್ಟವಾ
ಯಿತು. ಇದರಿಂದ ಕ್ರಮೇಣ ಅವಳಲ್ಲಿ ಭವಾನಿಗಾಗಿ ದ್ವೇಷ ಬೆಳೆಯಿತು.
ಒಂದು ವೇಳೆ ಭವಾನಿಯು ಅವಳನ್ನು ಮದುವೆಯಾಗಲು ಒಪ್ಪಿದ್ದರೂ
ಅವಳು ಒಪ್ಪುತ್ತಿರಲಿಲ್ಲ, ಎಂದು ನನ್ನ ತರ್ಕ. ಅಥವಾ ತರ್ಕವಾದರೂ ಏಕೆ?
ಭವಾನಿ ಒಪ್ಪಿದ್ದನು. ಇತ್ತಿತ್ತಲಾಗಿ ಒತ್ತಾಯಪಡಿಸುತ್ತಲಿದ್ದನು. ಅದ
ಕಾಗಿಯೆ ಈ ಮನೆಯನ್ನು ಕೊಂಡುಕೊಂಡುದು, ಎಂಬುದು ನನಗೆಯೆ

ಗೊತ್ತಿದೆ. ಇಂದುಮತಿಯೆ ಒಂದಿಲ್ಲೊಂದು ನೆಪದಿಂದ ಆ ಮಾತನ್ನು ಮುಂದೆ ಹಾಕುತ್ತಿರುವಳೆಂದು ಅವನು ವಿಷಾದದಿಂದ, ವಿಶ್ವಾಸದಿಂದ ನನ್ನಲ್ಲಿ ಹೇಳಿಕೊಂಡಿದ್ದನು ! ಇಂದುಮತಿಗೆ ಅವನಲ್ಲಿ ಪ್ರೇಮವಿದ್ದರೆ ಮದುವೆಯ ಮಾತನ್ನು ಮುಂದೆ ಹಾಕುವುದು ಯಾಕೆ ? ಆದರೆ ಅವಳಲ್ಲಿ ಇಂತಹ ಪ್ರೇಮ ಇದ್ದಿರಲಿಲ್ಲವಾದರೆ? ಇದ್ದಿಲ್ಲ ಎಂದು ನನ್ನ ಮತ.

'ಇನ್ನು ಅನಂತನ ಮಾತು. ಅನಂತನಿಗೆ ದಿನದಿನಕ್ಕೆ ಇಂದುಮತಿಯ ಒಲವು ತನ್ನ ಕಡೆ ತಿರುಗುತ್ತಿರುವುದು ತಿಳಿದುಬಂದಿತು. ಆದರೇನು? ಪುಕ್ಕನವ. ಭವಾನಿಯನ್ನು ಎದುರಿಸಿ ಇಂದುಮತಿಯನ್ನು ವರಿಸುವ ಧೈರ್ಯ ಅವನಿಗಿರಲಿಲ್ಲ. ಅದನ್ನು ಕಂಡು ಇಂದುಮತಿಯು ಹೆಣ್ಣುತನಕೆ ಹುಟ್ಟುಗುಣವಾದ ಮೋಹಕಗಾರಿಕೆಯ ಜಾಲವನ್ನು ಪಸರಿಸಿದಳು. ಭವಾನಿಯಿಂದ ತನಗೆ ಅನಂತ, ಅಸಹ್ಯ ಯಾತನೆಗಳಾಗತೊಡಗಿವೆ, ಎಂಬ ಸೋಗಿನ ಸುದ್ದಿಯನ್ನು ಅನಂತನಿಗೆ ಮುಟ್ಟಿಸತೊಡಗಿದಳು. ಆಗ ಅನಂತನಲ್ಲಿ ಹೆಣ್ಣನ್ನು ಗಳಿಸಲು—ಸೃಷ್ಟಿ ಗಂಡಸಿಗೆ ಕೊಟ್ಟ—ಧೈರ್ಯ ಸಂಚರಿಸತೊಡಗಿತು. ಇಂದುಮತಿಯನ್ನು ಯಾತನೆಗಳಿಂದ ಉಳಿಸುವುದು, ತನ್ನನ್ನು ಪ್ರೀತಿಸುತ್ತಿರುವ ಇಂದುಮತಿಯನ್ನು ವಂಚಕನಿಂದ ಉಳಿಸುವುದು, ಪರಸ್ಪರ ಪ್ರೇಮವಿದ್ದವರು ವರಿಸುವುದು ನಿಸರ್ಗನ್ಯಾಯವಾದುದರಿಂದ ತಾನು ಇಂದುಮತಿಯನ್ನು ವರಿಸುವುದು ನ್ಯಾಯ, ಭವಾನಿಯ ನೀತಿ ಅನ್ಯಾಯ—ಎಂಬ ಮುಂತಾಗಿ ಪಶುಸಹಜವೃತ್ತಿಗೆ ಪ್ರೋತ್ಸಾಹ ದೊರೆಯಿತು. ಆದರೂ ಇದನ್ನು ಸಾಧಿಸುವುದು ಹೇಗೆ, ಸಾಧಿಸಲು ಮಾಡುವುದಾದರೂ ಏನು, ಎಂಬುದು ಅವನಿಗೆ ಹೊಳೆದಿರಲಿಲ್ಲ.

'ಇಂತಹ ವಿಷಯವನ್ನು ಇನ್ನೊಬ್ಬರಿಗೆ ಕೇಳುವ ಹಾಗೂ ಇಲ್ಲ. ಅದಕಾಗಿ ಅನಂತನು ಒಂದು ಯುಕ್ತಿಯನ್ನು ಹುಡುಕಿದನು. ಈ ವಿಷಯಕ್ಕೆ ಸಂಬಂಧಿಸಿದ ಕತೆಗಳನ್ನೋದುವುದು. ಹೊತ್ತು ಹೋಗದುದಕ್ಕೆ ನಾನು ಅವನಿಂದ ಕೆಲವು ಪುಸ್ತಕಗಳನ್ನು ತಂದು ಓದಿದ್ದೇನೆ. ಆ ಅನುಭವದಿಂದ ಹೇಳುತ್ತಲಿದ್ದೇನೆ. ಅನಂತನ ಹತ್ತಿರವಿದ್ದ ಪ್ರತಿಯೊಂದು ಪುಸ್ತಕದಲ್ಲೂ ಒಂದೇ ತರದ ಸಂನಿವೇಶವಿದೆ; ತನ್ನ ಪ್ರೀತಿಯ ಹುಡುಗಿಗಾಗಿ ಸಾಹಸವನ್ನು ಮಾಡುವುದು, ವಿಶೇಷವಾಗಿ ತನಗೆ ಅಡ್ಡಬರುವ ದುಷ್ಟನ ಕೊಲೆ

ಮಾಡುವುದು. ಕತೆಗಳನ್ನೋದಿ ಅನಂತನಿಗೆ ಧೈರ್ಯವಾಗಲಿ ಯುಕ್ತಿಯಾಗಲಿ ಹೊಳೆಯುತ್ತಿದ್ದಿತೊ ಇಲ್ಲವೊ ಹೇಳಲಾಗದು. ಆದರೆ ಅಷ್ಟರಲ್ಲಿ ಒಂದು ಸಂದರ್ಭ ಅನಂತನಿಗೆ ಅನುಕೂಲವಾಯಿತು. ಅದೆಂದರೆ ಭವಾನಿಯು ಈ ಮನೆಯನ್ನು ಕೊಂಡುಕೊಳ್ಳುವುದು. ಈ ಮನೆಗಾಗಿ ಎಲ್ಲರಲ್ಲೂ ಹಬ್ಬಿದ ಒಂದು ಅಪಕೀರ್ತಿ ಅನಂತನಿಗೂ ಗೊತ್ತಿದ್ದಿತು. ಇಷ್ಟೆ ಅಲ್ಲ, ಈ ಮನೆಯಲ್ಲಿ ಭೂತವಿದೆ, ಎಂಬ ಸಾರ್ವಜನಿಕ ನಂಬುಗೆಗಾಗಿ ಅವನಿಗೆ ಆನಂದವೆ ಆಯಿತು. ಯಾವುದಕ್ಕೆ ತನಗೆ ಧೈರ್ಯವಿರಲಿಲ್ಲವೊ ಆ ಮಾತು ಈ ಸಂದರ್ಭದಿಂದ ಸುಲಭವಾಗಬಹುದಾಯಿತು, ಸುರಕ್ಷಿತವೂ ಆಗಬಹುದಾಯಿತು. ಇಂತಹ ಮನೆಯಲ್ಲಿ ಭವಾನಿಗೆ ಏನಾದರೂ ಅಪಾಯವಾದರೆ ಯಾರ ಮೇಲೂ ಸಂಶಯ ಬರುವಂತಿಲ್ಲ, ಎಲ್ಲರೂ ಭೂತದ ಮೇಲೆಯೆ ಅದರ ಹೊಣೆಯನ್ನು ಹಾಕುವರು, ಎಂಬ ವಿಚಾರದಿಂದ ಅವನ ಧೈರ್ಯ ಇಮ್ಮಡಿಯಾಗಿರ ಬಹುದು. ಇಲ್ಲಿ ಬಂದಮೇಲೆ ಅವನ ವರ್ತನೆಯನ್ನು ನೋಡಬಹುದು. ದೆವ್ವದ ವಿಷಯವಾಗಿ ನಮಗೆ ಯಾರಿಗೂ ವಿಶ್ವಾಸವಾಗಲಿಲ್ಲದೆಂದು ಕಂಡು ಕೊನೆಗೆ ತಾನೆ ಕೆಲಹೊತ್ತು ಮಾಯವಾಗಿ ಮತ್ತೆ ಕಾಣಿಸಿಕೊಂಡನು. ! ಯಾಕೆ ? ಈ ಸಂಗತಿಯಿಂದಲಾದರೂ ನನ್ನೆಲ್ಲರಿಗೆ ಈ ಮನೆಯ ದೆವ್ವದಲ್ಲಿ ವಿಶ್ವಾಸ ಹುಟ್ಟಲಿ—ಎಂದು.

'ಮೋಹನಾ, ಇನ್ನೂ ಸವಿಸ್ತಾರವಾಗಿ ನಾನು ಹೇಳಬಹುದಾಗಿದೆ. ಆದರೆ ಮುಂದೆ ಮತ್ತೊಮ್ಮೆ ಇದನ್ನೆಲ್ಲ ಹೇಳುವ ಪ್ರಸಂಗ ನನಗೆ ತಪ್ಪುವು ದಿಲ್ಲವಾದ್ದರಿಂದ ನಿನಗೆ ಮುಖ್ಯ ಮಾತುಗಳನ್ನಷ್ಟೆ ಹೇಳಿಕೊಟ್ಟಿದ್ದೇನೆ. ಈಗ ಲಾದರೂ ನಿನ್ನ ಸಂಶಯ ಹೋಯಿತೆ ? ಬುದ್ಧಿ ಬಂದಿತೆ ? ಇಲ್ಲವಾದರೆ ನಾನು ಹೇಳುವ ಇನ್ನೂ ಬರಡು ಮಾತುಗಳನ್ನು ಹೊಂದಿಸಿ ನೋಡು. ಅನಂ ತನು ಹುಟ್ಟಿನಿಂದಲೂ ಹೆದರುಗುಳಿಯಲ್ಲವೆ ? ಅವರಲ್ಲಂತೂ ದೆವ್ವದ ಕತೆಗಳಿಗೆ ಪ್ರಾಣವನ್ನೆ ಬಿಡುವಂತಹ ಪುಕ್ಕನಲ್ಲವೆ ? ಇಂತಹನು—ತನಗೆ ಗೊತ್ತಿದ್ದು, ಇಡಿಯ ಊರಿಗೆ ಗೊತ್ತಿದ್ದು—ಈ ಮನೆಗೆ ಬಂದನು ಹೇಗೆ ? ಎಂದೂ ಇಲ್ಲದ ಧೈರ್ಯ ಇಂದು ಬಂದುದು ಹೇಗೆ ? ಧೈರ್ಯ ಬಂದುದಂತೂ ನಿಜ. ಹಾಗಿ ದ್ದರೆ ಅದಕ್ಕೆ ಅಂತಹ ಬಲವಾದ ಕಾರಣ ಇರಲೇಬೇಕಲ್ಲವೆ ? ಭವಾನಿಯನ್ನು ಕೊಲ್ಲುವುದೆ ಆ ಬಲವಾದ ಕಾರಣ, ಇಂದುಮತಿಯನ್ನು ಉಳಿಸಿ ಗಳಿಸಿ

ಕೊಳ್ಳುವುದೆ ಆ ಕಾರಣಕ್ಕೆ ಸ್ಫೂರ್ತಿ, ಎಂದು ಸ್ಪಷ್ಟವಿದೆ. ಇದಲ್ಲದೆ—ಆ ಕಾಗದದ ಚೂರುಗಳು! ಅದರಲ್ಲಿ ಕಾಣುವ ತುಣುಕು ತುಣುಕು ಶಬ್ದಗಳು! ಅನಂತನ ಹಸ್ತಾಕ್ಷರದಲ್ಲಿಯೆ ಇವೆಯಲ್ಲವೆ? ಆ ಕಾಗದಗಳನ್ನು ನಾಶಗೊಳಿಸಲು ಅನಂತನು ಯತ್ನಿಸಿರಲೇಬೇಕು. ಭವಾನಿಯು ಸಾಯುವ ಮುಷ್ಟಿಯಲ್ಲಿಯ ಕಾಗದಗಳನ್ನು ಕಸಿದುಕೊಳ್ಳಲು ಸುಲಭವಾಗದಿರಲು ಸಿಕ್ಕಷ್ಟನ್ನೆ ಸವರಿಕೊಂಡು ಓಡಿರಬೇಕು ಅವನು. ಇನ್ನೂ ನಿನಗೆ ಸಂಶಯವಿದ್ದರೆ ಇದುವರೆಗೆ ಹೇಳದ ಒಂದು ಮಾತನ್ನು ನಿನಗೆ ಹೇಳುವೆ. ಆ ರಾತ್ರಿ ನನ್ನ ಕೋಣೆಯ ಮೇಲಿದ್ದ ಭವಾನಿಯ ಕೋಣೆಯಲ್ಲಿ ಗುದ್ದಾಡುತ್ತಿರುವ ಸದ್ದು ನನಗೆ ಕೇಳಿಸಿತು!

'ಸಾಕಲ್ಲವೆ? ಇದೆಲ್ಲ ನನಗೆ ಗೊತ್ತಿದೆ ಎಂದೇ ನಿನ್ನ ಹುಚ್ಚುತನವೂ ಸಾಕು ಎನುವೆ. ನೀನು ಪೋಲೀಸರನ್ನು ಕರೆಯಬೇಕೆನುವಾಗ, ಮನೆ ತುಂಬ ಶೋಧಮಾಡಬೇಕೆನುವಾಗ ನಾನು ನಿನ್ನನ್ನು ತಡೆದದ್ದು ಅದಕಾಗಿಯೆ. ಎಷ್ಟಾದರೂ ಇಂದುಮತಿ–ಅನಂತ ಇಬ್ಬರೂ ನಮ್ಮ ಗೆಳೆಯರು. ಅವರಿಗೆ ಶಿಕ್ಷೆಯಾಗಬೇಕೆಂಬ ಅವಸರ ನಮಗೆ ಯಾಕೆ? ಅದಕೆ ಅವಕಾಶವನ್ನು ನಾವಾಗಿಯೆ ಕಲ್ಪಿಸಿಕೊಡುವುದಾದರೂ ಯಾಕೆ? ಆದರೆ ಈಗ ನಾನು ಇಷ್ಟೆಲ್ಲ ಬಿಚ್ಚಿ ಹೇಳಿದ್ದೇನೆ. ಇನ್ನು ಇದನ್ನು ತಡೆಯುವ ಇಚ್ಛೆಯೂ ನನಗಿಲ್ಲ, ಹೇಳುವ ಉತ್ಸಾಹವಂತೂ ಇಲ್ಲವೆ ಇಲ್ಲ. ಅದಕಾಗಿ ಸಮಯ ಸಾಧಿಸಿ ನಾನೂ ಈ ಮನೆಯಿಂದ ಜಾರಲು ಯತ್ನಿಸುವೆ.'

ಬೋಧಿಯು ತನ್ನ ಮಾತನ್ನು ತಡೆದು ಉತ್ಸುಕತೆಯಿಂದ ಮೋಹನನನ್ನು ದಿಟ್ಟಿಸಿದನು. ಬೋಧಿಯ ಮುಖದಲ್ಲಿ ಆಯಾಸದ ಕಳೆ ಇದ್ದಿತು. ಹಣೆಗೆ ಬೆವರು ಸುರಿಯುತ್ತಿದ್ದಿತು. ಮೋಹನನು ಕೆಲಹೊತ್ತು ಮಾತನಾಡದೆಯೆ ಇರಲು ಬೋಧಿಯ ಮುಖವು ಅಸಹನೆಯಿಂದ ಕಳೆಗಟ್ಟಿತು. ಅದನ್ನು ನೋಡಿ ಮೋಹನನಿಗೆ ಕನಿಕರ ಬಂದಿತೇನೊ! 'ಬೋಧಿ, ಇನ್ನು ನಮ್ಮ ಸಂಜೆಯ ಊಟವನ್ನು ಮುಗಿಸಿಕೊಳ್ಳುವುದು' ಎಂದನು. ಬೋಧಿಗೆ ಸಮಾಧಾನವಾದಂತಿರಲಿಲ್ಲ. 'ಮೋಹನಾ, ನಾನು ಹೇಳಿದ್ದಕ್ಕೆ ನಿನ್ನ ಅಭಿಪ್ರಾಯವೇನು?' ಎಂದು ಕೇಳಿದನು.

'ನೀನು ಇನ್ನೂ ಏನೂ ಹೇಳಿಲ್ಲವಲ್ಲ!'

'ಏನೂ ಹೇಳಿಲ್ಲ? ಇದುವರೆಗೆ—ದಣಿದು ಬೆವರು ಸುರಿಸಂತೆ—ನಾನು ಮಾತನಾಡುವಾಗ ನೀನು ನಿದ್ರೆಹೋಗುತ್ತಿದ್ದೆಯೇನು?'

'ಇಲ್ಲ'

'ಹಾಗಾದರೆ—'

'ಆದರೆ ಆ ಮಾತಿನ ಸಂಬಂಧವೆ ನನಗಿಲ್ಲ.'

'ಅಂದರೆ?'

'ಅಂದರೇನು? ಪ್ರತಿಯೊಬ್ಬನು ತನ್ನ ವಿಷಯವಾಗಿ ಹೇಳತಕ್ಕದ್ದು, ಎಂಬ ಕರಾರಿನ ಮೇಲೆ ನಾವೀ ತಮಾಷೆಯನ್ನು ನಡೆಸಿಲ್ಲವೆ?'

'ತಮಾಷೆ? ಮೋಹನಾ—ಇದು ತಮಾಷೆ ಎಂದು ತಿಳಿದಿದ್ದರೆ ಇಷ್ಟು ಶ್ರಮದಿಂದ ನಾನು ಹೇಳುತ್ತಿರಲೇ ಇಲ್ಲ'

'ಬೋಧಿ, ಏನಾದರೊಂದು ಹಟಬೇಡ. ಪೋಲೀಸರಿಗೆ ಈ ಮಾತನ್ನು ಹೇಳಲಾಗದು, ಆದಕಾಗಿ ನೀನು ಈ ಮನೆಯಿಂದ ಜಾರುವೆ, ಎಂದು ನೀನೇ ಹೇಳಲಿಲ್ಲವೆ? ಅಧಿಕಾರಿಗಳಿಗೆ ಹೇಳದಂತಿದ್ದರೆ ಅದು ಒರಿಯ ತಮಾಷೆಯೆ ಅಲ್ಲವೆ?'

ಬೋಧಿಯು ಕೊಂಚ ಕನಲಿದನು, ಅಸಹನೆಯ ದನಿಯಿಂದಲೆ ನುಡಿದನು:

'ಮೋಹನಾ, ಅಧಿಕಾರಿಗಳಿಗೆ ಹೇಳಲಾಗದು, ಎಂದು ನಾನೆಲ್ಲಿ ಹೇಳಿರುವೆ? ನಾನಾಗಿಯೆ ಹೇಳಲಾರೆ ಎಂದೆ. ಆದರೆ ನೀನು ಈ ಮಾತನ್ನು ಪೋಲೀಸರಿಗೆ ಹೇಳಿದರೆ ನನ್ನದೇನೂ ಅಡ್ಡಿ ಇಲ್ಲ..ಅಲ್ಲ—ನೀನು ಹೇಳಬೇಕೆಂದೇ ನನ್ನ —'

'ಆದರೆ ನನ್ನದೇನೂ ಸಂಬಂಧವಿಲ್ಲ ಎಂದೆನಲ್ಲ..ತಡೆ..ಪ್ರತಿಯೊಬ್ಬನೂ ತಾನೂ ನಿರ್ದೋಷಿ, ಎಂಬುದನ್ನು ನನಗೆ ಹೇಳಬೇಕೆಂಬ ಕರಾರು ಇದ್ದಿಲ್ಲವೆ?'

'ಅಹುದು—'

'ನೀನು ನಿನ್ನ ವಿಷಯವಾಗಿ ಹೇಳಲೇ ಇಲ್ಲ'

'ಹೇಳಲಿಲ್ಲವೆ? ದೋಷಿ ಯಾರು, ಎಂಬುದನ್ನು ತಿಳುಹಿಸಿದ ಮೇಲೆ ನಾನು ನಿರ್ದೋಷಿ ಎಂದಂತಾಗಲಿಲ್ಲವೆ?'

ಮೋಹನನು ಮುಗುಳ್ನಗೆಯಿಂದ ತಲೆಯಲ್ಲಾಡಿಸಿದನು.

'ಬೋಧಿ, ನನಗೂ ಮಾತುಗಾರಿಗೆ ಗೊತ್ತಿದೆ. ಬೇರೆಯವರು ದೋಷಿ, ಎಂದರೆ ನೀನು ನಿರ್ದೋಷಿ ಎಂದಂತಾಗಲಿಲ್ಲ. ನೀನೂ ಅವನ ಸಂಚಿನಲ್ಲಿ ಸೇರಿರಬಾರದೇಕೆ?— ತಡೆಯೊ!— ಅವರ ಸಂಚಿನಲ್ಲಿ ಸೇರಿದ್ದ ರಿಂದಲೇ ನಿನಗೆ ಇಷ್ಟೆಲ್ಲ ಗೊತ್ತಿದೆ, ಎಂದು ನಾನು ಅಭಿಪ್ರಾಯ ಪಟ್ಟರೆ ತಪ್ಪೇನು?'

ಮೋಹನನು ಉತ್ತರಕ್ಕಾಗಿ ಬೋಧಿಯ ಮುಖವನ್ನು ನೋಡತೊಡ ಗಿದನು. ಆದರೆ ಬೋಧಿಯಿಂದ ಉತ್ತರವಿಲ್ಲ, ಅವನ ಸಿಟ್ಟು ಮಾತ್ರ ಕುದಿ ಯುತ್ತಿರುವ ಲಕ್ಷಣ ಕಂಡುಬಂದಿತು.

'ಬೋಧಿ, ಸಿಟ್ಟಿಗೇಳಬೇಡ ಅದಕೇ ಹೇಳಲಿಲ್ಲವೆ—ಕೊತ್ತುಗಳೆ ಯಲು ಹೂಡಿದ ತಮಾಷೆ ಇದೆಂದು? ನಿನ್ನ ಸ್ವಭಾವಕ್ಕಾಗಿ ನಿನ್ನನ್ನು ಕೆಣಕ ಬೇಕೆಂದು ಹಾಗೆ ಮಾತನಾಡಿದೆ, ಅಲ್ಲೊ—ಇಂದಿನ ವರೆಗೆ ಭರಮನೆ ಅಪ ರಾಧಿ, ಎಂದು ಹಟದಿಂದ ಸಾಧಿಸುತ್ತ ಬಂದಿರುವಿ. ಈಗ ಇನ್ನೊಬ್ಬರು ಅಪ ರಾಧಿ ಎಂದು ಅಷ್ಟೆ ಹಟದಿಂದ ಸಾಧಿಸುತ್ತಿರುವಿ. ಅದಕ್ಕೆ ಹೇಳುವೆ. ಯಾರು ಅಪರಾಧಿ, ಎಂಬ ಮಾತಾಗಲಿ ನಿರ್ಣಯವಾಗಲಿ ನಮಗೆ ಯಾಕೆ? ಅದು ಪೋಲೀಸರ ಕರ್ತವ್ಯ; ನಾವು ಈ ಆಟವನ್ನು ಹೂಡಿದ್ದು ನಂನಮ್ಮ ಮನಸ್ಸಿನ ಸಮಾಧಾನಕ್ಕಾಗಿ. ಅದಕಾಗಿಯೆ ನಂನಮ್ಮ ವಿಷಯವನ್ನೆ ಹೇಳಬೇಕಾ ದುದು ನಾವು. ಇದುವರೆಗೆ ನೀನು ಹೇಳಿದ್ದನ್ನು ನಾನು ಕೇಳಿಲ್ಲ, ಅದು ನನ್ನ ಸ್ಮರಣೆಯಲ್ಲೂ ಇಲ್ಲ, ಎಂದು ತಿಳಿ; ಇನ್ನು ನಿನ್ನ ವಿಷಯವನ್ನು ಹೇಳು.'

'ನನ್ನ ವಿಷಯ? ಅಂದರೆ ಏನು ಹೇಳಲಿ?'

'ನೀನು ನಿರ್ದೋಷಿ, ಎಂದು ಸಿದ್ಧಮಾಡಲು ಅವಶ್ಯವಿದ್ದ—'

'ನಾನು ನಿರ್ದೋಷಿ! ಮೋಹನಾ, ಈಗ ಮಾತ್ರ ನೀನು ನಿಜವಾ ಗಿಯೆ ತಮಾಷೆಯನ್ನು ನಡೆಸಿರುವೆ. ಅಲ್ಲ–ನಾನು ದೋಷಿ, ಎಂದು ಸಂಶಯ ವಿದೆಯೆ ನಿನಗೆ?'

'ಇಲ್ಲ'

'ಹಾಗಾದರೆ?'

'ಛೆ! ಬೋಧಿ, ಇದೇನು ಹುಚ್ಚನಂತೆ ನಟಿಸುತ್ತಿರುವೆ? ಅನಂತನೂ ಇಂದುಮತಿಯೂ ತಂತಮ್ಮ ವಿಷಯವಾಗಿ ಆ ಮಾತನ್ನು ಹೇಳಿದ್ದಾರೆ. ಊಟವಾದ ಮೇಲೆ ನನ್ನ ವಿಷಯವಾಗಿ ನಾನೂ ಹೇಳುವವನಿದ್ದೇನೆ. ನಿನಗೇನು ಒತ್ತಾಯವಿಲ್ಲ. ಗೊತ್ತುಮಾಡಿದ ಆಟವನ್ನು ಪೂರ್ತಿಗೊಳಿಸುವುದಾದರೆ ನೀನು ಹೇಳಬಹುದು. ನಿನ್ನ ವಿರೋಧ ಇಲ್ಲವೆ ಹೆದರಿಕೆ— '

'ಹುಚ್ಚು!' ಎನುತ್ತ ಬೋಧಿ ಬಾಯಿಹಾಕಿ ನುಡಿದನು. 'ವಿರೋಧವೂ ಇಲ್ಲ. ಹೆದರಿಕೆಯೂ ಇಲ್ಲ. ಆದರೆ ನಾನು ಹಾಗೆ ಹೇಳುವುದು ಅಪ್ರಸ್ತುತ ಎಂದು—ತಡೆಯೊ! ಕೂದಲು ಉದುರುವಂತೆ ತಲೆಯನ್ನು ಜಾಡಿಸಬೇಡ!— ನಿನ್ನದು ಅಷ್ಟು ಹಟವಿದ್ದರೆ ಬೇಕಾದ್ದನ್ನು— '

'— ಬೇಕಾದ್ದನ್ನು —

'— ಅಂದರೆ ನನ್ನ ವಿಷಯವಾಗಿಯೆ ನಿನಗೆ ಯಾವುದು ಬೇಕು ಅದನ್ನು—ಆಯಿತಿಲ್ಲೊ?— ಹೇಳುವೆ. ನಿನಗೆ ಮುಖ್ಯವಾಗಿ ಬೇಕಾದದ್ದೇನು? ನಾನು ನಿರ್ದೋಷಿ, ಎಂಬುದಕ್ಕೆ ಆಧಾರಗಳಲ್ಲವೆ? ಆಗಲಿ ಒಂದೊಂದಾಗಿ ಹೇಳುವೆ. ಎಲ್ಲವನ್ನೂ ಹೇಳುವೆ.

'ಮೋಹನಾ, ಒಂದು ಮಾತನ್ನು ನಾನು ಮೊದಲು ಹೇಳುವೆ. ಯಾಕೆಂದರೆ ಅದು ನನ್ನ ದೃಷ್ಟಿಯಿಂದ, ಇಷ್ಟೇಕೆ—ಮಾನಸಶಾಸ್ತ್ರದ ದೃಷ್ಟಿಯಿಂದ ಅತ್ಯಂತ ಮಹತ್ತ್ವದ್ದಿದೆ. ಭವಾನಿಯ ಕೊಲೆಗೆ ನಾನು ಕಾರಣನಲ್ಲ, ಕಾರಣ ಆಗಲಾರೆ. ಯಾಕೆಂದರೆ ಕೊಲೆ ಮಾಡುವಂತಹ ವೃತ್ತಿಯೆ ನನ್ನ ಸ್ವಭಾವಕ್ಕಿಲ್ಲ. ಕೊಲೆ ಮಾಡುವುದು ಎರಡು ತರದ ಸ್ವಭಾವದವರಿಗೆ ಶಕ್ಯವಿದೆ. ಒಂದು, ಬುದ್ಧಿಶಕ್ತಿ ಕಡಿಮೆ ಇದ್ದವರು; ಇನ್ನೊಂದು ದೇಹಶಕ್ತಿ ಕಡಿಮೆ ಇದ್ದವರು. ಆತ್ಮಸಂರಕ್ಷಣೆಯು ಪ್ರಾಣಿಯ ಸಹಜ ಸ್ವಭಾವವಾಗಿದೆ. ಆ ಆತ್ಮಸಂರಕ್ಷಣೆಗಾಗಿ ಎರಡು ಮುಖ್ಯಸಾಧನಗಳೆಂದರೆ ಒಂದು ಬುದ್ಧಿಶಕ್ತಿ, ಒಂದು ದೇಹಶಕ್ತಿ. ಎರಡರಲ್ಲಿ ಯಾವುದೊಂದು ಶಕ್ತಿ ಇದ್ದರೂ ಸಾಕು, ಪ್ರಾಣಿಯು ತನ್ನನ್ನು ತಾನು ರಕ್ಷಿಸಬಲ್ಲದು, ರಕ್ಷಣೆಯನ್ನು ಸಾಧಿಸಬಲ್ಲದು. ಆದೇ ಎರಡೂ ಶಕ್ತಿ ಸಾಕಷ್ಟು ಇಲ್ಲದಿದ್ದರೆ ಬುದ್ಧಿಗೆ ಉಪಾಯ ಹೊಳೆಯದಂತಾಗಿ ದೇಹಕ್ಕೆ ಅನ್ನ ದೊರಕದಂತಾಗಿ

ದಂತಾಗಿ ಹೇಡಿತನ—ಮೋಸತನ ಮೊದಲಾದವುಗಳಿಂದ ಶಕ್ಯವಾದ ಕೊಲೆ-ಕಳವುಗಳಿಗೆ ಪ್ರಾಣಿಯು ಒಲಿಯುವುದು. ಈ ದೃಷ್ಟಿಯಿಂದ ಕೊಲೆಗೆ ನಾನು ಎಂದೂ ಕಾರಣನಾಗಲಾರೆ. ಬುದ್ಧಿಶಕ್ತಿ ಹೆಚ್ಚಾಗಿದೆ, ದೇಹಶಕ್ತಿ ಹೆಚ್ಚಾಗಿದೆ. ದೇಹಶಕ್ತಿ ಸಾಕಷ್ಟಿದೆ ನನಗೆ. ನಿನಗೆ ಆಧುನಿಕ ಮಾನಸ ಶಾಸ್ತ್ರದ ಪರಿಚಯು ಸ್ವಲ್ಪವಾದರೂ ಇದ್ದರೆ ನನಗೆ ಇಂತಹ ಪ್ರಶ್ನೆಯನ್ನೇ ನೀನು ಕೇಳುತ್ತಿರಲಿಲ್ಲ.

'ಎರಡನೆಯ ಮಾತು. ಭವಾನಿಯ ದೃಷ್ಟಿಯಿಂದ ನೋಡಿದರೂ ನಾನು ಅವನ ಅಪಮರಣಕ್ಕೆ ಕಾರಣನಾಗಲಾರೆ. ಭವಾನಿಯು ಸತ್ತುದು ಹೇಗೆ? ಅವನ ಮುಖದ ಮೇಲೆ ಹೆದರಿಕೆಯ ಕಳೆ ಸ್ಪಷ್ಟವಾಗಿ ಕಂಡುಬರುತ್ತಿದ್ದಿತು. ಅರ್ಥಾತ್—ಸಾಯುವ ಮುಂಚೆ ಯಾವುದಕ್ಕೊ ಅವನು ಅತ್ಯಂತವಾಗಿ ಹೆದರಿದ್ದನೆಂಬುದು ಸ್ಪಷ್ಟವಿದೆ. ಯಾವುದಕ್ಕೆ? ಯಾವುದಕ್ಕೆ ಹೆದರಿದರೂ ನನ್ನನ್ನು ನೋಡಿ ಹೆದರಲಾರನು, ಎಂದು ಹೇಳಬಹುದಲ್ಲವೆ? ನನ್ನ ಪರಿಚಯವಿದ್ದಿತು. ಹೆದರಿಕೆಯನ್ನು ಹುಟ್ಟಿಸುವಂತಹ ಮುಖಲಕ್ಷಣವಾಗಲಿ ದೇಹರೂಪವಾಗಲಿ ನನ್ನದಿಲ್ಲ.

'ಮೂರನೆಯದಾಗಿ ನಾನೂ ನಿನ್ನಂತೆಯೆ ಇರುಳುಗಾವಲಿನಲ್ಲಿ ತೊಡಗಿದವ. ಈ ಹಾಳು ದೆವ್ವದ ನಿಮಿತ್ತವಾಗಿ ನಮ್ಮನ್ನು ಸುತ್ತುಗಟ್ಟಿದ ಆ ಭಯ-ಸಂಶಯಗಳ ವಾತಾವರಣದಲ್ಲಿ ನಾವು ಕಾವಲಿನ ಕೆಲಸದಲ್ಲಿಯೆ ಮಗ್ನರಾಗಿದ್ದೆವು. ರಾತ್ರಿಯನ್ನೆಲ್ಲ ಕುರ್ಚಿಯಲ್ಲಿ ತೂಕಡಿಸುತ್ತ ಕಳೆದುದು ನಿನಗೆ ಕೂಡ ಗೊತ್ತಿದೆ.'

ಬೋಧಿಯು ಕುರ್ಚಿಯಿಂದೆದ್ದನು. ಇಷ್ಟಕ್ಕೆ ಈ ಮಾತು ಸಾಕು. ಇನ್ನು ಹೆಚ್ಚಿಗೆ ಏನೂ ಹೇಳುವದಿಲ್ಲ, ಎಂಬ ನಿಶ್ಚಯದ ಮುಖಮುದ್ರೆಯಿಂದಲೆ ಎದ್ದನು. ಮೋಹನನು ಮಾತ್ರ ಉಸುರ್ಗರೆದನು.

'ಮಾತನಾಡಿದವನು ನಾನು, ದಣಿದವನು ನೀನು! ಎಂದು ಬೋಧಿಯು ಮೋಹನನನ್ನು ಹಂಗಿಸಿದನು.

'ನಾನು ಕೇಳಿದ ಮಾತುಗಳನ್ನು ಇಡಿಯ ದಿನ ನೀನು ಕೇಳಿದ್ದೆಯಾದರೆ ದಣಿಯುವುದಲ್ಲದೆ ಹಾಸಿಗೆಯನ್ನೆ ಹಿಡಿಯುತ್ತಿದ್ದೆ' ಎಂದು ಮೋಹ

ನನೂ ಹಂಗಿಸುತ್ತ ಎದ್ದು ಮೈಯನ್ನು ಮುರಿಯುತ್ತ ಆಕಳಿಸತೊಡಗಿದನು.

ಇಷ್ಟರಲ್ಲಿ ಹೊರಗೆ ಸದ್ದಾದಂತಾಯಿತು. ಬಾಗಿಲು ತೆರೆದಂತಾಯಿತು. ಮೋಹನನೂ ಬೋಧಿಯೂ ಒಬ್ಬರ ಮುಖವನ್ನೊಬ್ಬರು ನೋಡಿದರು; ಇಬ್ಬರೂ ಒಂದೇ ವೇಳೆಗೆ ಕೋಣೆಯ ಬಾಗಿಲನ್ನು ತೆರೆಯಲು ಹೋಗಿ ಒಬ್ಬರನ್ನೊಬ್ಬರು ನೋಡಿ ಯಾರೂ ಬಾಗಿಲ ತೆರೆಯದೆ ಹಾಗೆಯೆ ನಿಂತರು. ಇಷ್ಟರಲ್ಲಿ ಹೊರಬಾಗಿಲಿನಿಂದ ತಮ್ಮ ಕೋಣೆಯ ಕಡೆಗೆಯೆ ನಡೆದು ಬರುವ ಸದ್ದನ್ನು ಕೇಳಿ ಮೋಹನನು ತಟ್ಟನೆ ಬಾಗಿಲನ್ನು ತೆರೆದನು. ತೆರೆದವನೆ ಒಮ್ಮೆಲೆ ಹಿಮ್ಮೆಟ್ಟಿ ನಿಂತನು. ಅದೇ ವೇಳೆಗೆ ಬೋಧಿಯೂ ಇದಿರು ನಿಂತವನನ್ನು ನೋಡಿ 'ಯಾರು' ಎಂದು ಚಕಿತನಾಗಿ ಮಾತು ಸಾಲದೆ ಬಾಯ್ದೆರೆದು ನಿಂತನು.

ಇವರಿಬ್ಬರ ಎದುರು ನಿಂತವನು ಭರಮಪ್ಪನು!

—

# ೮ ಮೋಹನನ ಮಾತುಗಾರಿಕೆ

ಅಂದು ಸಾಯಂಕಾಲದ ಊಟ ಮುಗಿವ ವರೆಗೆ ಒಬ್ಬರೂ ವಿಶೇಷವಾಗಿ ಮಾತನಾಡಿದ್ದಿಲ್ಲ. ಭರಮಪ್ಪನನ್ನು ಪೋಲೀಸರು ಬಿಟ್ಟರೆಂಬ ಸುದ್ದಿಯನ್ನು ಕೇಳಿ ಮಿಕ್ಕ ನಾಲ್ವರಲ್ಲೂ ಒಂದುತರದ ಹುರಹುರವೆದ್ದಿತು. ಆ ಕಾರಣಕ್ಕಾಗಿಯೆ ಭರಮುನನ್ನು ಕೂಡ ಯಾರೂ ಹೆಚ್ಚಾಗಿ ಮಾತನಾಡಿಸಲಿಲ್ಲ. ಮೋಹನನೊಬ್ಬನೆ ಒಂದೆರಡು ನಿಮಿಷ ಮಾತನಾಡಿದ್ದನು. ಪೋಲೀಸರು ಭರಮುನನ್ನು ಬಿಟ್ಟುದು ಆಶ್ಚರ್ಯವಲ್ಲ, ಭರಮುನ ವಿಷಯವಾಗಿ ಯಾರಿಗೂ ಸಂಶಯವಿದ್ದಿಲ್ಲ, ಎಂದು ಮೋಹನನು ನುಡಿದನು. 'ಈಗ ಭರಮಪ್ಪನ್ನ ಕೊಂದರ ನಾಳೆ ಭರಮಪ್ಪನ ಭೂತ ನಿಮ್ಮನ್ನ ಕೋರ್ಟಿಗೆ ಎಳೆದೀತು, ಅಂತ ಹೇಳಿದ್ನಿರಿ ನಾ' ಎಂದು ಭರಮುನು ಜಂಬಕೊಚ್ಚಿದನು. 'ನೀನು 'ಇಲ್ಲಿ ಇಲ್ಲದಾಗ ಭರಮಪ್ಪನ ಭೂತ ಇಲ್ಲಿಯೆ ಒಂದು ಕೋರ್ಟನ್ನೆ ನಡೆಸಿದೆ' ಎಂದ ಮೋಹನನ ಮಾತು ಭರಮುನಿಗೆ ತಿಳಿಯಲಿಲ್ಲ. ಆದರೆ ಮೋಹನನು ಅದನ್ನು ತಿಳುಹಿಸಲೂ ಯತ್ನಿಸಲಿಲ್ಲ. ಯಾಕೆಂದರೆ ಇಷ್ಟರಲ್ಲಿ ಮೋಹನನಿಗೆ ಮತ್ತೊಂದು ವಿಚಾರ ಹೊಳೆಯಿತು. ಅಂತೂ ಮುಂದೆ ಯಾರೂ ಮಾತನಾಡಲೇ ಇಲ್ಲ.

ಮುಂದೆ ಊಟಕ್ಕೆ ಕುಳಿತಾಗ ಎಲ್ಲರ ಮನಸ್ಸು ಅಸ್ವಸ್ಥವಿದ್ದಿತೊ ಅಲಕ್ಷ್ಯದಲ್ಲಿದ್ದಿತೊ ಹೇಳಲು ಬರುವಂತಿರಲಿಲ್ಲ. ಒಬ್ಬರೂ ಮಾತನಾಡಲಿಲ್ಲ, ಇಷ್ಟೇ ಅಲ್ಲ, ಮುಖವನ್ನೆತ್ತಿ ಒಬ್ಬರನ್ನೊಬ್ಬರು ನೋಡಲೊಲ್ಲರು ಕೂಡ! ಭರಮುನ ಬಿಡುಗಡೆಯಿಂದ ಅವರಿಗೆ ಒಂದು ತರದ ಭಯವಾಗಿದ್ದರೂ ಆಶ್ಚರ್ಯವಲ್ಲ. ಯಾಕೆಂದರೆ ಭರಮುನು ಬಂಧನದಲ್ಲಿರುವ ವರೆಗೆ ಅವರೆಲ್ಲರ ಮನಸ್ಸು ನಿಶ್ಚಿಂತವಾಗಿದ್ದಿತು. ಎಲ್ಲಿಯ ವರೆಗೆ ಭರಮುನ ಮೇಲೆ ಪೋಲೀಸರ ಸಂಶಯವಿದೆಯೊ ಅಲ್ಲಿಯ ವರೆಗೆ ತಾವು ನಿರ್ದೋಷಿಗಳೆಂಬ ಮಾತನ್ನು ಸಿದ್ಧಮಾಡುವ ಅಗತ್ಯವಿದ್ದಿರಲಿಲ್ಲ. ಈಗಲಾದರೂ ತಾವು ನಿರ್ದೋಷಿ, ಎಂಬ ವಿಚಾರವೆ ಇವರಲ್ಲಿದ್ದಿತು, ಆ ದೃಷ್ಟಿಯಿಂದ ಹೆದರಿರಲಿಲ್ಲ. ಆದರೆ ಈಗ

ಭರಮನನ್ನು ಬಿಟ್ಟಮೇಲೆ—ಒರಿಯ ಮನೆಗೆ ಕಳುಹಿಸಿದ್ದಲ್ಲ, ನಿರ್ದೋಷಿ ಎಂದು ಪೋಲೀಸರು ಅಭಿಪ್ರಾಯಪಟ್ಟಿದ್ದರು—ಮತ್ತೆ 'ದೋಷಿ ಯಾರು?' ಎಂಬ ಪ್ರಶ್ನೆ ಹಾಗೆಯೆ ಉಳಿಯಿತಲ್ಲ? ಇನ್ನು ಮಾತ್ರ ತಮ್ಮಲ್ಲಿ ಯಾರಾದರೊಬ್ಬರು ದೋಷಿಯಾಗಿರಲೇಬೇಕಲ್ಲ? ಯಾರು? ಮಗ್ಗುಲಲ್ಲಿಯೆ ಕೊಲೆಗಡಕನಿದ್ದಾನೆಂಬ ಭಾವನೆಯಲ್ಲಿ ಅವರು ಮುಖವನ್ನೆತ್ತಿ ಒಬ್ಬರನ್ನೊಬ್ಬರು ನೋಡುವುದು ಹೇಗೆ?

ಇದಲ್ಲದೆ ಇನ್ನೂ ಒಂದು ಸಂಕಟವಿದ್ದಿತು ಅವರ ಹೃದಯದಲ್ಲಿ. ಅದೆಂದರೆ ಮೋಹನನು ಹೂಡಿದ ತಮಾಷೆ. ಅದೆಂತಹ ತಮಾಷೆ! ಭರಮನು ಬಂಧನದಲ್ಲಿರುವಾಗ ಅದು ತಮಾಷೆಯಾಗಬಹುದಾಗಿತ್ತು. ಆದರೆ ಈಗ? ಭರಮನು ನಿರ್ದೋಷಿ, ತಮ್ಮಲ್ಲಿ ಒಬ್ಬನು ದೋಷಿ, ಇಂತಹ ಪ್ರಸಂಗದಲ್ಲಿ ತಾವು ತಂತಮ್ಮ ಮನಸಿನೊಳಗಿನ ವಿಚಾರಗಳನ್ನೆಲ್ಲ ಮತ್ತೊಬ್ಬನೆದುರು ಬಿಚ್ಚಿಟ್ಟಿದ್ದಾರೆ! ಮೋಹನನ ಮನಸಿನಲ್ಲಿ ಏನಿರಬಹುದೆಂದು ಮಿಕ್ಕವರ ಕುತೂಹಲವಿದ್ದರೆ, ಮಿಕ್ಕವರ ಮನಸಿನಲ್ಲಿ ತನ್ನ ವಿಷಯವಾಗಿ ಏನಿದೆಯೊ, ಎಂದು ಮೋಹನನಿಗೆ ಹೆದರಿಕೆ. ಮೋಹನನು ನಿಜವಾಗಿಯೆ ಹೆದರಿದ್ದನು. ಎಲ್ಲರ ಹೇಳಿಕೆಗಳನ್ನು ತಾನೊಬ್ಬನೆ ಕೇಳಿಕೊಂಡಿದ್ದಾನೆ. ಅವರೆಲ್ಲ ನಿರ್ದೋಷಿಗಳು. ಉಳಿದವ ತಾನೊಬ್ಬ. ಇತ್ತ ಭರಮನೂ ಮುಕ್ತನಾದ. ಎಂದ ಮೇಲೆ ತನ್ನೊಬ್ಬನ ಸ್ಥಿತಿಯೆ ಸಂಶಯಾಸ್ಪದವಾಯಿತಲ್ಲ, ಎಂದು ಮೋಹನನು ಹೆದರಿದ್ದನು. ಅದಕ್ಕಾಗಿ ಊಟ ಮುಗಿದ ಕೂಡಲೆ ತನ್ನ ಕತೆಯನ್ನು ಹೇಳಬೇಕೆಂದೇ ನಿರ್ಧರಿಸಿದನು.

ಮಿಕ್ಕವರಿಗೆ ಮಾತ್ರ ಮೋಹನನ ಕತೆಯನ್ನು ಕೇಳಲು ಆತುರವಿಲ್ಲ. ಒಂದು, ಅನಿವಾರ್ಯವಾಗಿ ತಾವೆಲ್ಲರೂ ಕೂಡಿಯೆ ಆ ಕತೆಯನ್ನು ಕೇಳಬೇಕಾಗುವುದು, ಮೋಹನನು ಎಲ್ಲರ ಎದುರಿನಲ್ಲಿ ಏನು ಹೇಳುವನೊ ಎಂದು. ಇನ್ನೊಂದು, ಎಲ್ಲರ ಸಮಕ್ಷ ಮಾತನಾಡುವಾಗ ಮೋಹನನು ತಮ್ಮ ಮಾತುಗಳ ಸಂದರ್ಭವನ್ನು ಹೇಳಿದರೆ ಹೇಗೆ ಎಂದು. ಕೊನೆಯದಾಗಿ, ತಾವೆಲ್ಲರೂ ನಿರ್ದೋಷಿಗಳೆಂದು ಹೇಳಿಕೊಂಡಾಗ ಮೋಹನನೊಬ್ಬನೆ ಉಳಿದರೆ ಅಷ್ಟೆ ಸಮಾಧಾನವಲ್ಲವೆ? ಅವನೊಬ್ಬನೆ ಸಂಶಯಕ್ಕೆ ಗುರಿಯಾಗಬಹುದಲ್ಲವೆ? ಒಂದುವೇಳೆ ತಾನೂ ನಿರ್ದೋಷಿ, ಎಂದು ಅವನು ಸಾಧಿಸಿದರೆ ಮತ್ತೆ

ಸಮನಾಗಿ ಎಲ್ಲರಿಗೂ ಸಂಶಯ ತಟ್ಟಬಹುದು. ಅಂತೂ ಮೋಹನನ ಹೇಳಿಕೆ ಬೇಡ, ಎಂದು ಅವರಿಗೆ ಎನಿಸಿದ್ದರೆ ಆಶ್ಚರ್ಯವಲ್ಲ. ಆದರೆ ಇಂತಹ ಮಾತನ್ನು ಆಡಿ ತೋರಿಸುವವರು ಯಾರು? ಕೊನೆಗೆ ಬೋಧಿಯೆ ಸಿಡುಕಿನ ದನಿಯಲ್ಲಿ ನುಡಿದನು

'ಮೋಹನಾ, ಈಗಾಗಲೆ ನಮ್ಮೆಲ್ಲರಿಗೆ ಕೇಳಿಸಿಬಿಟ್ಟಿದೆ. ಅದಕ್ಕೆ ನಿನ್ನ ನಾಟಕವನ್ನು ಇಂದಿಗೆ ಇಷ್ಟಕ್ಕೆಯೆ ಮುಗಿಸು' ಎಂದನು.

ಆಶ್ಚರ್ಯಚಕಿತನಾದ ಮೋಹನನು ಮಾತನಾಡಬೇಕೆನುವಷ್ಟರಲ್ಲಿ ಅನಂತನು ದನಿಗೂಡಿಸಿದನು.

'ಬೋಧಿ ಹೇಳುವುದು ನಿಜ. ಹಾಗೆ ಹೇಳುವುದಾದರೆ ನಮ್ಮೆಲ್ಲರಿಗಿಂತ, ಮೋಹನಾ, ನಿನಗೆಯೆ ಹೆಚ್ಚು ಶ್ರಮವಾಗಿರಬೇಕು. ಅದಕಾಗಿ ಸದ್ಯಕ್ಕೆ — '

ಮೋಹನನು ಇಂದುಮತಿಯ ಮುಖವನ್ನು ನೋಡತೊಡಗಿದನು. ಅದನ್ನು ನೋಡಿಯೆ ಅನಂತನು ತಡೆದದ್ದು. ಇಂದುಮತಿ ಮೋಹನನಿಗೆ ಏನೊ ಸೂಚಿಸುವಂತೆ ಭಾಸವಾಗಿ ಅನಂತನು ಪೆಚ್ಚುಬಡೆದನು. ಆದರೆ ಬೋಧಿಗೆ ಮಾತ್ರ ಅಸಹನೆ ಹೆಚ್ಚಿತು.

'ನಿನಗ ಉತ್ಸಾಹ ಇದ್ದರೆ ನೀನು ರಗಳೆ ಪುರಾಣ ಬಿಚ್ಚು. ನನ್ನಷ್ಟಕ್ಕೆ ನಾನು ಹೋಗಿ ಮಲಗತೀನಿ'

ಬೋಧಿ!'

ಮೋಹನನ ಬಿರುಸುದನಿಯನ್ನು ಕೇಳಿ ಕೋಣೆಯಿಂದ ಹೊರಹೊರಟ ಬೋಧಿಯು ತಡೆದು ನಿಂತನು. ಮೋಹನನ ಮುಖದಲ್ಲಿ ನಿಶ್ಚಯದ ಕಳೆಯನ್ನು ಕಂಡು ಬೋಧಿಗೆ ಕೆಣಕಿದಂತಾಯಿತು. ಅವನು ಹೆಚ್ಚಾಗಿ ಕನಲಿದನು.

'ನನಗ ಹೇಳೋದಿಲ್ಲ, ಕೇಳೋದೂ ಇಲ್ಲ. ನಾನು ಹೋಗುವವ' ಎಂದನು.

ಮೋಹನನು ಮರುಮಾತಿಲ್ಲದೆ ಬೋಧಿಯನ್ನು ಅರಗಳಿಗೆ ದಿಟ್ಟಿಸಿ 'ನಾನು ಹೇಳೋದರ ಸಲುವಾಗಿ ಅಷ್ಟು ಹೆದರಿಕೆ ಇದ್ದರೆ ಹೋಗು' ಎಂದು ಅವನನ್ನು ನೋಡದೆಯೆ ನಡೆದು ಕುರ್ಚಿಯಲ್ಲಿ ಕುಳಿತುಕೊಂಡನು.

'ಹೆದರಿಕೆ! ಯಾರಿಗೆ ಹೆದರಿಕೆ?' ಎಂದು ಗದ್ದರಿಸುತ್ತ ಬೋಧಿಯು ಮೋಹನನನ್ನು ಎದುರಿಸಿ ನಿಂತನು.

'ಹೆದರಿಕೆ ಇಲ್ಲದಿದ್ದರೆ ಇಲ್ಲಿ ಕುಳಿತುಕೊ. ನೀನು ಕುರ್ಚಿಯಲ್ಲಿ ನಿದ್ದೆ ಮಾಡಿದರೂ ನನ್ನ ಅಡ್ಡಿ ಇಲ್ಲ?

ಇಷ್ಟರಲ್ಲಿ ಅನಂತನೂ ಇಂದುಮತಿಯೂ ಒಂದೊಂದು ಕುರ್ಚಿಯನ್ನು ಎಳೆದುಕೊಂಡು ಕುಳಿತಿದ್ದರು. ಮೋಹನನು ಒಮ್ಮೆ ಎಲ್ಲರನ್ನು ನೋಡಿ 'ಭರಮಾ, ಭರಮಪ್ಪ' ಎಂದು ಕೂಗಿದನು.

ಕುಳಿತ ಮುವ್ವರೂ ತಟ್ಟನೆ ಬೆದರಿದವರಂತೆ ಬಾಗಿಲ ಕಡೆ ನೋಡಿದರು. ಭರಮನು ಬಂದನು.

'ಭರಮಾ, ನೀನೂ ಕುಳಿತುಕೊ' ಎಂದನು ಮೋಹನ.

ಭರಮನಿಗೆ ಯಾವುದೂ ಗೊತ್ತಿಲ್ಲದ್ದರಿಂದ 'ನಾ-ನ-ರಿ?' ಎನ್ನುತ್ತ ಸಂಶಯದಿಂದ ನೋಡತೊಡಗಿದನು.

'ಹಂ. ನೀನೇ ಮೊದಲು ಕುಳಿತುಕೊ, ಆ ಮೇಲೆ ನಿನಗೆ ಎಲ್ಲ ಹೇಳುವೆ. ತುದಿಗಾಲ ಮ್ಯಾಲೆ ಬೇಡ, ಸರಿಯಾಗಿ ಕೂತುಕೊ, ಎಷ್ಟೊತ್ತು ಕೂಡಬೇಕಾಗೋದೊ ಏನೊ!..ಹಂ..ಈಗ ನೀನು ಕೂತದ್ದು ಕೋರ್ಟು-ಬೆದರಬೇಡೊ! ನೀನು ಇಲ್ಲದಾಗ ಹೊತ್ತುಗಳೆಯಲಿಕ್ಕೆ ನಾವೆಲ್ಲರೂ ಹೂಡಿದ ತಮಾಷೆ ಇದು. ನೀನು ಹೋದರೂ ನಿನ್ನ ವಿಷಯವಾಗಿ ನಮಗೆ ಸಂಶಯ ಇದ್ದಿರಲೇ ಇಲ್ಲ. ಬೇರೆ ಯಾರೊ ಒಬ್ಬರು ಈ ಕೆಟ್ಟ ಕೆಲಸ ಮಾಡಿದವರು ಅಂತ ನಮಗ ಅನಿಸಿತ್ತು. ಅವರು ಯಾರು ಅಂಬೋದನ್ನ ಹುಡುಕೋಣ ಅಂತ ಹಂಚಿಕೆ ಹಾಕಿದಿವಿ. ಆದರೆ ಅದಕೂ ಮುಂಚೆ ನಮ್ಮೊಳಗೆ-ನಿನ್ನೊಬ್ಬನ್ನ ಬಿಟ್ಟು-ಯಾರೂ ಆ ಕೆಲಸ ಮಾಡಿಲ್ಲ ಅಂಬೋದನ್ನ ಖಾತ್ರಿ ಮಾಡಿಕೋಬೇಕೂ ಅಂತ ಪ್ರತಿಯೊಬ್ಬರೂ ತಂತಮ್ಮ ವಿಷಯ ಹೇಳಬೇಕೂ ಅಂತ ಗೊತ್ತಾಯಿತು. ನನ್ನ ಮುಂದೆ ಒಬ್ಬೊಬ್ಬರಾಗಿ ಈ ಮೂರೂ ಜನ ಹೇಳಿದರು ತಾವು ಯಾಕೆ ನಿರ್ದೋಷಿ ಅಂತ. ನಿನಗಂತೂ ಸರ್ಟಿಫಿಕೇಟೇ ಸಿಕ್ಕದೆ. ಇನ್ನು ಉಳಿದವ ನಾನೊಬ್ಬ. ಈಗ ನಾನು ಯಾಕೆ ನಿರ್ದೋಷಿ ಅಂಬೋದನ್ನು ಹೇಳತೀನಿ—'

‘ಬಿಡಿರಿ ನೀವು ! ಎಂಥಾ ಮಾತು !’ ಎನುತ್ತ ಭರಮನು ನಡುವೆಯೆ ಎದ್ದನು.

ಮೋಹನನು, ‘ಯಾಕೊ? ಇನ್ನೂ ನಿನಗ ತಿಳಿಯಲಿಲ್ಲೇನು?’ ಎಂದು ತುಸು ತಾತ್ಸಾರದ ದನಿಯಲ್ಲಿ ಕೇಳಿದನು.

‘ಎಲ್ಲಾ ತಿಳಿದೇತಿ ಬಿಡಿರಿ! ಇಂತಾ ಹೇಡಿಕೆಲಸ ಮಾಡಿದೋರು ನೀವಲ್ಲ ಅಂಬೋದು ಜಗಜಾಹೀರ ಐತಿ.’

‘ಹಾಗಿದ್ದರೆ ಇದನ್ನ ಮಾಡಿದವ ನಾನೇ ಅಂತ ಹೇಳತೀನಿ’

‘ಯಾನಂದಿರಿ?’

‘ಏನು?’

‘ಏ–’

‘–ನು?’

ನಾಲ್ವರೂ ಬೆಪ್ಪುವಡೆದು ತನ್ನನ್ನು ನೋಡಲು ಮೋಹನನು ಗಟ್ಟಿಯಾಗಿ ನಕ್ಕನು. ‘ಎಂತಹ ಹುಚ್ಚರು ನೀವು! ನಾನು ಮಾಡಲಿ ಮಾಡದಿರಲಿ, ಮಾಡೀನಿ ಅಂತ ಹೇಳಿದ ಮಾತ್ರ ನಿಮ್ಮಲ್ಲಿ ಎಂತಹ ಕುತೂಹಲ ಹುಟ್ಟಿತು! ಅಷ್ಟೆ ಕುತೂಹಲದಿಂದ, ಮಾಡಿದವ ನಾನಲ್ಲ ಅಂತ ಹೇಳೋದನ್ನ ಕೇಳಬಾರದೆ?’

‘ಹೇಳೋ ಹುರುಪೇ ನಿಮಗ ಅಟೊಂದು ಇದ್ದರ ಸಾಗಲಿ ನಿಮ್ಮ ಚಕ್ಕಡಿ’ ಎನುತ್ತ ಭರಮನು ಮತ್ತೆ ಕುಳಿತುಕೊಂಡನು. ಮೋಹನನು ಮೊದಲು ನಕ್ಕನು, ಆ ಮೇಲೆ ‘ಎಲ್ಲಾರೂ ತಂತಮ್ಮ ಕತೆ ಹೇಳಿದ ಮೇಲೆ ನಾನು ಯಾಕೆ ಹೇಳಬಾರದು ನನ್ನ ಕತೆ?’

‘ಯಾವಾಗ ಸುರು ಆಗೋದು ಅಂತ ತೂಕಡಿಸತಾ ಇದ್ದೀವಿ’ ಎಂದು ಬೋಧಿ ಗೊಣಗಿದನು.

‘ಹಾಗಾದರೆ, ಜನಮೇಜಯಾ, ಲಾಲಿಸುವಂಥಾತ್ತನಾಗು’ ಎನುತ್ತ ಮೋಹನನೂ ಎಲ್ಲರನ್ನು ಎದುರಿಸಿದನು.

‘ಆದರೆ ಒಂದೇ ಒಂದು ವಿಷಾದದ ಸಂಗತಿ. ಅದೆಂದರೆ ನಾನು ಹೆಚ್ಚಿಗೆ ಏನನ್ನೂ ಹೇಳುವಂತಿಲ್ಲ. ಇದೇನು ಹೇಳುವೆ, ಎಂದು ಆಶ್ಚರ್ಯಪಡಬೇಡಿರಿ. ಏನನ್ನೊ ಬಚ್ಚಿಡಬೇಕೆಂದು ನಾನು ಹಾಗೆ ಹೇಳುವುದಿಲ್ಲ. ಹೇಳಬೇಕೆಂದರೆ

ನನಗೂ ಬೇಕಾದಷ್ಟಿದೆ. ಆದರೆ ಮುಂಜಾವಿನಿಂದ ನಿಮ್ಮೆಲ್ಲರ ಹೇಳಿಕೆಗಳನ್ನು ಕೇಳಿದ ಮೇಲೆ ನನ್ನ ವಿಷಯವಾಗಿ ಹೆಚ್ಚು ಹೇಳುವುದು ನನಗೆ ಸರಿ ಎನಿಸುವುದಿಲ್ಲ. ನಾನು ಈಗ ಏನನ್ನು ಹೇಳಿದರೂ ನಿಮಗೆ ಸಂಶಯವೆ ಉಂಟಾಗಬಹುದು. ನಿಮ್ಮ ಮಾತುಗಳನ್ನೆಲ್ಲ ಕೇಳಿ, ಅವನ್ನು ಲಕ್ಷ್ಯದಲ್ಲಿಟ್ಟುಕೊಂಡು ನಾನು ಹೇಳುತ್ತಿರಬಹುದು, ಎಂದು ನಿಮಗೆ ಸಂಶಯ ಬಂದರೆ ಅದು ನಿಮ್ಮ ತಪ್ಪಲ್ಲ. ನೀವೆಲ್ಲರೂ ನಿಂನಿಮ್ಮ ವಿಷಯ ಹೇಳಿದ ಮೇಲೆ ನಾನೂ ನಿರ್ದೋಷಿ, ಎಂದು ಹೇಳಿಕೊಳ್ಳಬಯಸಿದರೆ ಅದು ನನ್ನ ತಪ್ಪಲ್ಲ.

'ಹೀಗಿರುವಾಗ ಹೆಚ್ಚಿಗೆ ಏನು ಹೇಳಲಿ? ನಾನು ನನ್ನ ಮಿತ್ರನ ಕೊಲೆಯನ್ನು ಮಾಡಿಲ್ಲ, ಎಂದಿಷ್ಟೆ ಹೇಳಿದರೆ ಯಾರಿಗೆ ವಿಶ್ವಾಸ ಹುಟ್ಟುವದು? ಹಾಗೆ ಕೇಳಿದರೆ, ಭವಾನಿಯ ಸ್ವಭಾವದ ಅನೇಕ ಕೊಂಕುಗಳು ನನಗೆ ಸರಿಬರುತ್ತಿದ್ದಿಲ್ಲ; ಅನೇಕ ಸಂದರ್ಭಗಳಲ್ಲಿ, ನನಗೂ ಅವನಿಗೂ ಮೇಲಾಟ ನಡೆದಾಗ, ನನ್ನ ಮನಸ್ಸಿನ್ನಪ್ಪದ ಕುಟಿಲತನದಿಂದ ಅವನು ನನ್ನನ್ನು ಸೋಲಿಸಿದ್ದಾನೆ; ಇಂತಹ ಅನೇಕ ಕಾರಣಗಳಿಗಾಗಿ ಅವನಲ್ಲಿ ನನಗೆ ಅಸಹನೆ ಇದ್ದಿತು. ಇಷ್ಟಾದರೂ ನಾನು ಅವನ ಸಹವಾಸವನ್ನು ಬಿಟ್ಟಿರಲಿಲ್ಲ. ಯಾಕೆ? ಇಂತಹ ಕೆಲವು ಮಾತುಗಳಿಂದ ನಾನೇ ದೋಷಿಯಾಗಿರಬಹುದು, ಎಂದು ಸಂದೇಹ ಬರುವಂತಿದೆ. ನಾನು ಈ ಕೊಲೆಯನ್ನು ಮಾಡಬಹುದಾಗಿತ್ತು, ಆದರೂ ಮಾಡಿಲ್ಲ. ಯಾಕೆಂದರೆ ನನಗೆ ಅಂತಹ ಅವಕಾಶವೆ ದೊರೆತಿಲ್ಲ. ಅವಕಾಶ ದೊರೆಯದಿದ್ದರೆ ನಾನೇನು ಮಾಡಲಿ?'

ಮೋಹನನ ಮಾತು ಇಷ್ಟಕ್ಕೆಯೆ ಮುಗಿಯಬಹುದೆಂದು ಯಾರಿಗೂ ಕಲ್ಪನೆ ಇದ್ದಿರಲಿಲ್ಲ. ಅವನು ಒಮ್ಮೆಲೆ ಸುಮ್ಮನಾದುದನ್ನು ಕೇಳಿ ಎಲ್ಲರೂ ಚಕಿತರಾದರು; ಮುಖವನ್ನೆತ್ತಿ ಅವನನ್ನು ದಿಟ್ಟಿಸಿದರು. ಇದನ್ನು ನೋಡಿ ಮೋಹನನು ಮುಗುಳ್ನಗೆಯಿಂದ 'ಮುಗಿಯಿತು ನನ್ನ ಮಾತು. ನಾನು ಹೇಳುವುದು ಇಷ್ಟೆ. ನಾನು ಈ ಕೆಲಸವನ್ನು ಮಾಡಿಲ್ಲ' ಎಂದನು.

'ನಾನು ಆದ್ನೆ ಹೇಳಲಿಲ್ಲೇನ್ರಿ' ಎನುತ್ತ ಭರಮಪ್ಪನು ಮತ್ತೆ ಎದ್ದನು.

ಮೋಹನನು ಅವನಿಗೆ ಕೂಡುವಂತೆ ಸನ್ನೆ ಮಾಡಿದನು. 'ಕೂತುಕೊ —ಭರಮಪ್ಪಾ. ನನ್ನ ಮಾತು ಇನ್ನೂ ಮುಗಿದಿಲ್ಲ. ಯಾಕೆಂದರೆ—ನಾ ಹೇಳಿದ್ದಕ್ಕೆ ಏನೂ ಅರ್ಥವೇ ಇಲ್ಲ.'

ಗೊತ್ತಿದ್ದದ್ಕ ಅರ್ತ ಯಾಕ ಬೇಕರಿ?'

ಬೋಧಿಯು ಮುಸುಗುಡತೊಡಗಿದನು. 'ಏನಿಲ್ಲ—ನಮಗೆ ನಿದ್ದೆ ಬಂದಿದೆ ಅಂತ ಹೇಳಿದೆವಲ್ಲ—ಅದು ತಡೆದಿಲ್ಲ ಅವನಿಗೆ! ನಾವು ಮಲಗಬಾರದೂ ಅನ್ನೊ ಹೊಟ್ಟೆಯುರಿ ಅವನಿಗೆ! ಅದಕ್ಕೆ ಮಾತಿಗೆ ಮಾತು ಬೆಳೆಸತಾ ಇದ್ದಾನೆ.'

ಬೋಧಿಯ ಮಾತನ್ನು ಲಕ್ಷಿಸದೆ ಮೋಹನನು ತನ್ನ ಮಾತನ್ನೆ ಮುಂದರಿಸಿದನು. 'ನನ್ನ ಮಾತಿಗೆ ಅರ್ಥ ಇಲ್ಲ ಅಂದೆ, ಭರಮಪ್ಪ. ಈಗ ನೀನೆ ನೋಡು. ಈ ಮನೆಯೊಳಗೆ ಒಂದು ಜೀವದ ಆಹುತಿಯಾಯ್ತು. ಆಗ ನಾವು ಐದು ಜನ ಈ ಮನೆಯಲ್ಲಿದ್ದಿವಿ. ಅವರೊಳಗೆ ನೀನು ನಿರ್ದೋಷಿ ಅಂತ ಜಗಜಾಹೀರ ಆಯಿತು. ಈಗ ನಾವು ನಾಲ್ಕೂ ಜನ ನಿರ್ದೋಷಿ ಅಂತ ಹೇಳಿಕೊಂಡಿವಿ. ಒಟ್ಟು ಇದರ ಅರ್ಥ ಏನು? ಯಾರೂ ಕೊಲ್ಲದೆ ಒಂದು ಜೀವದ ಕೊಲೆ ಆಯಿತು ಅಂತಲೊ? ಕೊಲೆ ಆದದ್ದು ನಿಜ ಇದ್ದರೆ ನಮ್ಮೊಳಗೆ ಯಾರಾದರೊಬ್ಬರು ಅದನ್ನ ಮಾಡಿರಲಿಕ್ಕೇಬೇಕಲ್ಲ?'

'ಹೊರಗಿನಿಂದ ಯಾರಾದರೂ ಬಂದಿದ್ದರೆ?' ಅನಂತನು ಉಗುಳ್ನುಂಗುತ್ತ ಕೇಳಿದನು.

'ಹೊರಗಿನಿಂದ ಇರಲಿ, ಒಳಗಿನಿಂದ ಇರಲಿ. ಯಾರಂಬೋದನ್ನ ಹುಡುಕೋದು ಪೋಲೀಸರ ಕೆಲಸ. ಎಷ್ಟಾದರೂ ಹುಡುಗಾಟಿಕೆ ಅಂದರೆ!' ಎನುತ್ತ ಬೋಧಿ ಎದ್ದನು.

'ಬೋಧಿ! ಕೂತುಕೊ!' ಎಂದು ಮೋಹನನು ಗದ್ದರಿಸಿದನು.

ಬೋಧಿಯು ಆ ಮಾತನ್ನು ಲಕ್ಷ್ಯಕ್ಕೆ ತರದೆ ಹೊರಟನು. ಮೋಹನನು 'ಬೋಧಿ! ಹೋಗಬೇಡ. ಪೋಲೀಸರ ಕೆಲಸವನ್ನು ನಾನು ಮಾಡುವವನಿದ್ದೇನೆ. ಯಾರು ಕೊಲೆ ಮಾಡಿದವರೆಂಬುದನ್ನು ಹೇಳುವವನಿದ್ದೇನೆ' ಎನ್ನುವಷ್ಟರಲ್ಲಿ ಬೋಧಿ ತಿರುಗಿ ನಿಂತು ತಿರಸ್ಕಾರದಿಂದ ನಕ್ಕನು. 'ನೀನು ಹೇಳುವವ! ಈ ಮುಂಚೆ ನಾನೇ ನಿನಗೆ ಹೇಳಿಕೊಟ್ಟಿರುವೆ, ಆದರ ಬಂಬ ಮತ್ತೆ ನನ್ನೆದುರು!' ಎಂದನು.

'ಹಾಗಾದರೆ ನೀನು ಕೂಡುವುದಿಲ್ಲವೆ?'

'ನನ್ನ ಮಾತನ್ನು ಸರಿಯಾಗಿ ಹೇಳುವೆಯೊ ಇಲ್ಲವೊ ಎಂದು ನೋಡ

ಲಾದರೂ ಕೂಡಬೇಕಲ್ಲ ' ಎಂದು ಗಟ್ಟಿಯಾಗಿ ಆಕಳಿಸುತ್ತ ಸಾವಕಾಶ ನಡೆದು ಬಂದು ಮತ್ತೆ ತನ್ನ ಕುರ್ಚಿಯಲ್ಲಿ ಕುಳಿತುಕೊಂಡನು.

ಮೋಹನನು ತನ್ನ ಮಾತನ್ನು ಪ್ರಾರಂಭಿಸಿದನು:—

'ಈಗ ನಾನು ಹೇಳುವುದನ್ನು ಯಾರೂ ತಪ್ಪು ತಿಳಿದುಕೊಳ್ಳಬಾರದು. ನಾನು ಮೊದಲೇ ಹೇಳಿದಂತೆ ನಾವು ಐದು ಜನ ಈ ಮನೆಯಲ್ಲಿ ಇರುವಾಗಲೆ ನಮ್ಮ ಒಬ್ಬ ಮಿತ್ರನ ಕೊಲೆಯಾಗಿದೆ. ಕೊಲೆ ಅದು, ಆತ್ಮಹತ್ಯೆಯಲ್ಲ; ಸಹಜ ಮರಣವೂ ಅಲ್ಲ. ಯಾವುದೊ ಕಾರಣದಿಂದ ಜೀವವನ್ನು ಸಾಯ ಹೊಡೆಯುವ ಕೊಲೆಗಡಕ ವ್ಯಕ್ತಿಯು ಒಂದು ವ್ಯಕ್ತಿ ನಮ್ಮ ಐವರಲ್ಲಿ ಇರಲೇಬೇಕು. ಹೊರಗಿನಿಂದ ಯಾರೂ ಬಂದಿಲ್ಲ, ಎಂಬುದನ್ನು ಪೋಲೀಸರು ಈಗಾಗಲೆ ಸ್ಪಷ್ಟಮಾಡಿದ್ದಾರೆ. ಅಧಿಕಾರಿಗಳ ಅಭಿಪ್ರಾಯ ನಿಜವಿದ್ದರೆ ನಮ್ಮಲ್ಲಿಯೆ, ಇಲ್ಲಿ ಸದ್ಯಕ್ಕೆ ಕುಳಿತ ಐವರಲ್ಲಿಯೆ ಒಂದು ಘಾತುಕ ವ್ಯಕ್ತಿ ಇದೆ.'

ಮೋಹನನು ಒಂದು ನಿಮಿಷ ತನ್ನ ವಿಚಾರಗಳನ್ನು ಹೊಂದಿಸಿಕೊಳ್ಳಲು ತಡೆದನು. ತನ್ನ ಮಾತಿನ ಪ್ರತಿಧ್ವನಿಯನ್ನು ಕೇಳಿ ಅವನ ಮೈ ಜುಮ್ಮೆಂದಿತು. ಪ್ರತಿಯೊಬ್ಬನಿಗೆ ತಂತಮ್ಮ ಎದೆ ಹಾರುವ ಸದ್ದು ಕೇಳ ಬರುವಷ್ಟು ನಿಃಶಬ್ದತೆ ಕೋಣೆಯಲ್ಲಿ ನೆಲೆಸಿತ್ತು. ಯಾವುದೊ ತನ್ನದೊಂದು ವಿಚಾರಕ್ಕಾಗಿ ಉಸುರ್ಗರೆದು ಮೋಹನನು ಮತ್ತೆ ಪ್ರಾರಂಭಿಸಿದನು:—

'ಆ ಘಾತುಕ ವ್ಯಕ್ತಿಯನ್ನು ಶೋಧಿಸುವುದು ಪೋಲೀಸರ ಕೆಲಸ. ನಿಜ. ಆದರೆ ಅಷ್ಟಕ್ಕೆ ತನಗೆ ಪ್ರತಿಬಂಧವಿದೆ, ಎಂದು ಯಾರೂ ತಿಳಿಯ ಕೂಡದು. ಸದ್ಯಕ್ಕೆ ನಾವು ನಡೆಸಿದ ವಿಚಾರದಿಂದ ಅಧಿಕಾರಿಗಳ ಕೆಲಸ ಸುಲಭವಾಗುತ್ತಿದ್ದರೆ ಅದನ್ನು ಮುಂದರಿಸುವುದು ನಮ್ಮ ಕರ್ತವ್ಯವಾಗಿದೆ.

'ಇಂತಹರೆ ಈ ಕೆಲಸವನ್ನು ಮಾಡಿದವರು, ಎಂದು ಬೊಟ್ಟು ಮಾಡಿ ತೋರಿಸುವ ಉದ್ದೇಶ ನನಗಿಲ್ಲ. ಒಂದು ವ್ಯಕ್ತಿಯ ಮೇಲೆ ಆರೋಪವನ್ನು ಹೊರಿಸಿ ಅದನ್ನು ಸಿದ್ಧಮಾಡಿ ತೋರಿಸುವಷ್ಟು ಪುರಾವೆ ನನಗಿಲ್ಲ, ಪಾಂಡಿತ್ಯವೂ ನನ್ನದಲ್ಲ, ಅನಂತನಂತೆ ನಾನೂ ನಾಲ್ಕಾರು ಕತೆಗಳನ್ನು ಓದಿದ್ದೇನೆ; ಬೋಧಿ. ನಿನ್ನಂತೆ ನಾನೂ ಇಂತಹ ಸಂದರ್ಭದಲ್ಲಿ ಬುದ್ಧಿಯಾಟವನ್ನು ನಡೆಸಿದ್ದೇನೆ. ಆದರೆ ನನಗೂ ನಿಮಗೂ ಕಡಮೆ ಇದ್ದುದು ಅನುಭವ. ನಿಜವಿದು

ದನ್ನು ಹೇಳುವುದೆಂದರೆ ಇಷ್ಟನ್ನು ಕೂಡ ನಾನು ಮಾತನಾಡುತ್ತಿರಲಿಲ್ಲ. ಆದರೆ ನಿಮ್ಮೆಲ್ಲರ ಹೇಳಿಕೆಗಳನ್ನು ಕೇಳಿ ನನಗೆ ಕೆಲವು ವಿಚಾರಗಳು ಹೊಳೆದದ್ದರಿಂದ, ರಾತ್ರಿ ನಿದ್ರೆ ಬಾರದೆ ಹಾಸಿಗೆಯಲ್ಲಿ ಹೊರಳಾಡುವುದಕ್ಕಿಂತ, ಇಂತಹ ಉಪದ್ವ್ಯಾಪದಿಂದ ಹೊತ್ತುಗಳೆಯುವುದು ಹಿತಕರ—ಎಲ್ಲರ ದೃಷ್ಟಿಯಿಂದಲೂ ಹಿತಕರ—ಎಂದು ನಾನು ಭಾವಿಸಿದ್ದೇನೆ. ನನ್ನ ವಿಚಾರಗಳು ಕೇವಲ ಸಾಮಾನ್ಯದೃಷ್ಟಿಯಿಂದ ಪ್ರೇರಿತವಾಗಿವೆ. ಅವು ನಿಮಗೆ ಸರಿ ಎಂದು ಒಪ್ಪಿದರೆ ಆಮೇಲೆ ಅವನ್ನು ಪ್ರಯೋಗದಲ್ಲಿ ತರುವಾ. ಅಲ್ಲಿಯ ವರೆಗೆ ಪರಿಸ್ಥಿತಿಯನ್ನು ನಾನು ಸರ್ವಸಾಮಾನ್ಯ ದೃಷ್ಟಿಯಿಂದಲೆ ವಿವೇಚಿಸುವೆ.

‘ಮೊದಲು ಒಂದು ಸಂಶಯವನ್ನು ಸ್ಪಷ್ಟಮಾಡೋಣ. ಸದ್ಯಕ್ಕೆ ನಾವಿಲ್ಲಿ ಕುಳಿತವರೆಲ್ಲ ನಿರ್ದೋಷಿಯಾದುದರಿಂದ ಆ ಸಂಶಯಕ್ಕೆ ಪುಟವು ದೊರೆಯಬಹುದಾಗಿದೆ. ಅದೆಂಗರೆ, ಈ ಮನೆಯು ಹೆಸರು ಕೆಡಲಿಕ್ಕೆ ಕಾರಣವಾದ ಭೂತದ ವಿಷಯ. ನಾವೆಲ್ಲರೂ ನಿರ್ದೋಷಿಯಾದುದರಿಂದ ಭವಾನಿಯ ಅನಾಹುತಕ್ಕೆ ಭೂತಪಿಶಾಚಿಯೆ ಕಾರಣವಾಗಬಾರದೇಕೆ—ಎಂದು ನಮಗೆ ಎನಿಸುವುದು ಸಹಜ. ನನ್ನಷ್ಟಕ್ಕೆ ನನಗೆ ಭೂತಪಿಶಾಚಿಗಳಲ್ಲಿ ವಿಶ್ವಾಸವಿಲ್ಲ; ಆದರೆ ಅಷ್ಟಕ್ಕೆ ನಾನು ಅದು ಅಸಂಭವ ಎನ್ನಲಾರೆ. ಭೂತಪಿಶಾಚಿಗಳು ನಿಜವಿರಲಿ ಇಲ್ಲದಿರಲಿ, ಇಂತಹ ಕೃತ್ಯಗಳನ್ನು ಅವು ಮಾಡಲಿ ಮಾಡದಿರಲಿ, ಸದ್ಯದ ಸಂದರ್ಭದಲ್ಲಿ ಮಾತ್ರ ಭೂತಪಿಶಾಚಿಯ ಸಂಬಂಧವೆ ಇಲ್ಲ,’ ಎಂದು ನಾನು ಸ್ಪಷ್ಟವಾಗಿ ಹೇಳುವೆ. ಇಲ್ಲಿ ಕೆಲವರು ಕಣ್ಣಾರೆ ಏನನ್ನೊ ಕಂಡಿದ್ದಾರೆ, ನನಗೂ ಆ ಭಾಸವಾಗಿದೆ, ಆದರೂ ನಾನು ಹೀಗೆ ಹೇಳುವೆ. ಯಾಕೆನ್ನುವಿರಾ ? ಒಂದುವೇಳೆ ಈ ಮನೆಯಲ್ಲಿ ಅಂತಹ ಅತೀಂದ್ರಿಯ ವಿಕೃತಿಯು ಇರುವುದಾದರೆ, ಭವಾನಿಯ ಮರಣದ ನಂತರ ಅದು ತನ್ನ ಅಸ್ತಿತ್ವವನ್ನು ಯಾವ ರೀತಿಯಿಂದಲೂ ಪ್ರಕಟ ಮಾಡಿಲ್ಲ, ಎಂಬುದು ಆಶ್ಚರ್ಯವಲ್ಲವೆ ? ಭವಾನಿಯ ಮರಣದ ವರೆಗೆ ಈ ಮನೆಯಲ್ಲಿ ಅನೇಕ ಭೂತಚೇಷ್ಟೆಗಳಾದುವು, ತರುವಾಯ ಮಾತ್ರ ಒಂದೂ ಇಲ್ಲ ! ಯಾಕೆ ? ಅಥವಾ ಭವಾನಿಯೊಬ್ಬನದೆ ಸೇಡನ್ನು ತೀರಿಸಿಕೊಳ್ಳುವ ಭೂತವಿದ್ದಿತೆ ? ಹಾಗಿದ್ದರೆ ಭವಾನಿ ಜೀವದಿಂದಿರುವ ವರೆಗೆ ಅವನೊಬ್ಬನನ್ನೆ ಬಿಟ್ಟು ಬೇರೆಯವರಿಗೆ ಕಾಣಿಸಿಕೊಂಡಿತಲ್ಲ ?

'ಆದರೆ ಈ ಮಾತಿನ ವಿಷಯವಾಗಿ ಚರ್ಚೆಯನ್ನು ನಡೆಸಬಯಸುವುದಿಲ್ಲ ನಾನು. ಮೇಲೆ ಹೇಳಿದ ಎರಡು ಕಾರಣಗಳಿಗಾಗಿ ಈ ಅನಾಹುತಕ್ಕೆ ಭೂತಪಿಶಾಚಿಯಂತಹ ಅತೀಂದ್ರಿಯ ಕಾರಣವಲ್ಲ, ಎಂದು ನಾನು ನಿಸ್ಸಂದೇಹವಾಗಿ ತಿಳಿಯುತ್ತೇನೆ. ಅದಕಾಗಿಯೆ ನಮ್ಮೆಲ್ಲರಲ್ಲಿ ಒಬ್ಬರು ಕಾರಣರಾಗಿರಬಹುದೆಂಬ ವಿಚಾರದ ಹಟ. ಸದ್ಯದ ಮಟ್ಟಿಗೆ ಯಾರೊ ಒಬ್ಬರು ಕಾರಣರಿದ್ದಾರೆಂದು ತಿಳಿಯೋಣ. ಅವರನ್ನು ಹುಡುಕುವುದು ಹೇಗೆ? ಮೂರು ದೃಷ್ಟಿಗಳಿಂದ ಈ ಶೋಧವನ್ನು ನಾವು ನಡೆಸಬಹುದಾಗಿದೆ. ಮೊದಲನೆಯದು, ಉದ್ದೇಶ. ಭವಾನಿಯ ಕೊಲೆಗೆ ಕಾರಣನಾದವನ ಮನಸ್ಸಿನಲ್ಲಿ ಯಾವ ಉದ್ದೇಶವಿರಬಹುದು? ಕಳವು, ಸೇಡು, ಜಗಳ ಮೊದಲಾದ ಯಾವುದಾದರೊಂದು ಕಾರಣವಾಗಿರಬಹುದು. ಭವಾನಿಯ ಹತ್ತಿರ ಹಣವಿದೆ, ಎಂದು ಗೊತ್ತಿದ್ದು ಅದನ್ನು ಅಪಹರಿಸುವ ಉದ್ದೇಶವಿರುವುದಾದರೆ ನಂನಮ್ಮ ಸಾಮಾಜಿಕ ಪರಿಸ್ಥಿತಿಯ ಮೂಲಕ ಭರಮಪ್ಪನ ಮೇಲೆಯೆ ಮೊದಲು ಸಂಶಯ ಬರುವುದು. (ಇದು ಸಾಮಾನ್ಯ ಚರ್ಚೆಯಾದುದರಿಂದ ಸ್ಪಷ್ಟ ಮಾತನಾಡುವುದಕ್ಕೆ ಕ್ಷಮೆ ಇರಲಿ) ಇನ್ನು ಸೇಡು ತೀರಿಸುವುದೆ ಉದ್ದೇಶವಾಗಿದ್ದರೆ ಅನಂತ-ಇಂದುಮತಿ—ಅವರ ಹೇಳಿಕೆಗಳನ್ನೆ ನೋಡಿದರೆ—ಇವರಿಬ್ಬರೂ ಈ ಕೃತ್ಯವನ್ನು ಮಾಡಿರಬಹುದಾಗಿದೆ. ಅದರಂತೆಯ ಯಾವುದೋ ಒಂದು ಜಗಳವಿದ್ದು, ಆ ಪ್ರಸಂಗದಲ್ಲಿ ಇಚ್ಛೆ ಇಲ್ಲದಿದ್ದಾಗೂ ಭವಾನಿಯ ಜೀವಕ್ಕೆ ಧಕ್ಕೆಯನ್ನು ಮಾಡಬಹುದಾಗಿದೆ; ಆ ದೃಷ್ಟಿಯಿಂದ ನೋಡಿದರೆ ಬೋಧಿ ಮತ್ತು ನಾನು ಸಂಶಯಕ್ಕೆ ಪಾತ್ರರಾಗಬಹುದಾಗಿದೆ. ಅಂತೂ ಉದ್ದೇಶದ ದೃಷ್ಟಿಯಿಂದ ನೋಡಿದರೆ—ನಮ್ಮ ಐವರ ಮಟ್ಟಿಗೆ—ಪ್ರತಿಯೊಬ್ಬನ ಮೇಲೂ ಸಂಶಯ ಬರಬಹುದಾಗಿದೆ. ಕೇವಲ ಉದ್ದೇಶವನ್ನು ನೋಡಿದ ಮಾತ್ರಕ್ಕೆ ಇಂತಹನೆ ಅಪರಾಧಿ ಎಂದು ಹೇಳಲು ಶಕ್ಯವಿಲ್ಲ. ಈ ಮಾತು ಮಹತ್ತ್ವದ್ದಾಗಿದೆ.

'ಆದಕಾಗಿಯೆ ನಾವು ಮುಂದೆ ಎರಡನೆಯ ದೃಷ್ಟಿಯಿಂದ ವಿಚಾರ ಮಾಡಬೇಕಾಗುವುದು. ಅದೆಂದರೆ, ಅವಕಾಶ ಇಲ್ಲವೆ ಅನುಕೂಲ. ನಮ್ಮ ಉದ್ದೇಶವನ್ನು ನೆರವೇರಿಸಲಿಕ್ಕೆ ನಮಗೆ ಅವಕಾಶವೆ ದೊರೆಯದಿದ್ದಲ್ಲಿ ನಮ್ಮಿಂದ ಅದನ್ನು ಸಾಧಿಸುವುದಾಗದು. ಎಷ್ಟು ಹೆಚ್ಚು ಅನುಕೂಲವೊ

ಅಷ್ಟು ಸಾಧಿಸುವ ಸಂಭವ ಹೆಚ್ಚು. ಈ ದೃಷ್ಟಿಯಿಂದ ನೋಡಿದರೆ, ನಮ
ಗೆಲ್ಲರಿಗೂ ಮೊದಲು ಅಷ್ಟೇ ಅನುಕೂಲ, ಎಂದು ತೋರುವುದು. ಯಾಕೆಂ
ದರೆ, ನಾವೆಲ್ಲರೂ ಇದೇ ಮನೆಯಲ್ಲಿ ಇದ್ದವರು. ಭವಾನಿಯ ಕೋಣೆ
ಯನ್ನು ಹೊಕ್ಕು ಅವನನ್ನು ಹೊಡೆದು ಬರಲು ನಮಗೆಲ್ಲರಿಗೂ ಗಳಿಗೆಯ
ಮಾತು. ಆದರೆ ತುಸು ವಿಚಾರ ಮಾಡಿದಲ್ಲಿ, ನಂನಮ್ಮ ಅವಕಾಶ-ಅನು
ಕೂಲಗಳಲ್ಲಿ ಹೆಚ್ಚು ಕಡಿಮೆ ಇದ್ದುದು ಕಂಡು ಬರುವುದು. ಕೇವಲ
ಭವಾನಿಯ ಕೋಣೆಗೆ ಹೋಗಿ ಬರುವ ಪ್ರಶ್ನೆ ಇಲ್ಲ. ಹೋಗಿ ಬರುವಾಗ
ಇನ್ನೊಬ್ಬರಿಗೆ ತಿಳಿಯಕೂಡದು. ಈ ದೃಷ್ಟಿಯಿಂದ ನೋಡಿದರೂ ಭರ
ಮನ ಮೇಲೆಯೆ ಮೊದಲು ಸಂಶಯ ಬರುವಂತಿದೆ. ಯಾರಿಗೂ ತಿಳಿಯ
ದಂತೆ ಮೇಲೆ ಹೋಗಿಬರಲು ಭರಮನಿಗಿದ್ದಷ್ಟು ಅನುಕೂಲ ಬೇರೆ ಯಾರಿಗೂ
ಇರಲಿಲ್ಲ. ನಾವೆಲ್ಲರೂ ನಂನಮ್ಮ ಕೋಣೆಯೊಳಗಿದ್ದಾಗ ಭರಮನೊಬ್ಬನೆ
ನಡುಸಾಲೆಯಲ್ಲಿ, ಪಾವಟಿಗೆಗಳ ಹತ್ತಿರ ಮಲಗಿದ್ದಾನೆ! ಭರಮನಿಗೆ ಆ
ರಾತ್ರಿ ಹೆಚ್ಚಾಗಿ ನಿದ್ರೆ ಹತ್ತಿರುವ ಸಂಭವವಿದೆ, ಎಂಬುದಕ್ಕೆ ಅನಂತನು
ಇಂದುಮತಿಯ ಕೋಣೆಯಲ್ಲಿ ಧಾವಿಸಿದಾಗ ಭರಮನು ಎಚ್ಚರಾಗದಿದ್ದುದು
ಸಾಕ್ಷಿಯಾಗಿದೆ ಅಥವಾ ಭರಮನು ಬೇಕೆಂತಲೆ ಮಲಗಿದ ಸೋಗನ್ನು
ಹಾಕಿರಬಹುದಾಗಿದೆ. ಅಂತೂ ಭರಮನು ಮೊದಲ ಆರೋಪಿಯಾಗಬಹು
ದಾಗಿದೆ. ಆದರೆ—ಒಂದು ವೇಳೆ ಭರಮನಿಗೆ ನಿದ್ರೆ ಹತ್ತಿದ್ದೆ ನಿಜವಾದರೆ
ಅನಂತ-ಇಂದುಮತಿ ಇವರು ಸಂಶಯಕ್ಕೆ ಪಾತ್ರರಾಗುವರು. ಇವರಿಬ್ಬ
ರಲ್ಲೂ ಅನಂತನಿಗೆ ಹೆಚ್ಚು ಅನುಕೂಲ. ಯಾಕೆಂದರೆ ಭರಮನು ಮಲಗಿದ
ಜಾಗೆಯಲ್ಲಿ ಅವನನ್ನು ತಪ್ಪಿಸಿ ಅನಂತನು ಮೇಲಿನ ಕೋಣೆಗೆ ಹೋಗಬಹು
ದಾಗಿದೆ. ಹಾಗೆ ಅನಂತನು ಒಮ್ಮೆ ಹೋಗಿದ್ದಾನೆ! ಅದರಂತೆಯೆ, ಭರ
ಮನು ಎಚ್ಚರಿಲ್ಲದಿದ್ದಾಗ ಇಂದುಮತಿ ಕೂಡ ಹಾಗೆ ಮಾಡಬಹುದಾಗಿದೆ.
ಈ ಮುವ್ವರನ್ನು ಬಿಟ್ಟರೆ ಅನುಕೂಲದ ದೃಷ್ಟಿಯಿಂದ ಮತ್ತೆ ಯಾರ
ಮೇಲೂ ಸಂಶಯ ಬರುವಂತಿಲ್ಲ. ಬೋಧಿಯೂ ತನ್ನ ಕೋಣೆಯ ಹೊರ
ಬಾಗಿಲನ್ನು ತೆರೆದಿಟ್ಟು ಕುಳಿತವ, ನನ್ನ ಕೋಣೆಯಲ್ಲಿ ನಾನೂ ಅದೇ ರೀತಿ
ಯಲ್ಲಿ ಸುಳಿದಾಡುವವ.

'ಇಷ್ಟಕ್ಕೆ ನಾನಾಗಲಿ ಬೋಧಿಯಾಗಲಿ ಪೂರ್ತಿಯಾಗಿ ನಿರ್ದೋಷಿ

ಎಂದು ಹೇಳಲಾಗದು. ಯಾಕೆಂದರೆ, ನಾನು ಮೊದಲೆ ಹೇಳಿದಂತೆ ಮೂರನೆಯದೊಂದು ದೃಷ್ಟಿಯಿಂದ ಈ ಪ್ರಸಂಗವನ್ನು ನೋಡಬಹುದಾಗಿದೆ. ಅದೆಂದರೆ, ಮರಣದ ರೀತಿ. ಭವಾನಿ ಯಾವ ರೀತಿಯಲ್ಲಿ, ಯಾವ ಸ್ಥಿತಿಯಲ್ಲಿ ಮೃತಪಟ್ಟಿದ್ದಾನೆ? ಮುಖ್ಯವಾದ ಮಾತೆಂದರೆ ಅವನ ಮುಖದಲ್ಲಿ ಕಂಡು ಬರುತ್ತಿದ್ದ ಭಯವಿಕಾರದ ಕಳೆ. ಮೈಮೇಲೆ ಉಗುರಿನಿಂದ ಚಿವುರಿದ ಚಿನ್ಹಗಳಿದ್ದುದು ನಿಜ. ಆದರೆ ಅದಕ್ಕೆ ಸಮಾಧಾನವನ್ನು ಕೊಡಬಹುದಾಗಿದೆ. ಕೊಂದ ವ್ಯಕ್ತಿಯೆ ಆ ಗಾಯಗಳನ್ನು ಮಾಡಿದೆ, ಎಂದೂ ತಾತ್ಪೂರ್ತಿಕವಾಗಿ ತಿಳಿದುಕೊಳ್ಳಬಹುದು. ಹೆದರಿಕೆಯ ಕಳೆಗೆ ಮಾತ್ರ ಯಾವ ಸಮಾಧಾನವನ್ನೂ ಕೊಡುವಂತಿಲ್ಲ. ಭರಮ-ಅನಂತ-ಇಂದುಮತಿ ಇವರಲ್ಲಿ ಯಾರನ್ನು ನೋಡಿಯೂ ಭವಾನಿ ಆ ರೀತಿ ಹೆದರಿರಲಾರ. ಇದಲ್ಲದೆ ಬಾಗಿಲನ್ನು ಮುಚ್ಚಿಕೊಂಡಿದೆ. ಕೋಣೆಯಲ್ಲಿ—ನಾವು ಕಂಡಾಗ—ಬೇರೆ ಯಾರೂ ಇದ್ದಿರಲಿಲ್ಲ. ಅಂದರೆ ಭವಾನಿ ಹೆದರಲು ಕಾರಣವೇನು? ಒಂದೇ ಒಂದು ಸಮಾಧಾನ ಅನಿವಾರ್ಯವೆನಿಸುವುದು. ಕೋಣೆಯ ಕಿಟಿಕಿ ತೆರೆದಿದ್ದಿತು. ಬೆಳಗಿನಲ್ಲಿ ಮೊದಲು ಬೋಧಿ ಆ ಕಡೆ ನೋಡಲು ಹೋದಾಗ ಅದು ತೆರೆದೇ ಇದ್ದಿತು. ಆ ಕಿಟಕಿಯಲ್ಲಿ ಭವಾನಿಯು ಏನನ್ನಾದರೂ ಕಂಡಿರಬಹುದೆ? ಹಾಗಿದ್ದರೆ—ನಾನು ಮತ್ತು ಬೋಧಿ ಹೆಚ್ಚಾಗಿ ಸಂಶಯಕ್ಕೆ ಪಾತ್ರರಾಗುವೆವು. ನಾನಾಗಲಿ ಬೋಧಿಯಾಗಲಿ, ನಾವು ಕುಳಿತಲ್ಲಿಂದ ಇನ್ನೊಬ್ಬರಿಗೆ ಕಾಣದಂತೆ ಕಿಟಿಕಿಯ ಹತ್ತಿರ ಹೋಗಲು ಸುಲಭವಿದೆ. ಈ ದೃಷ್ಟಿಯಿಂದ ನೋಡಿದರೆ ನಮ್ಮಿಬ್ಬರಲ್ಲಿಯೆ ಒಬ್ಬರು ಕಾರಣರಾಗಿರುವ ಸಂಭವ ಹೆಚ್ಚಾಗಿದೆ.

‘ಈ ಗೂಢವನ್ನು ಬಿಡಿಸುವ ಅಧಿಕಾರ ನನಗಿಲ್ಲ, ಬಿಡಿಸೇನೆಂಬ ಹೆಮ್ಮೆಯೂ ನನಗಿಲ್ಲ. ಅದಕಾಗಿ, ನಾವಿಬ್ಬರೇ ಸಂಶಯಕ್ಕೆ ಆಸ್ಪದರೆಂದು ನಾನು ಹಟ ತೊಡುವುದಿಲ್ಲ. ಹೊರಗಿನ ಕಾರಣದಿಂದ ಈ ಅನಾಹುತವಾಗಿದ್ದರೆ ನಮ್ಮಿಬ್ಬರ ಹೊರತು ಇನ್ನೂ ಎಷ್ಟೋ ಜನರು ಹೊರಗಿನಿಂದ ಬರಬಹುದಾಗಿದೆ. ಇದಲ್ಲದೆ, ಇಂತಹ ಪ್ರಸಂಗಗಳಲ್ಲಿ ಇನ್ನೂ ಒಂದು ತರದ ಸಂಭವವಿದೆ. ಅದೆಂದರೆ, ಉದ್ದೇಶವಿಲ್ಲದೆ ಇಂತಹ ಕೆಲಸವನ್ನು ಮಾಡುವುದು. ಸಾಮಾನ್ಯವಾಗಿ ಮನುಷ್ಯನು ಒಂದು ಉದ್ದೇಶದಿಂದಲೆ ಯಾವುದಾದರೂ

ಒಂದು ಕೆಲಸವನ್ನು ಮಾಡುವನು. ಅದಕಾಗಿಯೆ ಸಾಮಾನ್ಯವಾಗಿ ಯಾವ ಅಪರಾಧಿಯನ್ನಾದರೂ ಕಂಡುಹಿಡಿಯಬಹುದು. ಉದ್ದೇಶ–ಅವಕಾಶ–ರೀತಿ ಇವುಗಳನ್ನು ಹೊಂದಿಸಿ ನೋಡಿದರೆ ಅಪರಾಧಿಯು ಕಲ್ಪನೆ ಬರುವುದು. ಆದರೆ ಸಾಮಾನ್ಯ ನಿಯಮಕ್ಕೆ ಅಪವಾದಗಳು ಇದ್ದೇ ಇರುವುವು. ಅದರಂತೆಯೆ ಉದ್ದೇಶವಿಲ್ಲದೆ — ಎಂದರೆ ಸಹಜವಾದ ಉದ್ದೇಶವಿಲ್ಲದ, ಯಾವ ತರಹ ಉದ್ದೇಶವೂ ಇಲ್ಲವೆಂತಲ್ಲ — ಕೆಲಸವನ್ನು ಮಾಡುವ ಕುಹಕರೂ ಇರುವು ದುಂಟು. ಅಂತಹರನ್ನು ಶೋಧಿಸಲು ಮಾತ್ರ ಅತಿಶಯವಾಗಿ ಬುದ್ಧಿ ಪರಿಶ್ರಮವನ್ನು ಮಾಡಬೇಕಾಗುವುದು.

‘ ಕೊನೆಯದಾಗಿ ಒಂದು ಮಾತನ್ನು ಹೇಳುವೆ. ಇದು ವರೆಗೆ ನಾನು ಹೇಳಿದ್ದೆಲ್ಲ ಶುದ್ಧ ಸಾಮಾನ್ಯ ಹರಟೆ. ಅಷ್ಟರಿಂದಲೆ ಅಪರಾಧಿಯನ್ನು ಗೊತ್ತು ಪಡಿಸುವುದಾಗುವುದಿಲ್ಲ. ಭವಾನಿಯ ಹೆದರಿಕೆಗೆ ಕಾರಣ, ಕಿಟಕಿಯಲ್ಲಿ ಯಾರಾದರೂ ಕಾರಭಾರ ಮಾಡಿದ ಚಿನ್ಹೆ, ಹೇಳಿದ ಸುಳ್ಳು, ಸಾಧಿಸಿದ ಕಪಟ, ಸಹಜ ಇಲ್ಲವೆ ಗೂಢವಾದ ಇಂತಿಂತಹದೊಂದು ಉದ್ದೇಶ— ಇವೆಲ್ಲ ಸಂಗತಿ ಗಳನ್ನು ಸಿದ್ಧಮಾಡಲು ಸಾಕಷ್ಟು ಆಧಾರಗಳು ಬೇಕು. ಅಪರಾಧಿಯನ್ನು ಶೋಧಿಸುವ ಕಾರಣವೇನು ? ಅವನಿಗೆ ಶಿಕ್ಷೆಯನ್ನು ವಿಧಿಸಬೇಕೆಂದು. ಅಪರಾಧವನ್ನು ಸಿದ್ಧಮಾಡಿ ತೋರಿಸದೆ ಯಾರೂ ಅವನಿಗೆ ಶಿಕ್ಷೆಯನ್ನು ವಿಧಿಸುವುದಿಲ್ಲ

‘ ಸಿದ್ಧಮಾಡಿ ತೋರಿಸಲು ನಮಗೆ ಆಧಾರಗಳಿವೆಯೆ? ನನಗೆ ತೋಚಿದ ಮಟ್ಟಿಗೆ ಆಧಾರಗಳಿವೆ. ಸುಲಭವಾಗಿ ಸಿಕ್ಕದುದರಿಂದ ಈ ಕೊಲೆಗೆ ಸಹಜ ವಾದ ಉದ್ದೇಶ ಕಾರಣವಾಗಿಲ್ಲ, ಎಂದೂ ನನಗೆ ತೋಚಿದೆ. ಆದರೆ ಇಲ್ಲಿ ನಾನು ಆ ಆಧಾರಗಳನ್ನು ಹೇಳುವುದಿಲ್ಲ. ಅಷ್ಟೊಂದು ನನಗೆ ಭರವಸೆ ಇಲ್ಲ. ಅನ್ಯಾಯವಾಗುವುದೆಂದು ಕಂಡು ಬಂದರೆ ಮಾತ್ರ ನನ್ನ ಸೂಚನೆಗಳನ್ನು ಅಧಿಕಾರಿಗಳಿಗೆ ಒಪ್ಪಿಸುವೆನು. ಆದರೆ ಅದಕಾಗಿ ಹಟ ಇಲ್ಲವೆ ಅವಸರವಿಲ್ಲ. ಒಟ್ಟು ಅಪರಾಧಿಗೆ ಶಿಕ್ಷೆಯಾದರಾಯಿತು, ಅಧಿಕಾರಿಗಳಿಂದಲೆ ಆ ಶಿಕ್ಷೆ ವಿಧಿಸಲ್ಪಡಬೇಕಾಗಿಲ್ಲ.

‘ ಭರಮಾ, ಈಗ ಏಳು, ನನ್ನ ಮಾತು ಮುಗಿಯಿತು. ಒಂದು ಸೂಚನೆ

ಯನ್ನು ಮಾಡುವೆ. ಈಗಾಗಲೆ ರಾತ್ರಿ ೨ ಗಂಟೆಯಾಗಿದೆ. ಇನ್ನು ಮಲಗಿ ಕೊಂಡು ಮಾಡುವುದೇನು? ಎಲ್ಲವನ್ನೂ ಮರೆತು, ಒಂದು ಚಹದ ಪಾರ್ಟಿ ಮಾಡಿ ಬೆಳಗಿನ ವರೆಗೆ ಎಲ್ಲರೂ ಇಲ್ಲಿಯೆ ಹರಟೋಣ. ಒಪ್ಪಿಗೆಯೆ?'

ಅನಂತ–ಇಂದುಮತಿಯರು ಕೂಡಲೆ ಒಪ್ಪಿದರು. ಭರಮನು ತಲೆ ತೂಗಿದನು. ಬೋಧಿ ಮಾತ್ರ ತಿರಸ್ಕಾರದಿಂದ ನಕ್ಕನು. 'ಎಲ್ಲರೂ ಪುಕ್ಕರು! ಇಷ್ಟೊತ್ತಿನ ಹರಟೆ ಕೇಳಿ ಹೆದರಿಕೆ ಆಗಿದೆಯೊ ಏನೊ? ಅದನ್ನ ಮುಚ್ಚಿ ಕೊಳ್ಳಲಿಕ್ಕೆ ಒಂದು ನೆವ!' ಎಂದನು.

'ನಿನಗೆ ನಿದ್ದೆ ಹೆಚ್ಚು ಬಂದಿದೆಯೊ ಸಿಟ್ಟು ಹೆಚ್ಚು ಬಂದಿದೆಯೊ?' ಎಂದನು ಮೋಹನ.

'ನಿದ್ದೆ ಬಂದಿದ್ದಿಲ್ಲ ಅಂದರೆ ತಿಳಿಯುತ್ತಿತ್ತು ನಿನಗೆ!' ಎನ್ನುತ್ತ ಬೋಧಿ ಎದ್ದನು. 'ಚಹಾ ಪಾರ್ಟಿಯೊ ಪುಕ್ಕರ ಪಾರ್ಟಿಯೊ! ಬೆಳಗಿನ ಆರು ಗಂಟೆಗೆ ಮಾತ್ರ ನನಗ ಚಹಕ್ಕ ಕರೆಯಿರಿ. ಅಲ್ಲಿಯ ವರೆಗೆ———' ಬೋಧಿ ಆಕಳಿಸುತ್ತ ತನ್ನ ಕೋಣೆಗೆ ಹೋದನು.

## ೯ ಕೊನೆಯ "ಸಂಹಾರ"

ಬೋಧಿಯ ಅಭಿಪ್ರಾಯವು ಸುಳ್ಳಾಗಿರಲಿಲ್ಲ. ಎಲ್ಲರ ಮುಖದಲ್ಲೂ ಹೆದರಿಕೆಯ ಕಳೆ ಇದ್ದಿತು. ಆಶ್ಚರ್ಯದ ಮಾತೆಂದರೆ ಮೋಹನನ ಮುಖದ ಮೇಲೆ ಇಂತಹ ಕಳೆ ಹೆಚ್ಚಾಗಿ ಕಾಣುತ್ತಿದ್ದಿತು. ಇಂದುಮತಿ ಅದನ್ನು ನೋಡಿದ್ದಳು. ಅವಳಿಗೂ ಆಶ್ಚರ್ಯವಾಯಿತು. ಮೋಹನನು ಹೆದರಿರುವನೆ? ಯಾಕೆ?—ಅಥವಾ—? ಛೆ! ಛೆ! ಎಂದಿಗೂ ಶಕ್ಯವಿಲ್ಲ. ಮೋಹನನು ಸ್ವಭಾವದಿಂದ ಎಷ್ಟೊಂದು ಕಟುಕನೆನಿಸಿದರೂ ಭವಾನಿಯನ್ನು ಕೊಲ್ಲುವಂತಹ——. ಹಾಗಾದರೆ ಹೆದರಿರುವನೇಕೆ ? ಇಂದುಮತಿಗೆ ಅದೊಂದು ದೊಡ್ಡ ಗೂಢವಾಯಿತು. ಇಷ್ಟೊಂದು ಜಡಿಯಾಗಿ, ತಿಳಿಯಾಗಿ ಮೋಹನನು ಪರಿಸ್ಥಿತಿಯನ್ನು ವಿವೇಚಿಸಿದನಲ್ಲ? ಒಂದು ವೇಳೆ ಅವನೇ ಆ ಕೃತ್ಯ ಮಾಡಿದ್ದರಿಂದ ಅವನಿಗೆ ಎಲ್ಲವೂ ಅಷ್ಟೊಂದು ಸೂಕ್ಷ್ಮವಾಗಿ, ವಿವರವಾಗಿ ಗೊತ್ತಿದೆ ಎನಬಹುದೆ—ಎಂಬ ಸಂಶಯವೂ ಇಂದುಮತಿಯ ಮನಸಿನಲ್ಲಿ ಹಣಿಕಿಕ್ಕಿತು. ಆದರೆ ಸದ್ಯಕ್ಕೆ ಯಾರೂ ಆ ವಿಷಯ ಮಾತನಾಡಬಾರದಾದ್ದರಿಂದ ಅವಳ ಸಂಶಯವು ಮುಳ್ಳುಹಾಸಿಗೆಯ ಮೇಲೆಯೆ ಮಲಗಬೇಕಾಯಿತು. ಇಂದುಮತಿ ಮೆಲ್ಲಗೆ, ತಲೆ ಎತ್ತದೆ ಒಬ್ಬೊಬ್ಬರ ಮುಖವನ್ನು ನೋಡಿದಳು. ಭರಮಪ್ಪನಿಗೂ ಸಮಾಧಾನವಿದ್ದಂತಿಲ್ಲ. ಬೋಧಿ ಮಾತ್ರ ನಿಜವಾಗಿ ಗಟ್ಟಿಗನು, ಎಂದು ಅವಳು ಒಳಗಿಂದೊಳಗೆಯೆ ಬೆರಗುವಡೆದಳು.

ಮೋಹನನಿಗೂ ಬೋಧಿಯ ವಿಷಯವಾಗಿಯೆ ಭಲೆ—ಎನಿಸಿದ್ದಿತು. ಎಲ್ಲರ ಮನಸಿನಲ್ಲೂ ಒಂದು ತರದ ಅಲ್ಲೋಲಕಲ್ಲೋಲ, ಒಂದು ತರದ ತಳಮಳ ಇದ್ದಾಗ ಬೋಧಿಯೊಬ್ಬನೆ ಗಟ್ಟಿಗನೆನಿಸಿದನಲ್ಲವೆ?. ತಾನು ಕೂಡ ಹೆದರಿದ್ದನ್ನು ಮೋಹನನು ಒಪ್ಪಿದನು. ಯಾರಿಗೆ ಗೊತ್ತು ಏನಾಗುವುದೊ-ಎಂದು ಅವನ ಹೆದರಿಕೆ. ಆದರೆ ಅನಂತನು ಹೆದರಿದ್ದು ಯಾಕೆ, ಎಂಬುದು ಮೋಹನನಿಗೆ ತಿಳಿಯಲಿಲ್ಲ. ನಿಜವಿದ್ದ ಮಾತೆಂದರೆ ಅನಂತನಿಗೆಯೆ ತಿಳಿದಿರಲಿಲ್ಲ, ತಾನು ಹೆದರಿದ್ದು ಯಾಕೆ, ಎಂಬುದು. ಅನಂತನ ಕಣ್ಣುಗಳಲ್ಲಿ ನಿದ್ದೆಗಿಂತ

ಭಯವೆ ಹೆಚ್ಚಾಗಿದ್ದಿತು. ಬೆಕ್ಕಿಗೆ ಅಂಜಿ ಹೋರಿನಲ್ಲಿ ಮುದುಡಿಕೊಂಡ ಇಲಿಯಂತೆ ಅನಂತನು ಕುಳಿತುಕೊಂಡಿದ್ದನು. ತುಸು ಸದ್ದಾದರೆ ಸಾಕು, ಓಡುವುದು; ಬೆಕ್ಕಿನ ಬಾಯಿಯಲ್ಲಿಯೆ ಓಡಿದರೂ ಚಿಂತೆ ಇಲ್ಲ, ಓಡುವುದು, ಎಂಬ ಧೋರಣೆ ಅವನ ಮುಖದಲ್ಲಿ ಕಂಡುಬರುತ್ತಿದ್ದಿತು.

ಭರಮನಿಗೂ ಹೆದರಿಕೆ, ಆದರೆ ತನಗಾಗಿ ಅಲ್ಲ. ಇವರೆಲ್ಲರೂ ಯಾಕೆ ಹೀಗೆ ಬೆಳಗಿನ ವರೆಗೆ ನಿದ್ದೆ ಹಿಡಿದು ಕುಳಿತಿದ್ದಾರೆ, ಎಂಬುದರ ಕಲ್ಪನೆಯೆ ಅವನಿಗಿರಲಿಲ್ಲ. ಯಾವುದೂ ತಿಳಿಯದ್ದರಿಂದ ಏನಾಗುವುದೊ, ಎಂಬ ಹೆದರಿಕೆ ಅವನಿಗೆ. ಆದರೆ ಕ್ರಮೇಣ ಭರಮನ ಹೆದರಿಕೆ ಬಯಲಾಗತೊಡಗಿತು. ಮಿಕ್ಕವರನ್ನು ನೋಡುವಾಗ ಮಾತ್ರ ಹೆದರಿಕೆಯು ಏಚಾರ ಬರುತ್ತಿದ್ದುದರಿಂದ ಅವರನ್ನು ನೋಡುವುದನ್ನೆ ಬಿಟ್ಟುಕೊಟ್ಟನು. ತತ್‍ಕ್ಷಣ ಏನನ್ನೂ ನೋಡದಿದ್ದ ಅವನ ಕಣ್ಣುಗಳಿಗೆ ಭರದಿಂದ ನಿದ್ರೆ ಬರತೊಡಗಿತು. ಅಲ್ಲಿ ಕುಳಿತವರು, ಅವರ ಮುಂದಿಟ್ಟ ಚಹದ ಪಾತ್ರೆ, ಕಪ್ಪು-ಸಾಸರಗಳು, ಕರಿ-ಬಿಳಿ-ಒಂದು-ಎರಡು ಏನೇನೊ ಕಾಣಿಸತೊಡಗಿತು, ಭರಮನ ತೂಕಡಿಸುವ ಕಣ್ಣುಗಳಿಗೆ. ಭರಮನು ಕಣ್ಣು ತೆರೆಯಲು ಪ್ರಯತ್ನ ಮಾಡಿದನು. ಯಾಕೆಂದರೆ, ಕುಳಿತವರು ಮೂವರಲ್ಲದೆ ಒಂದೊಂದು ಕುರ್ಚಿಯ ಹಿಂದೆ ಒಬ್ಬೊಬ್ಬರಂತೆ ಬೇರೆ ಮುವ್ವರು ಕಂಡರು. ಇವರಾರು? ಮೂರೇ ಜನ ಕೂತಿದ್ದಿಲ್ಲವೆ? ಈಗ ಆರು ಜನ! ಒಂದು-ಎರಡು—ಮೂರು—ನಾಲ್ಕು—ಐದು—ಆರು! ಭರಮಪ್ಪನು ಒಮ್ಮೆಲೆ ತಲೆ ಜಾಡಿಸುತ್ತ ಕಣ್ತೆರೆದನು. ಆರು! ನಿಜ. ಗಡಿಯಾರದಲ್ಲಿ ಆರು ಗಂಟೆ ಬಾರಿಸಿದೆ. ಅದು ತನಗೆ ಕೇಳಿಸಿದ್ದು, ಅರೆನಿದ್ದೆಯಲ್ಲಿ ತಾನು ಏನೇನೊ ಕನಸು ಕಂಡನೆಂದು ತಿಳಿದು ಮುಗುಳ್ನಗೆಯಿಂದ ಕಣ್ಣು ತಿಕ್ಕುತ್ತ ಮತ್ತೆ ನೋಡಿದನು. ಗಡಿಯಾರದ ಗಂಟೆಯನ್ನು ಕೇಳಿ ಎಲ್ಲರೂ ಕುಳಿತಲ್ಲಿಯೆ ಕಣ್ತೆರೆದಿದ್ದರು. ಮೋಹನನು ಈಗ ಹಸನ್ಮುಖನಾಗಿದ್ದನು. ಭರಮನನ್ನು ನೋಡಿ 'ಭರಮಾ, ಸರಿಯಾಗಿ ಆರು ಗಂಟೆಯಾಗಿದೆ' ಎಂದು ಹೇಳಿ "ಬೋಧಿಯನ್ನು ಕರೆದುಕೊಂಡು ಬಾ' ಎಂದನು. ಇಂದುಮತಿಯೂ ಮೆಲ್ಲಗೆ ಎದ್ದಳು. ಮೈ-ಕೈ ಎಲ್ಲ ಜಡವಾಗಿತ್ತು. 'ಇನ್ನೊಮ್ಮೆ ಚಹ ಮಾಡಿಕೊಂಡು ಬರುವೆ. ಆಮೇಲೆ ಬೋಧಿ ಬರಲಿ' ಎನುತ್ತ ಮೆಲ್ಲಗೆ ಆಕಳಿಸಿ ಹೊರಟಳು. ಆದರೆ ಮೋಹನನು ಅವಳನ್ನು ಕರೆದು ತಡೆದನು.

‘ ಇಂದುಮತಿ, ಅನಂತನು ಬರುವ ವರೆಗೆ ನೀನು ಇಲ್ಲಿಯೆ ಕೂಡು. ಇಲ್ಲವಾದರೆ ನೀನು ನಮ್ಮಂತೆ ಹೇಡಿಯಲ್ಲ. ಎಂದು ಅವನು ತಿಳಿದಾನು. . ಹೋಗು ಭರಮಾ ಕಣ್ಣೊಳಗಿನ ನಿದ್ದೆ ಹೋಗಿದೆಯಷ್ಟೆ. . ಬೇಗ ಕರೆದುಕೊಂಡು ಬಾ.

ಭರಮನು ಕೋಣೆಯಿಂದ ಹೊರಬಿದ್ದನು. ಬಾಗಿಲು ತೆರೆದು ಗಾಳಿ ಒಂದೊಡನೆ ಅನಂತನು ಕುಳಿತಲ್ಲಿಯೆ ಸರಿದಾಡಿದನು. ಇಂದುಮತಿ ಕುರ್ಚಿಯ ಹತ್ತಿರ ನಿಂತಳು. ಕೂಡಲು ಆಲಸ್ಯ, ‘ಇದುವರೆಗೆ ಕುಳಿತದ್ದರಿಂದ ನಿಂತಲ್ಲಿಯೆ ಸಮಾಧಾನವೂ ಇದ್ದಿತು. ಆದರೂ ಎಷ್ಟೊತ್ತು, ಎಂದು ವಿಚಾರ ಮಾಡುತ್ತ ಕುರ್ಚಿಯಲ್ಲಿ ಕೂಡ್ರುವವಳಿದ್ದಳು. ಅಷ್ಟರಲ್ಲಿ ಹೊರಗಿನಿಂದ ಯಾರೊ ಧಾವಿಸಿ ಬರುವುದು ಕೇಳಬಂದಿತು. ಕುರ್ಚಿಯ ಮೇಲೆ ಎರಡೂ ಕೈಗಳನ್ನಿಟ್ಟು ಅವಳು ಚಟ್ಟನೆ ಎದ್ದು ನಿಂತಳು. ಅನಂತನು ಗಾಬರಿಯ ಕಳೆಯಿಂದ ಕುಳಿತಲ್ಲಿಯೆ ಸೆಟೆದು ಕುಳಿತನು. ಓಡುತ್ತ ಬಂದವನು ಭರಮು.

‘ ಇಲ್ಲರಿ, ಬೋಧಿರಾಯರು ಅಲ್ಲಿ ಮಲಗಿಕೊಂಡಿಲ್ಲರಿ ’ ಎಂದನು.

ಇಂದುಮತಿಗೆ ಸಿಡುಕು ಬಂದಿತು, ಒಂದು ಸಣ್ಣಮಾತಿಗಾಗಿ ಇವನು ಎಲ್ಲರನ್ನೂ ಸುಮ್ಮನೆ ಹೆದರಿಸಿದನಲ್ಲ, ಎಂದು.

‘ ನೆಟ್ಟಗ ಕಣ್ಣೊರೆಸಿಕೊಂಡು ನೋಡಿ ಬಾ ಇನ್ನೊಮ್ಮೆ . . ಇಲ್ಲ ಅಂದರೇನು ? . . ಎಲ್ಲಾದರೂ ಗಡದ್ದಾಗಿ ಮಲಗಿರಬೇಕು. . ಹೋಗಲ್ಲ. . ಹೀಗ್ಯಾಕೆ ಹುಚ್ಚನ್ಹಾಂಗ — ’

ಭರಮನು ಮನಸ್ಸಿಲ್ಲದ ಹೆಜ್ಜೆಯಿಂದ ಹೊರಟುದನ್ನು ನೋಡಿ ಮೋಹನನು ‘ ಭರಮಾ, ಹೋಗಬೇಡ ಬಿಡು ’ ಎಂದನು. ಭರಮನು ತಾನು ಸಾವಕಾಶ ಹೊರಟದ್ದಕ್ಕೆ ಈ ಮಾತು, ಎಂದು ನೊಂದುಕೊಂಡು ‘ ಇಲ್ಲರಿ, ಗಡಾನೆ ನೋಡ್ಕೊಂಡು ಬರತೀನ್ರಿ. . ಕರೇಕಂದ್ರ ಎಲ್ಲಾ ಕಡೆ ನೋಡೀನಿ—’ ಎಂದು ಗೊಣಗುವಾಗ ‘ ಆದರೂ ಅವರು ಎಲ್ಲಿಯೂ ಇಲ್ಲ. ಅಹುದಲ್ಲೊ ? ’ ಎಂದು ಮೋಹನನು ವಾಕ್ಯವನ್ನು ಪೂರಯಿಸಿದನು. ‘ ಭರಮಾ—’ ಭರಮನು ಮತ್ತೆ ನಡೆದನು—ಏ ಭರಮರಾಯಾ ! ಅವರು ಎಲ್ಲಿಯೂ ಇಲ್ಲ. ನನಗೆ ಗೊತ್ತಿದೆ, ಹೋಗಬೇಡ ’ ಎಂದನು ಮೋಹನ.

‘ ನಿನಗ—’ ಅನಂತನು ಪುಟಿದನು.

'—ಗೊತ್ತಿದೆಯೆ ?' ಎಂದು ಇಂದುಮತಿಯು ಒಳದನಿಯಲ್ಲಿ ಕೇಳಿದಳು.

'ನನಗೆ ಗೊತ್ತಿದೆ. ಬೋಧಿ ಇಲ್ಲ, ಈ ಮನೆಯಲ್ಲಿ ಇಲ್ಲ, ಎಲ್ಲಿಯೂ ಇಲ್ಲ' ಎಂದು ಮೋಹನನು ಗಟ್ಟಿಸಿ, ಬಿಡಿಬಿಡಿಸಿ ನುಡಿದನು. ಎಲ್ಲರನ್ನೂ ಚೆನ್ನಾಗಿ ದಿಟ್ಟಿಸಿ ನೋಡಿದನು. 'ಇಷ್ಟು ಯಾಕೆ ಆಶ್ಚರ್ಯ ನಿಮಗೆ ? ನಾನೇ ಹೇಳಿಕೊಡಲಿಲ್ಲವೆ ಅವನಿಗೆ ? ಅಧಿಕಾರಿಗಳಿಗೆ ಹೇಳುವ ಹಟ ನನಗಿಲ್ಲ, ಎಲ್ಲಾದರೂ ಅಪರಾಧಿಗೆ ಶಿಕ್ಷೆಯಾದರೆ ಸಾಕು ಅಂತ ?'

'ಏನು ?' ಅನಂತನು ಕುರ್ಚಿಯನ್ನು ಗಟ್ಟಿಯಾಗಿ ಹಿಡಿದನು.

'ಬೋಧಿ ಅಪರಾಧಿಯೆ ?' ಒಂದೊಂದು ಅಕ್ಷರಕ್ಕೆ ಒಂದೊಂದು ತೂಕ ಶಕ್ತಿ ಕಡಮೆಯಾದವಳಂತೆ ಇಂದುಮತಿ ಕುರ್ಚಿಯಲ್ಲಿ ಕುಸಿದಳು.

ಮೋಹನನು ತಲೆತೂಗುತ್ತ 'ಅದಕ್ಕೆಂದೇ ಅವನು ಯಾರಿಗೂ ಸಿಕ್ಕದಂತೆ ಹೋಗಿದ್ದಾನೆ. ಬೆಳಗಿನ ಆರುಗಂಟೆಯ ವರೆಗೆ ವೇಳೆಯನ್ನು ಕೊಡಬೇಕೆಂದು ಆ ರೀತಿ ಸೂಚಿಸಿದ್ದ.' ಮೋಹನನು ಉದ್ವುದ್ಧವಾಗಿ ಉಸುರ್ಗರೆದನು. 'ಅಂತೂ ಕೊನೆಗೆ ನನ್ನ ತರ್ಕವೆ ನಿಜವಾಯಿತು' ಎಂದ.

ಎಷ್ಟೋ ಹೊತ್ತಿನ ವರೆಗೆ ಯಾರೂ ಮಾತನಾಡಲಿಲ್ಲ.

* * * * *

ಕೆಲಹೊತ್ತಿನ ಮೇಲೆ ಮೋಹನನು ಮಿಕ್ಕವರ ಕುತೂಹಲವನ್ನು ತಣಿಸಲು ಸಿದ್ಧನಾದನು. ಬೆಳಗಿನ ವರೆಗೆ ತಾವೆಲ್ಲರೂ ಅಲ್ಲಿಯೆ ಕುಳಿತುಕೊಳ್ಳಬೇಕೆಂಬುದಕ್ಕೆ ಮೊದಲು ತನ್ನ ಕಾರಣವನ್ನು ಹೇಳಿದನು. 'ಬೋಧಿಯೆ ನಿಃಸ್ಸಂದೇಹವಾಗಿ ಅಪರಾಧಿಯಾಗಿದ್ದಾನೆಂಬುದು ನನಗೆ ತಿಳಿದಿತ್ತು, ಇಷ್ಟೆ ಅಲ್ಲ—ನನಗೆ ತಿಳಿದಿದೆ, ಎಂಬುದು ಬೋಧಿಗೂ ತಿಳಿಯಿತು. ಆಗ ನಾನು ಹೆದರಿದೆ. ಹೆದರಿದೆ, ಎಂದರೆ ನನಗೇನಾದರೂ ಆದೀತು ಎಂದಲ್ಲ. ಆದರೂ ಇಲ್ಲದ ತೊಂದರೆ ಯಾಕೆ ? ನಾವೆಲ್ಲರೂ ನಂನಮ್ಮ ಕೋಣೆಗೆ ಹೋಗಿದ್ದರೆ ಬೋಧಿಯು ನಿಃಸ್ಸಂದೇಹವಾಗಿ ನನ್ನ ಕಡೆ ಬರುತ್ತಿದ್ದ. ನಾನು ಎಚ್ಚರದಿಂದಿರದಿದ್ದರೆ ನನ್ನನ್ನು ಕೊಂದೊಗೆಯಲೂ ಕೂಡ ಅವನು ಹಿಂದುಮುಂದು ನೋಡುತ್ತಿರಲಿಲ್ಲ. ನಾನೇ ಇಲ್ಲದಂತಾದರೆ ಪೋಲೀಸರಿಗೆ ತಿಳಿಯಲಿಕ್ಕಿಲ್ಲ, ಎಂಬ ಹುಚ್ಚು ಆಸೆ ಮನಸಲ್ಲಿ ಹುಟ್ಟುತ್ತಿದ್ದಿತು. ಒಂದುವೇಳೆ

ನಾನು ಎಚ್ಚರವಾಗಿದ್ದರೆ ಬೆಳಗಿನ ವರೆಗೆ ಹೊಡೆದಾಟ ಇಲ್ಲವೆ ಚರ್ಚೆ ನಡೆಯುತ್ತಿತ್ತು. ಆಮೇಲೆ ಪೋಲೀಸರು ಬಂದರೆ ನಾನು ಎಲ್ಲವನ್ನೂ ಹೇಳಬೇಕಾಗುತ್ತಿತ್ತು. '

ಇಂದುಮತಿ ಆಶ್ಚರ್ಯದಿಂದ ಅವನನ್ನು ನೋಡಿದಳು. 'ಆಗುತ್ತಿತ್ತು ಎಂದರೆ? ಈಗ ನೀನು ಹೇಳುವುದಿಲ್ಲವೆ?'

ಮೋಹನನು ತಲೆಯಲ್ಲಾಡಿಸಿದನು 'ಈಗ ಹೇಳುವ ಅಗತ್ಯವೆ ಇಲ್ಲ ಅಷ್ಟರಲ್ಲಿ ಬೋಧಿ ಎಲ್ಲರ ಕೈಯಿಂದಲೂ ಪಾರಾಗುವನು. ತನ್ನ ಬುದ್ಧಿ ಸೋತಿತು, ಎಂಬುದನ್ನು ಅವನು ಜೀವದಿಂದಿದ್ದು ಸಹಿಸಿಕೊಳ್ಳುವಂತಹನಲ್ಲ.'

'ಇದೆಂಥಾ ಬುದ್ಧರಿ!' ಎಂದು ತಿರಸ್ಕಾರದಿಂದ ಭರಮನು ನುಡಿದನು. 'ಮಾತಿಲ್ಲ ಕತಿಯಿಲ್ಲ ಕಾರಣಿಲ್ಲ ಕುನಸಿಲ್ಲ, ಒಂದು ಜಿಂವಾ ಹೊಡೆದ ಇವ! ನೋಡಿದರ ಮತ್ತ ಬಿರಸ್ಪತಿ ಹಾಂಗ ಮಾತಾಡತಿದ್ದ!'

'ಎಲ್ಲದರೊಳಗೂ ತಾನು ಬೃಹಸ್ಪತಿ, ಎಂದು ತೋರಿಸುವ ಹಟ ಹೊಕ್ಕಿತ್ತು ಅವನಿಗೆ. ಕೆಟ್ಟ ಕೆಲಸ ಮಾಡಿ ದಕ್ಕಿಸಿಕೊಳ್ಳೋದೂ ಬುದ್ಧಿಯ ಆಟ ಆಯಿತು ಅವನಿಗೆ.'

'ಕೆಟ್ಟ ಕೆಲಸ ದಕ್ಕೋದಿಲ್ಲರಿ, ಯಪ. ಇಲ್ಲಾ. ಅಂದ್ರ ನಾ ಬಿಕ್ಕೆ ಬೇಡಿಕೊಂತ ತಿರಗತಿದ್ದನ್ರಿ? . . ಭುದ್ಧಿ! ಭುದ್ಧಿ! . . ಇಲ್ಲಿಂದಿಲ್ಲೇ ನೀವು ಕಂಡು ಹಿಡಿದಿರಿ, ಮಣ್ಣು ಕೊಟ್ಟಿತು ಈ ಭುದ್ಧಿಗೆ!'

ಭರಮನ ಹಿರಿತನದ, ತತ್ತ್ವೋಪದೇಶದ ಶೈಲಿಯ ಮಾತಿನಿಂದ ಎಲ್ಲರ ಮುಖದಲ್ಲಿ ಮುಗುಳ್ನಗೆ ಅರಳಿತು. ಅನಂತನಿಗೆ ಕೂಡ ಧೈರ್ಯ ಬಂದಿತು. ಅವನ ಮನಸಿನಲ್ಲಿ ಕುಣಿಯುತ್ತಿದ್ದ ಒಂದು ಪ್ರಶ್ನೆಯನ್ನು ಈಗ ಅವನು ಕೇಳಿದನು : 'ನನ್ನ ಹೊರಗ ಹಾಕಿ ಭವಾನಿ ಬಾಗಿಲು ಹಾಕೋದರೊಳಗೆ ಜೀವ ಬಿಟ್ಟ. ಇದು ಹ್ಯಾಂಗ ಸಾಧಿಸಿತು?'

ಆದರೆ ಇಂದುಮತಿ ತನ್ನದೊಂದು ಪ್ರಶ್ನೆಯನ್ನು ಮುಂದೆ ಮಾಡಿದಳು. 'ಮೋಹನಾ, ನಿನಗ ಹ್ಯಾಗೆ ಗೊತ್ತಾಯಿತು? ಮೊದಲಿನಿಂದಲೆ ಗೊತ್ತಿತ್ತೆ?'

ಮೋಹನನು ಕಣ್ಣುಮುಚ್ಚಿ ತಲೆಯನ್ನು ಗಟ್ಟಿಯಾಗಿ ಕೈಗಳಿಂದ ಬಿಗಿಯುವುದನ್ನು ಕಂಡು ಭರಮನಿಗೆ ಕನಿಕರ ಬಂದಿತು. 'ಹೋಗಲಿ ಬಿಡಿರೆವ್ವ. ಅದರದೇನು ಅವಸರ ಐತಿ? ಮೋಹನರಾಯರು ದಣಿದಾರ, ಮುಂಚೆ

ಮನಗಿಕೊಳ್ಳಲಿ. ಹಾಂಗ ಕೇಳಿದರ ನೀವೆಲ್ಲಾರು ತುಸೊತ್ತು ಮನಗಿ ಕೋರಿ.'

'ಸಾಕೊ ನಿನ್ನ ಮಲಗಿಕೊಳ್ಳೋದು! ಇದನ್ನ ಸರಿಯಾಗಿ ಕೇಳದೆ ನನಗಂತೂ ನಿದ್ದೀನೆ ಬರೋದಿಲ್ಲ.'

ಭರಮಪ್ಪ ಆಕಾಶಕ್ಕೆ ಮೊರೆ ಇಟ್ಟನು. 'ಹೆಣ್ಮಕ್ಕಳಂದ್ರ ಹೆಣ್ಮಕ್ಕಳು! ಎಲ್ಲಾ ಜಾತ್ಯಾಗ ಒಂದೆ' ಎಂದನು.

ಮೋಹನನು ಕಣ್ದೆರೆದು 'ಭರಮಾ, ಆವಳ ಮಾತು ನಿಜ. ಇದನ್ನೆಲ್ಲ ಹೇಳದೆ ನನಗೂ ನಿದ್ದೆ ಬರುವಂತಿಲ್ಲ. ಹೇಳಲೇಬೇಕು. ನೀವು ಪ್ರಶ್ನೆ ಕೇಳಿದರೆ ಮಾತ್ರ ನನ್ನ ತಲೆಯಲ್ಲಿ ಗೊಂದಲವೇಳುವುದು. ಹೇಳುವುದನ್ನು ನಾನು ಮುಂಚಿನಿಂದ ಹೇಳುವೆ. ನಿಮಗೇನಾದರೂ ಕೇಳುವುದಿದ್ದರೆ ನಾನು ಮುಗಿಸಿದ ಮೇಲೆ ಕೇಳಿರಿ' ಎಂದನು. ಒಮ್ಮೆಲೆ ಅವನ ದನಿಯಲ್ಲಿ ದಣಿವಿನ ತೊದಲು ಕಂಡುಬಂದಿತು.

ಕೇಳಲು ಎಲ್ಲರೂ ಆತುರರಾದುದರಿಂದ ಮರುಮಾತನಾಡದೆ ಸಮ್ಮತಿಯನ್ನು ಕೊಟ್ಟರು.

* * * *

'ನಾನು ಮುಂಚಿನಿಂದಲೂ ಈ ದೆವ್ವದ ಕತೆಯ ಮೇಲೆ ವಿಶ್ವಾಸವನ್ನೆ ಇಟ್ಟಿರಲಿಲ್ಲ. ಅನಂತ ಮತ್ತು ನೀನು, ಇಂದುಮತಿ, ನೀವಿಬ್ಬರೂ ಹೆದರಿದ್ದಿರಿ, ಎಂಬುದು ನನಗೆ ಗೊತ್ತಿದ್ದಿತು. ಭವಾನಿಗೂ ಭರಮನಿಗೂ ದೆವ್ವದಲ್ಲಿ ವಿಶ್ವಾಸವಿದ್ದಿರಲಿಲ್ಲ. ಅಂತೂ ಈ ಅನಾಹುತವಾದೊಡನೆ ಇದಕ್ಕೆ ಕಾರಣ ದೆವ್ವ ಇರಬಹುದು, ಎಂದು ನಾನು ತಿಳಿಯಲೇ ಇಲ್ಲ. ಭವಾನಿಯ ಮರಣವು ಕೊಲೆ, ಎಂದು ಗೊತ್ತಾದ ಕ್ಷಣದಿಂದ ನಾನು ಚುರುಕನಾದೆ, ಮನಸ್ಸಿನಲ್ಲಿ ಪ್ರತಿಜ್ಞೆಯನ್ನೆ ಮಾಡಿದೆ. ಯಾರು ಕೊಂದಿದ್ದರೂ ನಮ್ಮೊಳಗೆ ಒಬ್ಬರು ಕೊಂದಿರಬೇಕು. ಇಂಥ ನೀಚತನ—ವಿಶ್ವಾಸಘಾತುಕತನ ಉಳ್ಳವನನ್ನು ಬಯಲಿಗೆಳೆಯಲೇಬೇಕು, ಎಂದು ಪಣ ತೊಟ್ಟೆ. ಅನಂತಾ, ಈಗ ಹೇಳಲು ಏನೂ ಅಡ್ಡಿ ಇಲ್ಲ. ಮನಸಿನಿಂದಲೂ ಮುಂಚಿನಿಂದಲೂ ನಿನ್ನ ಮೇಲೆಯೆ ನನ್ನ ಸಂಶಯ ಬಿದ್ದಿತು. ವಿಚಾರ ಮಾಡಿದಂತೆ ನೀನೇ ಇದಕ್ಕೆ ಕಾರಣನಾಗಿರಬೇಕು, ಎಂದು ಸಂಶಯ ದೃಢವಾಗತೊಡಗಿತು. ನಿನ್ನ ನಡತೆ,

ನಿನ್ನ ಕೈಬರೆಹದ ಕಾಗದ, ಬೇರೆ ಕೆಲವು ಪರಿಸ್ಥಿತಿ ಇವುಗಳಿಗಾಗಿ ನೀನೇ ಕೊಲೆಯನ್ನು ಮಾಡಿದವ, ಎಂಬ ನಿಶ್ಚಯವೂ ಮೂಡಿತು.'

ಅನಂತನು ಕುಳಿತಲ್ಲಿಯೆ ಗದಗದ ನಡುಗಿದ. ಇದನ್ನು ನೋಡಿ ನಕ್ಕು ಮೋಹನನು ಮುಂದೆ ನಾಗಿದನು. 'ಇನ್ನೇನು ಹೆದರುವ ಕಾರಣವಿಲ್ಲ. ನನ್ನದೇನು ತಪ್ಪು—ನೋಡು. ಬೋಧಿಯ ವಿಷಯವಾಗಿ ನಿನ್ನೆ ರಾತ್ರಿ ಅವನೊಡನೆ ಮಾತನಾಡುವವರೆಗೆ ನನಗೆ ಸಂಶಯ ಬಂದಿರಲಿಲ್ಲ. ಆದರೆ ಅನಂತನೊಡನೆ ಮಾತನಾಡಿದಾಕ್ಷಣ ಅನಂತನು ನಿರ್ದೋಷಿ, ಎಂದು ನನಗೆ ಹೊಳೆಯಿತು. ಆಗ ನನ್ನ ಸ್ಥಿತಿ ಏನಾಗಿರಬೇಕು? ಅನಂತನೆ ದೋಷಿ, ಎಂದು ನಿಶ್ಚಯದಿಂದ ತಿಳಿದುಕೊಂಡಿದ್ದೆ. ಆದರೆ ಅವನು ಮಾತನಾಡಿದಂತೆ ಇಂದು ಮತಿಯ ಮೇಲಿದ್ದ ಅವನ ನಿಸ್ವಾರ್ಥ ಪ್ರೇಮ—ನನಗೆ ಹೊಳೆದದ್ದನ್ನು ಹೇಳುವೆ, ಕ್ಷಮಿಸಿರಿ—ನಿಸ್ವಾರ್ಥ ಪ್ರೇಮ ನನಗೆ ಕಂಡು ಬಂದಿತು. ಅಂತಹ ಸ್ಥಿತಿಯಲ್ಲಿ ಭವಾನಿಯು ಇಂದುಮತಿಯನ್ನು ಅನಾಥೆಯಾಗಿ ಅವನು ಎಂದೂ ಮಾಡುವವನಲ್ಲ, ಎಂದೆನಿಸಿತು..ಈ ಮಾತಿಗೆ ನೀವಿಬ್ಬರೂ ಮುಖ ಕೆಳಗೆ ಮಾಡಬೇಕಾಗಿಲ್ಲ, ಅಭಿಮಾನದಿಂದ ಎತ್ತಿ ಹಿಡಿಯಿರಿ..ಹಂ...ಹಾಗೆ ..ಅನಂತನು ನಿರ್ದೋಷಿ, ಎಂಬುದು ನನಗಿನ್ನೂ ಒಳಗಿನ ಭಾವನೆಯಾಗಿದ್ದಿತು. ಅದಕ್ಕೆ ಕಾರಣಗಳಿದ್ದಿಲ್ಲ. ಇನ್ನೊಬ್ಬನು ದೋಷಿ, ಎಂದು ಗೊತ್ತಾಗುವ ವರೆಗೆ ಅನಂತನ ಮೇಲಿನ ಸಂಶಯ ಪೂರ್ತಿಯಾಗಿ ಹೋಗುವಂತಿರಲಿಲ್ಲ. ಆ ಮೇಲೆ—'

'ನಾನು ಮಾತನಾಡಿದೆ' ಎಂದಳು ಇಂದುಮತಿ.

'ನೀನು! ಹಹ! ನಿನ್ನನ್ನು ಪೂರ್ತಿಯಾಗಿ ಸಂಶಯದ ಹೊರಗೆ ಇಟ್ಟಿದ್ದೆ. ಬಹಳವಾದರೆ ಭವಾನಿಯನ್ನು ಚಿವುರಿಕೊಂಡವಳು ನೀನಾಗಿರಬಹುದು ಎಂದಿದ್ದೆ— ಮುಂದೆ ಅದೂ ತಪ್ಪಾಯಿತು. ಇರಲಿ. ಕೊನೆಗೆ ಬೋಧಿ ಬಂದನು. ಬಂದವನೆ ಒಂದೇ ಸವನೆ ಬೇರೆಯವರು ಆರೋಪಿ ಎಂದು ಸಿದ್ಧಮಾಡತೊಡಗಿದನು. ಅವನ ಸ್ವಭಾವ ನನಗೆ ಗೊತ್ತಿದ್ದುದರಿಂದ ಮೊದಲು ಆಶ್ಚರ್ಯವಾಗಿಲ್ಲ. ಆ ಮೇಲೆ, ನಾನು ಹಟ ತೊಟ್ಟ ಮೇಲೆ, ತನ್ನ ವಿಷಯವಾಗಿ ಹೇಳಿದನು. ಅದು ಎಂತಹ ಮಾತು! ದೊಡ್ಡ ತತ್ತ್ವ! ತನ್ನ ಬುದ್ಧಿಮತ್ತೆ, ತನ್ನ ಧೈರ್ಯ, ತಾನು ಕಾವಲಿದ್ದುದು— ಈ ಮೂರು

ಮಾತುಗಳಿಗಾಗಿ ತಾನು ನಿರ್ದೋಷಿ, ಎಂದು ! ನನಗೆ ಆಶ್ಚರ್ಯವಾಯಿತು. ಯಾವ ಸಂಗತಿಯನ್ನೂ ಮನಬಿಚ್ಚಿ ಹೇಳದೆ ಇವನು ಹೀಗೇಕೆ ಹಟಮಾಡುತ್ತಿದ್ದಾನೆ ? ಆಗಾಗ ಸಿಟ್ಟಿಗೆ ಬರುತ್ತಿದ್ದ. ತಟ್ಟನೆ ನನಗೊಂದು ಸಂಗತಿ ನೆನಪಾಯಿತು. ನಾನು ಎಲ್ಲ ಕೋಣೆಗಳನ್ನು ಶೋಧಿಸಬೇಕೆಂದು ಹೊರಟಾಗ ಅವನಿಗೆ ಹಾಗೆ ಸಿಟ್ಟು ಬಂದಿತ್ತು. ಯಾಕೆ ? ಇವನಿಗೇನಾದರೂ ಗೊತ್ತಿದೆಯೆ ? ಅದನ್ನು ಬಿಚ್ಚಿಡುವ ಯತ್ನದಲ್ಲಿದ್ದಾನೆಯೆ ?

'ಮುಂದೆ ಅವನ ಹರಟೆ ನಡೆದಾಗ ನಾನು ವಿಚಾರದಲ್ಲಿ ತೊಡಗಿದೆ. ಇವನ ಉದ್ದೇಶವೇನು ? ಆಗ ನನಗೆ ಸಂಶಯ ಬಂದಿತು. ಇನ್ನೊಬ್ಬರ ಮೇಲೆ ಆರೋಪ ಹೊರಿಸಿ, ತಾನು ನಿರ್ದೋಷಿ ( ಕಾರಣಗಳನ್ನು ಕೊಡದೆಯೆ ), ಎಂದು ಹೇಳಿಕೊಳ್ಳುವ ಈತನ ನಡತೆಯಲ್ಲಿ ಏನೊ ಸಂಶಯಾಸ್ಪದ ಇದೆ, ಎಂದುಕೊಂಡೆ. ಆಗ ಮೊದಲು ಅನಂತನಲ್ಲಿ ಸಂಶಯವಿದ್ದುದಕ್ಕೆ ಸರಿಯಾಗಿ ತಿಳಿಯದ ಕೆಲವು ಸಂಗತಿಗಳಿಗೆ ಒಂದು ಅರ್ಥವಾಗತೊಡಗಿತು. ಅನಂತನ ಕೋಣೆಯನ್ನು ಶೋಧಿಸುವಾಗ ಅಲ್ಲಿದ್ದ ಎಲ್ಲ ಪುಸ್ತಕಗಳನ್ನು ಸೂಕ್ಷ್ಮವಾಗಿ ನೋಡಿದೆ. ಯಾವ ತರದ ಪುಸ್ತಕಗಳಿವೆ, ಎಂಬುದು ನಿಮಗೆ ಗೊತ್ತಿದೆ. ಆದರೆ ನೋಡುವಾಗ ಯಾವ ಪುಸ್ತಕದ ಮೇಲೂ ಅನಂತನ ಹೆಸರೆ ಇಲ್ಲವೆಂದು — '

' ಇಲ್ಲ ? ಪ್ರತಿಯೊಂದರ ಮೇಲೆ ನಾನು ಬರೆದಿದ್ದೇನೆ ' ಎಂದು ಅನಂತನು ಆರ್ಭಟಿಸಿದನು.

' ನೀನು ಬರೆದಿರಬಹುದು. ಆದರೆ ಇನ್ನೊಮ್ಮೆ ಚೆನ್ನಾಗಿ ನೋಡು. ಎರಡನೆಯವರಿಗೆ ಕೊಟ್ಟ ಪುಸ್ತಕ ತಿರುಗಿ ಬಂದಾಗ ಅದನ್ನು ಚೆನ್ನಾಗಿ ನೋಡಿ ತೆಗೆದುಕೊಳ್ಳುವ ರೂಢಿಯನ್ನು ಮಾಡಿಕೊ. . ಅಂತೂ ನಾನು ನೋಡಿದಾಗ ಒಂದರಲ್ಲೂ ನಿನ್ನ ಹೆಸರಿರಲಿಲ್ಲ. ಇಷ್ಟೇ ಅಲ್ಲ— ಪ್ರತಿಯೊಂದರಲ್ಲೂ ಮೊದಲ ಹಾಳೆ ಹರಿದ ಚಿನ್ಹಗಳಿದ್ದುವು. ಯಾರು ಹರಿದಿರಬಹುದು ?— '

' ಬೋಧಿ — '

' ತಡೆ. ಅದನ್ನೆ ಹೇಳುವೆ ನಾನು. ಪ್ರತಿಯೊಂದನ್ನೂ ಹರಿಯುವುದೆಂದರೆ ಅವನ ಉದ್ದೇಶವೇನಾದರೂ ಇರಲೇಬೇಕಲ್ಲವೆ ? ಕೇವಲ ಹೆಸರನ್ನೆ ಹರಿಯುವುದೇಕೆ ? ಪುಸ್ತಕಗಳನ್ನು ಇಟ್ಟುಕೊಳ್ಳುವುದಕ್ಕಾಗಿ ಕೆಲವರು ಹಾಗೆ

ಮಾಡುವರು. ಆದರೆ ಬೋಧಿಯು ಪ್ರತಿಯೊಂದು ಪುಸ್ತಕವನ್ನು ತಿರುಗಿ ಒಪ್ಪಿಸಿದ್ದಾನೆ. ಕದಿಯುವ ಇಚ್ಛೆ ಇಲ್ಲದಿದ್ದರೆ ಹೆಸರಿನ ಹಾಳೆಯೊಂದನ್ನೆ ಹರಿಯುವುದೇಕೆ? ಅದರಲ್ಲಿ ವಿಶೇಷವೇನಿದೆ? ಅದರಲ್ಲಿ ಹೆಸರಿನ ಹೊರತಾಗಿ ಇದ್ದುದಾದರೂ ಏನು? ಅನಂತನ ಕೈ ಬರೆಹ! ಬೋಧಿಯು ಅನಂತನ ಕೈಬರಹವನ್ನು ಇಟ್ಟುಕೊಳ್ಳುವುದೇಕೆ? ಆಗ ನನಗೆ ನೆನಪಾಯಿತು. ಭವಾನಿಯು ಜೀವವಿಲ್ಲದ ಕೈಗಳಲ್ಲಿ ಅನಂತನ ಹಸ್ತಾಕ್ಷರದ ಕಾಗದಗಳನ್ನು ಅನಂತನು ತಾನು ಬರೆದಿಲ್ಲ, ಎಂದಿದ್ದಾನೆ! ಹಾಗಾದರೆ ಬೋಧಿ ಈ ಸಾಹಸವನ್ನು ಮಾಡಿರಬಹುದೆ?

‘ಒಮ್ಮೆ ಸಂಶಯ ಬಂದಿತೆಂದರೆ ಅನೇಕ ಸಂಗತಿಗಳು ಆ ಸಂಶಯಕ್ಕೆ ಹೊಂದಿಕೊಳ್ಳುವವು. ನನಗೂ ಹಾಗೆಯೆ ಆಯಿತು. ಬೋಧಿಯ ಕೋಣೆಯನ್ನು ಶೋಧಿಸುವಾಗ ಒಂದು ಸೋಜಿಗದ ಸಂಗತಿಯನ್ನು ಕಂಡಿದ್ದೆ. ಆಗ ಅದು ಬೋಧಿಯ ತಮಾಷೆ, ಎಂದು ತಿಳಿದಿದ್ದೆ. ನಾನು ಬಾಗಿಲನ್ನು ತೆರೆದು ಕೋಣೆಯೊಳಗೆ ಕಾಲಿಡುವಾಗಲೆ ಒಳಗೆ ಕುರ್ಚಿಯಲ್ಲಿ ಬೋಧಿಯೆ ಕುಳಿತದ್ದು ಕಾಣಿಸಿತು. ಇದೇನು ಸೋಜಿಗ ಎಂದೆ. ಯಾಕೆಂದರೆ ಬೋಧಿಯನ್ನು ನಿಮ್ಮೊಡನೆ ಬಿಟ್ಟು ನಾನೊಬ್ಬನೆ ಬಂದಿದ್ದೆ. ಸಮೀಪ ಹೋಗಿ ನೋಡಲಾಗಿ ನನ್ನ ಸೋಜಿಗ ಬಯಲಾಯಿತು. ನಿಜವಾಗಿ ಬೋಧಿ ಕುರ್ಚಿಯಲ್ಲಿ ಇರಲೇ ಇಲ್ಲ! ತನ್ನ ಟೊಪ್ಪಿಗೆಯನ್ನು ಹಾಗೆ ಚಮತ್ಕಾರವಾಗಿ ಇಟ್ಟಿದ್ದೂ ಹಿಂದಿನಿಂದ ನೋಡಿದವರಿಗೆ ತಾನು ಕೂತಂತೆಯೆ ಕಾಣುವಂತೆ! ಆಗ ನನಗೆ ತಮಾಷೆಯೆನಿಸಿದ್ದು ಈಗ ಬೇರೆ ಸ್ವರೂಪದಲ್ಲಿ ಕಂಡಿತು. ತಾನು ಕುರ್ಚಿಯಲ್ಲ ಕುಳಿತು ಕಾವಲಿನಲ್ಲಿ ತೊಡಗಿದ್ದನ್ನು ನಾನೇ ನೋಡಿರುವೆ, ಎಂದು ಅವನು ಹಟದಿಂದ ಹೇಳಿದ್ದರ ರಹಸ್ಯ ಈಗ ತಿಳಿಯಿತು. ನಾನು ನೋಡಿದಾಗ ಬೋಧಿಯು ಅಲ್ಲಿ ಇದ್ದಿಲ್ಲ, ಆ ಟೊಪ್ಪಿಗೆಯನ್ನು ನೋಡಿ ನಾನು ಮೋಸ ಹೋದೆ.

‘ಮೊದಲು ಇನ್ನೊಬ್ಬರ ಕೈ—ಬರೆಹದಲ್ಲಿ ಕಾಗದ ಬರೆದದ್ದು, ಕೊನೆಗೆ ಯಾರಿಗೂ ತಿಳಿಯದಂತೆ ಕೋಣೆಯಿಂದ ಹೊರಬೀಳಬಲ್ಲನು—ಇಷ್ಟೊಂದು ಸಿದ್ಧವಾದ ಮೇಲೆ ನನ್ನ ಸಂಶಯದ ಬಲೆಯೊಳಗಿಂದ ಅನಂತ ಪೂರ್ತಿಯಾಗಿ ಹೊರಬಿದ್ದ, ಬೋಧಿ ಪೂರ್ತಿಯಾಗಿ ಸಿಕ್ಕಿಕೊಂಡ. ಒಂದರ ಮೇಲೊಂದು ಅನೇಕ ಸಂಗತಿಗಳು ಬೋಧಿಯ ಸುತ್ತಲಿನ ಬಲೆಯನ್ನು ಬಿಗಿಯತೊಡಗಿ

ದುವು ಭವಾನಿಯು ಇನ್ನೂ ಏಳಲಿಲ್ಲ ಯಾಕೆ, ಎಂದು ನಾವು ಹೆದರಿದ್ದು ನೆನಪಿನಲ್ಲಿದೆಯಷ್ಟೆ? ಮುಂದೆ ನಾವೆಲ್ಲರೂ ಅವನ ಕೋಣೆಯ ಬಾಗಿಲನ್ನು ನೂಕತೊಡಗಿದಾಗ ಬೋಧಿಯು ನಮ್ಮನ್ನು ತಡೆದು ತಾನು ಕಿಟಿಕಿಯೊಳಗಿಂದ ನೋಡಿ ಬರುವ, ಎಂದು ಹೇಳಿದ ಸ್ಮರಣೆಯಲ್ಲಿದೆಯೆ.? ಬಾಗಿಲು ಈ ರೀತಿ ಮುಚ್ಚಿದಾಗ ಕಿಟಿಕಿಯು ತೆರೆದಿರಲೇಬೇಕೆಂಬ ವಿಚಾರ ಅವನೊಬ್ಬನಿಗೆಯೆ ಹೊಳೆಯಿತಲ್ಲ? ಇಷ್ಟೇ ಇದ್ದರೆ ಈ ಸಂಗತಿಗೆ ಮಹತ್ತ್ವವಿರುತ್ತಿರಲಿಲ್ಲ. ಆದರೆ ಸಂಶಯ ದೃಢವಾಗುವ ವೇಳೆಯಲ್ಲಿ ನನಗೆ ಈ ಸಂಗತಿ ಮಹತ್ತ್ವದ್ದೆನಿಸಿತು. ಕಿಟಿಕಿಯ ವಿಷಯವಾಗಿ ಬೋಧಿಗೆ ಮನೆ ಗೊತ್ತಿರಲೇಬೇಕೆಂದು ತಿಳಿದುಕೊಂಡೆ. ನನ್ನ ಸಂಶಯ ಸುಳ್ಳಾಗಲಿಲ್ಲ. ರಾತ್ರಿ ಊಟದ ಮುಂಚೆ ಕಿಟಿಕಿಯ ಹತ್ತಿರ ಕಾಲು ಕೆದರುವಾಗ ಸುಣ್ಣಗುಂಪಿನ ಕೆಳಗೆ ಅವಸರದಿಂದ ಬಚ್ಚಿಟ್ಟ ಈ ಎರಡು ವಸ್ತುಗಳನ್ನು ಕಂಡೆ. . ಅದರಲ್ಲಿ ಇದು ಉದ್ದವಾದ ಹಗ್ಗ. ಸಂಶಯಕ್ಕೆ ಇನ್ನೂ ಪುಟ ದೊರೆಯಿತು. ಆದರೆ—ಈ ಕಾಗದದಲ್ಲಿ ಇನ್ನೊಂದು ವಸ್ತುವಿದೆ, ಅದರ ಮಹತ್ತ್ವ ಮಾತ್ರ ಬಹಳೊತ್ತಿನ ವರೆಗೆ ತಿಳಿದಿರಲಿಲ್ಲ.’

ಮೋಹನನು ಒಂದು ನಿಮಿಷ ಮಾತನ್ನು ತಡೆದನು. ಆ ಕಾಗದದಲ್ಲಿ ಯಾವ ವಸ್ತುವಿದೆಯೊ, ಎಂಬ ಕುತೂಹಲ ಹುಕ್ಕಾರಲ್ಪಟ್ಟಿತು. ಆದರೆ ಮೋಹನನು ಅವರ ಕುತೂಹಲವನ್ನು ಕಂಡನೊ ಇಲ್ಲವೊ—ಬೇರೊಂದು ವಿಷಯವನ್ನೇ ಪ್ರಸ್ತಾಪಿಸಿದನು.

‘ಇಷ್ಟರಲ್ಲಿ ಒಂದು ವಿಚಾರ ಮಾತ್ರ ಸ್ಪಷ್ಟವಾಗಿದ್ದಿತು. ತಾನು ಮಾಡುವುದರ ಹೊಣೆಯನ್ನು ಅನಂತನ ಮೇಲೆ ಹೊರಿಸುವ ಹಂಚಿಕೆ ಅವನಿಗಿದ್ದಿತು. ಅನಂತ ಮತ್ತು ಭವಾನಿಯರಲ್ಲಿ ವೈಮನಸ್ಯವಿದ್ದುದನ್ನು ತನ್ನ ಕುಟಿಲ ಬುದ್ಧಿಯಿಂದ ಅವನು ತಿಳಿದುಕೊಂಡಿದ್ದ. ಅನಂತನು ತನ್ನ ಹೇಳಿಕೆಯಲ್ಲಿ ಒಂದು ಮಾತನ್ನು ಹೇಳಿದ್ದನು. ಅಂದಿನ ರಾತ್ರಿ ಅನಂತನು ಭವಾನಿಯ ಕೋಣೆಗೆ ಹೋಗಿದ್ದನು; ಇಬ್ಬರದೂ ಕುಸ್ತಿಯಾಯಿತು; ಕೆಳಗಿನ ಕೋಣೆಯಲ್ಲಿ ತನಗೆ ಆ ಸದ್ದು ಕೇಳಿಸಿತೆಂದು ಬೋಧಿಯೂ ಹೇಳಿದನು. ಆದುದರಿಂದ ಆದೇ ಸಮಯದಲ್ಲಿ ತನ್ನ ಯುಕ್ತಿಯನ್ನು ಸಾಧಿಸಿದರೆ, ಅನಂತನು ಕೋಣೆಯೊಳಗೆ ಕಡಿದಾಡಿದ್ದು ಹೊರಬೀಳಲೇಬೇಕಾಗುವುದರಿಂದ ಅನಂತನ

ಮೇಲೆಯೆ ಆರೋಪ ಬರುವುದು ಖಂಡಿತ, ಎಂದು ಬೋಧಿಯು ತನ್ನ ಕೊನೆಯ ಕೃತ್ಯವನ್ನು ಮಾಡಿದನು.’

ಇದುವರೆಗೆ ಸುಮ್ಮನೆ ಕೇಳುತ್ತ ಕುಳಿತಿದ್ದ ಭರಮನಿಗೆ ‘ಕೊನೆಯ ಕೃತ್ಯ’ ಎಂಬ ಮಾತನ್ನು ಕೇಳಿ ಅತ್ಯಂತ ಅಸಹ್ಯವೆನಿಸಿತು. ‘ಇಂಥಾ ಮನಸ್ಸಿನ ಮುಂದ ದೆವ್ವ ಯಾಕ ಗಂಟದ ತೊಸ್ಸಲ?’ ಎಂದನು. ಮೋಹನನು ನಕ್ಕನು, ‘ದೆವ್ವ’ ಎಂಬ ಶಬ್ದವನ್ನು ಕೇಳಿ. ತನ್ನದು ತನಗೆಯೆ ಆಶ್ಚರ್ಯವಾದಂತಾಗಿ ಅವನು ಮತ್ತೆ ಮಾತನಾಡತೊಡಗಿದನು:—‘ಇದುವರೆಗೆ ದೆವ್ವಿನ ಕತೆಯನ್ನೆ ನಾನು ನಿಮಗೆ ಹೇಳಲಿಲ್ಲವಲ್ಲ! ದಣಿವಿನಿಂದ ಬುದ್ಧಿಗೂ ಬಾಯಿಗೂ ನೇಳವಿಲ್ಲದಂತಾಗಿದೆ. ದೆವ್ವಿನ ಮಾತನ್ನು ಮುಂಚೆಯೆ ಹೇಳಬೇಕೆಂದಿದ್ದೆ. ಅದರಲ್ಲಿ ನನ್ನ ವಿಶ್ವಾಸವಿಲ್ಲ ಎಂದು ಅದಕ್ಕಾಗಿಯೆ ಪ್ರಾರಂಭ ಮಾಡಿದ್ದೆ, ಕೊನೆಗೂ ಅದನ್ನೆ ಮರೆತೆ! ಈ ಮನೆಯಲ್ಲಿ ದೆವ್ವವಿದೆ, ಎಂಬುದು ಗಾದೆಯ ಮಾತಾಗಿದೆ. ನನಗೆ ಮಾತ್ರ ಇನ್ನೂ ಕಾಣಿಸಿಲ್ಲ. ಒಮ್ಮೆ ಕಂಡಂತಾಗಿತ್ತು, ನಿಜ. ಆದರೆ ವಿಚಾರ ಮಾಡಿದ ಮೇಲೆ ಬೇರೊಂದು ಕಲ್ಪನೆಯೆ ಬಂದಿತು. ನಿಮ್ಮ ಸ್ಮರಣೆಯಲ್ಲಿ ಇದೆಯೊ ಇಲ್ಲವೊ? ಈ ನನ್ನ ಕಲ್ಪನೆಯನ್ನು ಭವಾನಿಯ ಎದುರು ಮಾತನಾಡಲು ಎರಡು ಸಲ ಪ್ರಯತ್ನ ಮಾಡಿದ್ದೆ. ಎರಡೂ ಸಲ ಮತ್ತೇನೊ ನಡುವೆ ಮಾತು ಹೊರಟು ನಾನು ಹೇಳಬೇಕೆಂದಿದ್ದ ವಾಕ್ಯವೆ ಮುಗಿದಿರಲಿಲ್ಲ. ಆದರೆ ಎರಡೂ ಸಲ ನಡುವೆ ಬೇರೊಂದು ಮಾತು ಹೊರಟುದು ಹೇಗೆ ಗೊತ್ತಿದೆಯೆ? ಎರಡೂ ಸಲ ಬೋಧಿಯೆ ಮಾತನ್ನು ಹಾರಿಸಿದನು! ಯಾಕೆ? ಬೋಧಿಗೆ ದೆವ್ವಿನಲ್ಲಿ ವಿಶ್ವಾಸ ಇರದಿದ್ದರೂ ಅದರ ವಿಷಯವಾಗಿ ಅವನು ನೇಕಿಂದಮೇಲೆ ಮಾತನಾಡುತ್ತಿದ್ದನು. ಯಾರಾದರೂ ದೆವ್ವಿನ ಸೋಗು ಹಾಕಿರಬಹುದು, ಎಂದು ಒಂದೆರಡು ಸಲ ಆಡಿದ್ದನು. ದೆವ್ವಿನ ಮೇಲೆ ವಿಶ್ವಾಸವಿರದಿದ್ದರೂ ದೆವ್ವಿನ ಸೋಗಿನ ಮೇಲೆಯಾದರೂ ವಿಶ್ವಾಸವಿದ್ದಿತು. ಹೀಗಿರುವಾಗ ನಾನು ಅದೇ ದೆವ್ವಿನ ವಿಷಯವಾಗಿ ಹೇಳಬೇಕೆಂಬ ಮಾತನ್ನು ಅವನು ಬುದ್ಧಿಪೂರ್ವಕ—ಇಲ್ಲವಾದರೆ ಎರಡೂ ಸಲ ಹಾಗೆ ಮಾಡುತ್ತಿರಲಿಲ್ಲ—ಹಾರಿಸಿದ್ದೇಕೆ?

‘ವಿಚಾರ ಮಾಡಿ ನೋಡಿದರೆ ಈ ಮನೆಯಲ್ಲಿ ದೆವ್ವಿನ ಮೊದಲ ಅನುಭವವು ಬೋಧಿಗೆ ಬಂದಿದೆ. ನಿನ್ನ ಲಕ್ಷ್ಯದಲ್ಲಿಯೆ, ಅನಂತಾ? ಒಂದು ದಿನ

ಸಾಯಂಕಾಲ ಈ ದೆವ್ವ ಮೊದಲು ಬೋಧಿಯು ಕೋಣೆಯಲ್ಲಿಯೆ ಕಾಣಿಸಿತು. ನೀನು ಹೊರಗೆ ಬಂದೆ, ಅವನು ಹೇಳಿದಂತೆ ಅವನ ಕೋಣೆಯೊಳಗೆ ನೋಡಿದೆ. ಆಗ ನಿನಗೂ ಕಾಣಿಸಿತು—ಈಗ ಮುಖ ಮುಚ್ಚಿ ಹೆದರ ಬೇಡ !— ಅಸ್ಪಷ್ಟವಾದ, ವಿಕಾರ ಮುಖದ ದೆವ್ವ ! ಯಾರಿಗಾದರೂ ಆಶ್ಚರ್ಯವಾಗುವಂತಿದೆ. ವಿಶ್ವಾಸವಿಲ್ಲದ ಬೋಧಿಗೆಯೆ ಮೊದಲು ಕಾಣಿಸಿಕೊಳ್ಳುವ ಮೂರ್ಖತನ ಮಾಡಿತೇಕೆ ಆ ದೆವ್ವ ? ತನಗೆ ವಿಶ್ವಾಸವಿಲ್ಲದಿದ್ದಾಗ ನಿನ್ನನ್ನೂ ಕರೆದು ಅದನ್ನು ತೋರಿಸಿದ್ದೇಕೆ ? ಇಬ್ಬರೂ ಒಂದೇ ವಸ್ತುವನ್ನು ನೋಡಿದಾಗ ಅದು ಸುಳ್ಳೆನಿಸುವುದಿಲ್ಲ. ಆದಕಾಗಿ ಬೋಧಿಯು ನಿನ್ನನ್ನು ಕರೆದನು. ನೀನು ಆ ದೆವ್ವಿನ ಪ್ರಮಾಣ ಪತ್ರಕ್ಕೆ ಸಹಿ ಹಾಕಿದೆ— '

' ನನಗೆ ನಿಜವಾಗಿ ಕಾಣಿಸಿ— '

' ತಡೆಯೊ, ಅನಂತಾ ! ಅವಸರ ಬೇಡ. ನಿನಗೆ ಏನೂ ಕಾಣಿಸಿಲ್ಲವೆಂದಿಲ್ಲ. ನನಗೂ ಕಾಣಿಸಿದೆ. ಆದರೆ ಹೆದರಿದಾಗ ಮುಖ ಮುಚ್ಚಿಕೊಳ್ಳುವುದೊಂದು ಕೆಟ್ಟ ಚಟವಿದೆ ನಿನಗೆ. ಆದಕಾಗಿ ನೀನು ಯಾವುದನ್ನೂ ಸರಿಯಾಗಿ ನೋಡುವುದಿಲ್ಲ. ನನಗೂ ಕಾಣಿಸಿತೆಂದು ಹೇಳಿದೆನಲ್ಲವೆ ? ಆದರೆ ತುಸುಹೊತ್ತಿನಲ್ಲಿ ನನಗೆ ಆ ದೆವ್ವಿನ ಗುರುತು ಹತ್ತಿದಂತಾಯಿತು. ಕೂಡಲೆ ನನಗೊಂದು ಕಲ್ಪನೆ ಹೊಳೆಯಿತು. ಕೊನೆಗೆ ನನ್ನ ಕಲ್ಪನೆಯೆ ನಿಜವಾಯಿತು. '

' ಅಂದರೆ ದೆವ್ವ ಇಲ್ಲ ಎನ್ನು— '

' ಅನಂತಾ, ನೋಡುವುದನ್ನು ಪೂರ್ತಿಯಾಗಿ ನೋಡದಿದ್ದರೆ ಕೇಳುವುದನ್ನಾದರೂ ಪೂರ್ತಿಯಾಗಿ ಕೇಳುವೆಯೊ ಇಲ್ಲವೊ ? ದೆವ್ವ ಇದೆ — ಅಥವಾ ಇದ್ದಿತು ಎನ್ನೋಣ. ಬೋಧಿ ಇರುವವರೆಗೂ ದೆವ್ವ ಇದ್ದಿತು, ಯಾಕೆಂದರೆ ಅದು ಅವನಿಗೆ ಬೇಕಾಗಿದ್ದಿತು. ಈಗ ಮಾತ್ರ ಇಲ್ಲ. ಮಾದರಿಗಾಗಿ ಸ್ವಲ್ಪನ್ನು ಮಾತ್ರ ನಾನು ಇಟ್ಟುಕೊಂಡಿದ್ದೇನೆ. ಅದು ಈ ಕಾಗದದಲ್ಲಿಯ ವಸ್ತು. ನೋಡುವಿಯಾ ? '

ಅನಂತನು ಹೆದರುವನೆಂದು ಮೋಹನನಿಗೆ ಮೊದಲೇ ಗೊತ್ತಿದ್ದಿತು; ಗಟ್ಟಿಯಾಗಿ ನಗುತ್ತಲೆ ಅವನು ಕಾಗದದಲ್ಲಿ ಸುತ್ತಿದ ವಸ್ತುವನ್ನು ಅವನ

ಮುಂದೆ ಹಿಡಿದನು. ಅನಂತನಿಗೆ ಧೈರ್ಯವಾಗಲಿಲ್ಲ. ಇಂದುಮತಿ ಮಾತನಾಡದೆ ಕೈಯನ್ನು ಮುಂದೆ ಚಾಚಿದಳು. ಕುತೂಹಲದಿಂದ ಭರಮಪ್ಪನೂ ಇಂದುಮತಿಯ ಕುರ್ಚಿಯ ಹಿಂದೆ ಬಂದು ನಿಂತನು.

ಮೋಹನನು ಕಾಗದವನ್ನು ಬಿಚ್ಚುವಾಗ ಅನಂತನು ಗಟ್ಟಿಯಾಗಿಯೆ ಕಣ್ಣು ಮುಚ್ಚಿಕೊಂಡನು. 'ಎಂತಹ ಹುಚ್ಚ ನೀನು, ಅನಂತಾ! ಇದು ನನ್ನ ಗುರುತಿನ ದೆವ್ವ, ಎಂದು ಹೇಳಿಲ್ಲವೆ? ನೋಡಿದೆ ಎಂದರೆ ನಿನಗೂ ಗುರುತು ಹತ್ತುವುದು. ಪಾಪ! ನಾನು ಈ ಮಾತನ್ನು ಭವಾನಿಗೆ ಮೊದಲೇ ಹೇಳಿದ್ದರೆ ಈ ಅನಾಹುತವೆ ಆಗುತ್ತಿರಲಿಲ್ಲ. ಆದರೆ ಈ ಕುಹಕ ಬೋಧಿಯು ಹೇಳಗೊಡಲಿಲ್ಲ. ತನ್ನ ಸಮಯವನ್ನು ಸಾಧಿಸಿಕೊಂಡನು. ನಿನ್ನೊಡನೆ ಕಾದಾಡಿ, ಕುಸ್ತಿಯಾಡಿ, ಹೆದರಿ, ಬೆದರಿ,ಭವಾನಿಯು ಗಾಬರಿಗೊಂಡ ಮನಃಸ್ಥಿತಿಯಲ್ಲಿದ್ದಾಗ ಬೋಧಿ ತನ್ನ ಸಮಯವನ್ನು ಸಾಧಿಸಿಕೊಂಡನು. ಹೆದರಿದಾಗ, ದೂರದಿಂದ ನೋಡಿದಾಗ ಇಂತಹ ದೆವ್ವಿನ ಗುರುತು ಹತ್ತುವುದು ಹೇಗೆ? ನೋಡು, ಇಂದುಮತಿ, ನಾನು ಹೇಳುವುದು ನಿಜವೊ ಅಲ್ಲವೊ ನೀನೇ ನೋಡು.'

ಮಾತು ಮುಗಿಯುವುದರಲ್ಲಿ ಕಾಗದವನ್ನು ಬಿಚ್ಚಿ ಅದರೊಳಗಿನ ವಸ್ತುವನ್ನು ಮೋಹನನು ಇಂದುಮತಿಯ ಕಣ್ಣೆದುರು ಹಿಡಿದನು. ಒಂದು ನಿಮಿಷ ಅದನ್ನು ನೋಡಿ ಇಂದುಮತಿ ಬೆಚ್ಚಿದಳು. ಚೀರಲು ಬಾಯಿಯನ್ನು ತೆರೆಯುವಾಗಲೆ ಹಿಂದೆ ನಿಂತ ಭರಮನು ಅದನ್ನು ನೋಡಿ ತಿರಸ್ಕಾರದಿಂದ 'ಎಲೆ ನಿನ! ನನ್ನದೇ ದೆವ್ವ ಐತಿ!' ಎಂದು ತಿರಸ್ಕಾರದಿಂದ ನುಡಿದು ಸರಿದನು. ಆಗ ಇಂದುಮತಿಗೆ ಹೊಳೆಯಿತು. ಒಮ್ಮೆ ಹಿಂದೆ ಸರಿದು ನಿಂತ ಭರಮನನ್ನು ನೋಡಿದಳು, ಮತ್ತೊಮ್ಮೆ ಮುಂದೆ ಹಿಡಿದ ವಸ್ತುವನ್ನು ನೋಡಿದಳು. ಪೂರ್ತಿಯಾಗಿ ತಿಳಿಯಿತು ಅವಳಿಗೆ. ಒಂದು ಭಾರ ಇಳಿದಂತಾಗಿ ಉಸುರ್ಗರೆದಳು. ನಕ್ಕಳು. 'ಈಗಲಾದರೂ ದೆವ್ವಿನ ಗುರುತು ಹತ್ತಿತೆ?' ಎಂದನು ಮೋಹನ. 'ಹತ್ತಿತು. ಆದರೆ ನಾನು ಇಷ್ಟು ವಿಕಾರವಾಗಿರುವೆನೆ?' ಎಂದು ಕೇಳಿದಳು. ಮೋಹನನು ತಲೆಯಲ್ಲಾಡಿಸುತ್ತ 'ಇದೊಂದು ಮಾದರಿಯ ಕನ್ನಡಿ. ಅದರಲ್ಲಿ ಪ್ರತಿಬಿಂಬ ಕಾಣುವದು ಹಾಗೆಯೆ. ಅನಂತನು ಮೊದಲದಿನ ಕೋಣೆಯಲ್ಲಿದ್ದಾಗ ಒಂದುತರದ ಚಿರಚಿರ ಸದ್ದಾಯಿತೆಂದನಲ್ಲ.

ಕನ್ನಡಿಯನ್ನು ನೆಲಕ್ಕೆ ತಿಕ್ಕಿ ಅದಕ್ಕೆ ಮೂಲೆ ಮೂಲೆಗಳನ್ನು ಮಾಡು ವಾಗಿನ ಸದ್ದು ಇದು' ಎಂದು ಮೋಹನನು ತನ್ನ ಕುರ್ಚಿಯಲ್ಲಿ ಕುಳಿತನು. ಒಮ್ಮೆಲೆ ಅವನಿಗೆ ತಡೆದ ನಿದ್ರೆ, ತಡೆದ ಮನಸ್ಸುಗಳಿಂದ ಅತ್ಯಂತ ದಣಿವು ಆದಂತಾಯಿತು. ಅನಂತನು ಈಗ ಮೆಲ್ಲನೆ ಕಣ್ತೆರೆದನು.

'ಅಂದರ ಈ ಮನೆಯೊಳಗೆ ಮೊದಲಿನಿಂದಲೂ ಭೂತ—' ಅನಂತನ ವಾಕ್ಯ ಮುಗಿಯಲಿಲ್ಲ.

'ಐತ್ರಿ, ದಣೇರ' ಎಂದು ನಡುವೆ ಮಾತನಾಡಿದನು ಭರಮಪ್ಪ. ಎಲ್ಲರೂ ಚಕಿತರಾಗಿ ತನ್ನನ್ನೆ ನೋಡಲು ಹಟದ ದನಿಯಿಂದ ಹೇಳಿದನು. 'ಈ ಮನೀಗ ಮುಂಚೆ ಬಂದವ ನಾ. ನನ್ನ ಕಾಲ್ಗುಣದಿಂದ ಎರಡು ಬಿಂವಾದ ಆಹುತಿಯಾಯ್ತು. ಅದಕೇ ಹೇಳಿದ್ದಾರಿ ಈ ಮನೀವಳಗ ಐತಿ— ಭರಮಪ್ಪನ ಭೂತ, ಅಂತ.'